ಕರ್ನಾಟಕ ಸರ್ಕಾರ

# ನುಡಿ ಕನ್ನಡ

## ತೃತೀಯ ಭಾಷಾ ಕನ್ನಡ ಪಠ್ಯಪುಸ್ತಕ

(ಪರಿಷ್ಕೃತ)

೯

## ಒಂಬತ್ತನೆಯ ತರಗತಿ

©KTBS Not to be republished

**ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)**
೧೦೦ ಅಡಿ ವರ್ತುಲ ರಸ್ತೆ, ಬನಶಂಕರಿ ೩ನೆಯ ಹಂತ
ಬೆಂಗಳೂರು – ೫೬೦ ೦೮೫

# ಪಠ್ಯಪುಸ್ತಕ ರಚನಾ ಸಮಿತಿ

**ಅಧ್ಯಕ್ಷರು**

**ಡಾ. ನರಸಿಂಹ ಮೂರ್ತಿ. ಆರ್,** ಕನ್ನಡ ಪ್ರಾಧ್ಯಾಪಕರು, ಶ್ರೀ ಗೋಕರ್ಣನಾಥೇಶ್ವರ ಕಾಲೇಜು, ಗಾಂಧಿನಗರ, ಮಂಗಳೂರು

**ಸದಸ್ಯರು**

**ಶ್ರೀಮತಿ ಮಂಗಳಾ. ಆರ್,** ಸಹಾಯಕ ಪ್ರಾಧ್ಯಾಪಕರು, ಪಿ.ಇ.ಎಸ್.ಶಿಕ್ಷಣ ಮಹಾವಿದ್ಯಾಲಯ, ಬೆಂಗಳೂರು

**ಡಾ.ಎಸ್. ವಿ. ಬಂಗಾರಿಮಠ,** ಸಹಶಿಕ್ಷಕರು, ಸರಕಾರಿ ಪ್ರೌಢಶಾಲೆ, ಕಿರೇಸೂರು, ಹುಬ್ಬಳ್ಳಿ ತಾ, ಧಾರವಾಡ ಜಿಲ್ಲೆ.

**ಶ್ರೀ ಕಾಂತರಾಜು. ಜಿ,** ಸಹಶಿಕ್ಷಕರು, ಶ್ರೀ ಆದಿಶಕ್ತಿ ಪ್ರೌಢಶಾಲೆ, ಹುಲಿಕೆರೆ, ಕಸಬ ಹೋಬಳಿ, ನಾಗಮಂಗಲ ತಾ.

**ಶ್ರೀಮತಿ ನಿರ್ಮಲಾ ಟಿ.ಕವಡಿಮಟ್ಟಿ,** ಸಹಶಿಕ್ಷಕರು, ಶ್ರೀ ವಿವೇಕಾನಂದ ಪ್ರೌಢಶಾಲೆ, ಅರವಿಂದನಗರ, ಹುಬ್ಬಳ್ಳಿ

**ಪರಿಶೀಲಕರು**

**ಶ್ರೀ ಎ.ಬಿ. ಚಂದ್ರಶೇಖರ್,** ಸಹಪ್ರಾಧ್ಯಾಪಕರು, ಶ್ರೀಆದಿಚುಂಚನಗಿರಿ ಶಿಕ್ಷಣಮಹಾವಿದ್ಯಾಲಯ, ಚನ್ನರಾಯಪಟ್ಟಣ ತಾ.

**ಕಲಾವಿದರು**

**ಶ್ರೀ ಎ.ಶಾಂತಪ್ಪ,** ಚಿತ್ರಕಲಾ ಶಿಕ್ಷಕರು, ಸಂತ ಅಂತೋಣಿ ಪ್ರೌಢಶಾಲೆ, ಗಾಯತ್ರಿಪುರಂ, ಮೈಸೂರು-೧೯

**ಸಂಪಾದಕ ಮಂಡಳಿ ಸದಸ್ಯರು**

**ಪ್ರೊ. ಚಂದ್ರಶೇಖರ ಪಾಟೀಲ್,** ಸಾಹಿತಿಗಳು, ಸಂಕ್ರಮಣ ಪ್ರಕಾಶನ, ಎಲಚೇನಹಳ್ಳಿ, ಜೆ.ಪಿ. ನಗರ, ಬೆಂಗಳೂರು-78

**ಡಾ. ಕೆ. ಮರುಳಸಿದ್ದಪ್ಪ,** ಸಾಹಿತಿಗಳು, ನಂ ೧೩೭, ೧೨ನೇ ಕ್ರಾಸ್, ಜೆ.ಪಿ. ನಗರ, ಬೆಂಗಳೂರು-೭೮

**ಪ್ರೊ. ಸಾ.ಶಿ. ಮರುಳಯ್ಯ,** ಸಾಹಿತಿಗಳು, ರಾಗಿಣಿ, ಹಂಪಿನಗರ, ಬೆಂಗಳೂರು.

**ಪ್ರೊ. ಅ.ರಾ.ಮಿತ್ರ,** ಸಾಹಿತಿಗಳು, ಕೆ.ಎಚ್.ಬಿ. ಕಾಲೋನಿ, ಯಲಹಂಕ, ಬೆಂಗಳೂರು.

**ಡಾ. ವಿಷ್ಣು ಎಂ. ಶಿಂದೆ,** ಸಹಾಯಕ ಪ್ರಾಧ್ಯಾಪಕರು, ಕರ್ನಾಟಕ ರಾಜ್ಯಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ.

**ಮುಖ್ಯ ಸಂಯೋಜಕರು**

**ಪ್ರೊ. ಜಿ.ಎಸ್.ಮುಡಂಬಡಿತ್ತಾಯ,** ಪಠ್ಯಕ್ರಮ ಪರಿಷ್ಕರಣೆ ಮತ್ತು ಪಠ್ಯ ಪುಸ್ತಕ ರಚನೆ, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು - ೫೬೦ ೦೮೫

**ಸಲಹೆ ಮತ್ತು ಮಾರ್ಗದರ್ಶನ**

**ಶ್ರೀ ನಾಗೇಂದ್ರಕುಮಾರ್,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು-೮೫

**ಶ್ರೀಮತಿ ಸಿ. ನಾಗಮಣಿ,** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು-೫೬೦ ೦೮೫

**ಕಾರ್ಯಕ್ರಮ ಸಂಯೋಜಕರು**

**ಶ್ರೀ ಪಾಂಡುರಂಗ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು-೮೫

©KTBS Not to be republished

# ಮುನ್ನುಡಿ

೨೦೦೫ನೇ ರಾಷ್ಟ್ರೀಯ ಪಠ್ಯಕ್ರಮದ ಆಧಾರದ ಮೇಲೆ ರಚಿತವಾದ ಕರ್ನಾಟಕ ರಾಜ್ಯ ಪಠ್ಯವಸ್ತುವಿನ ಆಧಾರದ ಮೇಲೆ ಕರ್ನಾಟಕ ಪಠ್ಯಪುಸ್ತಕ ಸಂಘವು ೨೦೧೦ ನೇ ಸಾಲಿನಿಂದ ಒಂದನೇ ತರಗತಿಯಿಂದ ಹತ್ತನೇ ತರಗತಿವರೆಗಿನ ಪಠ್ಯಪುಸ್ತಕಗಳ ರಚನಾ ಕಾರ್ಯದಲ್ಲಿ ತೊಡಗಿದೆ. ಒಟ್ಟು ೧೨ ಭಾಷೆಗಳಲ್ಲಿ ಭಾಷಾ ಪಠ್ಯಪುಸ್ತಕಗಳನ್ನು ಹಾಗೂ ಕೋರ್ ವಿಷಯಗಳನ್ನು ೭ ಮಾಧ್ಯಮಗಳಲ್ಲಿ ರಚನೆ ಮಾಡಲಾಗುತ್ತಿದೆ. ೧ ರಿಂದ ೫ ನೇ ತರಗತಿಯವರೆಗೆ ಪರಿಸರ ವಿಜ್ಞಾನ, ಗಣಿತ ಮತ್ತು ೬ ರಿಂದ ೧೦ ನೇ ತರಗತಿಯವರೆಗೆ ಕೋರ್ ವಿಷಯಗಳಾದ ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನಗಳಿರುತ್ತವೆ.

**೨೦೦೫ರ ರಾಷ್ಟ್ರೀಯ ಪಠ್ಯಕ್ರಮವು ಈ ಕೆಳಗಿನ ವೈಶಿಷ್ಟ್ಯಗಳನ್ನು ಹೊಂದಿದೆ.**

- ಕಲಿಕೆಯನ್ನು ಜೀವನದ ಅವಶ್ಯಕತೆಗಳೊಂದಿಗೆ ಜೋಡಿಸುವುದು
- ಕಂಠಪಾಠ ವಿಧಾನದಿಂದ ಕಲಿಕೆಯನ್ನು ಮುಕ್ತಗೊಳಿಸುವುದು
- ಪಠ್ಯಪುಸ್ತಕಗಳ ಹೊರತಾಗಿ ಪಠ್ಯಕ್ರಮವನ್ನು ಶ್ರೀಮಂತಗೊಳಿಸುವುದು
- ಜ್ಞಾನದ ಅಭಿವೃದ್ಧಿಗೆ ಕಲಿಕಾ ಅನುಭವಗಳನ್ನು ಬಳಸುವುದು
- ಭಾರತದ ಪ್ರಜಾಸತ್ತಾತ್ಮಕ ನೀತಿಯನ್ವಯ ಮಕ್ಕಳ ಅವಶ್ಯಕತೆಗಳಿಗೆ ತಕ್ಕಂತೆ ಸ್ಪಂದಿಸುವುದು
- ಶಿಕ್ಷಣವನ್ನು ಇಂದಿನ ಹಾಗೂ ಭವಿಷ್ಯದ ಜೀವನಾವಶ್ಯಕತೆಗಳಿಗೆ ಹೊಂದುವಂತೆ ಮಾಡುವುದು
- ವಿಷಯಗಳ ಮೇರೆಗಳನ್ನು ಮೀರಿ ಅವುಗಳಿಗೆ ಸಮಗ್ರದೃಷ್ಟಿಯ ಬೋಧನೆಯನ್ನು ಅಳವಡಿಸುವುದು
- ಶಾಲೆಯ ಹೊರಗಿನ ಬದುಕಿಗೆ ಜ್ಞಾನ ಸಂಯೋಜನೆ
- ಮಕ್ಕಳಿಂದಲೇ ಜ್ಞಾನವನ್ನು ಅಭಿವೃದ್ಧಿ ಪಡಿಸುವುದು.

ನೂತನ ಪಠ್ಯಪುಸ್ತಕಗಳಲ್ಲಿ ನೂತನ ವಿಧಾನಗಳಾದ ಅಂತರ್ಗತ ವಿಧಾನ (Integrated Approach), ರಚನಾತ್ಮಕ ವಿಧಾನ (Constructive Approach) ಹಾಗೂ ಸುರುಳಿಯಾಕಾರದ ವಿಧಾನ (Spiral Approach) ಗಳನ್ನು ಅಳವಡಿಸಲಾಗಿದೆ.

ಪಠ್ಯಪುಸ್ತಕಗಳ ವಿಷಯ ಹಾಗೂ ಅಭ್ಯಾಸಗಳು ವಿದ್ಯಾರ್ಥಿಗಳನ್ನು ಯೋಚನೆ ಮಾಡುವಂತೆ ಮಾಡಿ, ಚಟುವಟಿಕೆಗಳ ಮೂಲಕ ಜ್ಞಾನ ಹಾಗೂ ಸಾಮರ್ಥ್ಯಗಳನ್ನು ಪಡೆಯುವಂತೆ ಮಾಡುವ ಪ್ರಯತ್ನ ಮಾಡಲಾಗಿದೆ. ಪಠ್ಯವಸ್ತುಗಳೊಂದಿಗೆ ಅತ್ಯಂತ ಅವಶ್ಯಕ ಜೀವನ ಮೌಲ್ಯಗಳನ್ನು ಅಂತರ್ಗತವಾಗಿ ಬಳಸಲಾಗಿದೆ. ಈ ನೂತನ ಪಠ್ಯಪುಸ್ತಕಗಳು ಪರೀಕ್ಷಾ ದೃಷ್ಟಿಯಿಂದ ರಚಿತವಾಗಿಲ್ಲ. ಬದಲಾಗಿ ಅವುಗಳು ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿವೆ. ತನ್ಮೂಲಕ ಅವರನ್ನು ಸ್ವತಂತ್ರ ಭಾರತದ ಸ್ವಸ್ಥಸಮಾಜದ ಉತ್ತಮ ಪ್ರಜೆಗಳನ್ನಾಗಿ ಮಾಡುವ ಪ್ರಯತ್ನ ನಡೆದಿದೆ.

ಭಾಷಾಕಲಿಕೆಯಲ್ಲಿ ಅತ್ಯಂತ ಮುಖ್ಯ ಗುರಿಗಳಾದ ಆಲಿಸುವುದು, ಮಾತನಾಡುವುದು, ಓದುವುದು, ಬರೆಯುವುದು ಹಾಗೂ ಆಕರಗ್ರಂಥಗಳಿಂದ ವಿಷಯ ಸಂಗ್ರಹಣೆಯಂತಹ ಕ್ಷೇತ್ರವಾರು ಸಾಮರ್ಥ್ಯಗಳಿಗೆ ಒತ್ತು

©KTBS Not to be republished

ನೀಡಲಾಗಿದೆ. ಈ ಕೌಶಲ್ಯಗಳೊಂದಿಗೆ ಕ್ರಿಯಾತ್ಮಕ ವ್ಯಾಕರಣ, ಸೌಂದರ್ಯಪ್ರಜ್ಞೆ, ಪ್ರಶಂಸಾ ಮನೋಭಾವ, ಮೌಲ್ಯಗಳ ಸಂವರ್ಧನೆಗೆ ಅನುವು ಮಾಡಿಕೊಡಬೇಕು. ಈ ಸಾಮರ್ಥ್ಯ ಮಕ್ಕಳಲ್ಲಿ ಬಂದಾಗ ಅವರು ಪರೀಕ್ಷೆಗಳಿಗಾಗಿ ಕಂಠಪಾಠಕ್ಕೆ ಶರಣು ಹೋಗಬೇಕಾಗಿಲ್ಲ. ಪಠ್ಯಪುಸ್ತಕವು ಭಾಷಾ ಕೌಶಲ್ಯಗಳ ಸಂವರ್ಧನೆಗೆ ಒಂದು ಪೂರಕವಸ್ತುವೆಂದು ಪರಿಗಣಿಸಲು, ಮಕ್ಕಳ ಮನೋವೈಶಾಲ್ಯವನ್ನು ಬೆಳೆಸಲು ವಿಷಯಗಳಿಗೆ ಸಂಬಂಧಿಸಿದಂತೆ ಅನೇಕ ಚಟುವಟಿಕೆಗಳನ್ನು ಪಠ್ಯಪುಸ್ತಕದಲ್ಲಿ ಒದಗಿಸಲಾಗಿದೆ. ಮಿತ್ರರೊಂದಿಗೆ ಗುಂಪುಗಳಲ್ಲಿ ಚರ್ಚೆಯ ಮೂಲಕ ಅವರ ಅಭಿವ್ಯಕ್ತಿ ಹಾಗು ಸಂವಹನ ಕೌಶಲ್ಯಗಳ ಸಂವರ್ಧನೆಯೇ ಕಲಿಕೆ ಗುರಿಯೆಂದು ಅಂತಹ ಚಟುವಟಿಕೆಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಈ ರೀತಿಯ ಚಟುವಟಿಕೆಗಳು ಮಕ್ಕಳಲ್ಲಿ ಕಲಿಯುವ ಕಲೆ (learning to learn) ಹಾಗೂ ಕಲಿತುದುದನ್ನು ಜೀವನದಲ್ಲಿ ಅಳವಡಿಸುವ ಶಕ್ತಿ (learning to do) ಯನ್ನು ಮಕ್ಕಳಲ್ಲಿ ವೃದ್ಧಿಮಾಡುತ್ತದೆ.

ಕರ್ನಾಟಕ ಪಠ್ಯಪುಸ್ತಕ ಸಂಘವು ಈ ಪುಸ್ತಕದ ತಯಾರಿಯಲ್ಲಿ ಸಹಕರಿಸಿದ ಸಮಿತಿಯ ಅಧ್ಯಕ್ಷರಿಗೆ, ಸದಸ್ಯರಿಗೆ, ಕಲಾಕಾರರಿಗೆ, ಪರಿಶೀಲಕರಿಗೆ, ಸಂಯೋಜಕ ಅಧಿಕಾರಿಗಳಿಗೆ, ಶಿಕ್ಷಣ ಮಹಾವಿದ್ಯಾಲಯಗಳ ಸಿಬ್ಬಂದಿವರ್ಗದವರಿಗೆ, ಜಿಲ್ಲಾ ತರಬೇತಿ ಸಂಸ್ಥೆಗಳು, ರಾಜ್ಯ ಮಟ್ಟದ ಪಠ್ಯಪುಸ್ತಕ ಸಂಪಾದಕ ಮಂಡಳಿಯ ಸದಸ್ಯರಿಗೆ ಮತ್ತು ಪುಸ್ತಕವನ್ನು ಸುಂದರವಾಗಿ ಮುದ್ರಿಸಿದ ಮುದ್ರಕರಿಗೆ ತನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಕೆಲವು ಸಾಹಿತಿಗಳು ಹಾಗೂ ಕವಿಗಳ ಕೃತಿಗಳನ್ನು ಈ ಪಠ್ಯಪುಸ್ತಕಗಳಲ್ಲಿ ಅಳವಡಿಸಲಾಗಿದೆ. ಈ ವಿಚಾರದಲ್ಲಿ ತಮ್ಮ ಒಪ್ಪಿಗೆಯನ್ನು ನೀಡಿರುವ ಬರಹಗಾರರಿಗೆ ಹಾಗೂ ಕವಿಗಳಿಗೆ ಪಠ್ಯಪುಸ್ತಕ ಸಂಘ ಆಭಾರಿಯಗಿದೆ.

**ಪ್ರೊ. ಜಿ ಎಸ್ ಮುಡಂಬಡಿತ್ತಾಯ**
ಮುಖ್ಯ ಸಂಯೋಜಕರು
ಪಠ್ಯಪುಸ್ತಕ ಪರಿಷ್ಕರಣೆ ಹಾಗೂ ಪಠ್ಯಪುಸ್ತಕ ರಚನೆ
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು

**ನಾಗೇಂದ್ರಕುಮಾರ್**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು

©KTBS Not to be republished

## ಸಮಕ್ಷಮ

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ೨೦೦೫ ರ ಆಧಾರದಲ್ಲಿ ನೀಡಿರುವ ಸೂಚನೆಗಳಿಗೆ ಅನುಗುಣವಾಗಿ ಕನ್ನಡ ಮಾತೃಭಾಷೆಯಲ್ಲದವರೂ ಕನ್ನಡ ಕಲಿಯಲು ಅನುವಾಗುವಂತೆ ಒಂಬತ್ತನೆಯ ತರಗತಿಯ ತೃತೀಯ ಭಾಷಾ ವಿದ್ಯಾರ್ಥಿಗಳಿಗಾಗಿ ಈ ಪಠ್ಯವನ್ನು ರಚಿಸಲಾಗಿದೆ. ವಿದ್ಯಾರ್ಥಿಗಳಿಗೆ ಭಾಷಾ ಕಲಿಕೆಯ ಬಗ್ಗೆ ಆಸಕ್ತಿ ಮೂಡುವಂತೆ, ಭಾಷೆ, ಸಾಹಿತ್ಯ, ಸಂಸ್ಕೃತಿಯ ಬಗೆಗೆ ಸದಭಿರುಚಿ ನಿರ್ಮಾಣವನ್ನು ಗಮನದಲ್ಲಿರಿಸಿ, ವೈವಿಧ್ಯಮಯವಾದ ಪಠ್ಯಭಾಗಗಳನ್ನು ನೀಡಲಾಗಿದೆ. ಹೆಸರಾಂತ ಕವಿ–ಲೇಖಕರ ಕೃತಿಗಳೊಂದಿಗೆ ಪಠ್ಯಕ್ಕಾಗಿಯೇ ಸಂಪಾದಕ ಮಂಡಳಿ ರಚಿಸಿದ ಒಂದೆರಡು ತುಣುಕುಗಳನ್ನೂ ನೀಡಲಾಗಿದೆ. ವ್ಯಾಕರಣವನ್ನು ಕ್ರಿಯಾತ್ಮಕವಾಗಿ ಕಲಿಸಲು ಅನುಕೂಲವಾಗುವಂತೆ ಅಭ್ಯಾಸ ಭಾಗಗಳನ್ನು ನೀಡಲಾಗಿದೆ. ಕಲಿಸುವ ಅಧ್ಯಾಪಕರಿಗೂ, ಕಲಿಯುವ ವಿದ್ಯಾರ್ಥಿಗಳಿಗೂ ಪಠ್ಯ ಉಪಯುಕ್ತವೆನಿಸಿದರೆ ನಮ್ಮ ಪ್ರಯತ್ನ ಸಾರ್ಥಕವಾಗುತ್ತದೆ.

ಪಠ್ಯಪುಸ್ತಕ ರಚನೆಗೆ ನಮಗೆ ಅವಕಾಶ ನೀಡಿ ಪ್ರೋತ್ಸಾಹಿಸಿದ ಪಠ್ಯಪುಸ್ತಕ ಸಂಘದ ವ್ಯವಸ್ಥಾಪಕ ನಿರ್ದೇಶಕರಿಗೂ ಹಾಗೂ ಅಧಿಕಾರ ವರ್ಗದವರಿಗೂ, ವಿಶೇಷವಾಗಿ ಸಂಯೋಜಕರಾದ ಶ್ರೀ ಮುಡಂಬಡಿತ್ತಾಯ ಮತ್ತು ಹಿರಿಯ ಸಹಾಯಕ ನಿರ್ದೇಶಕರಾದ ಶ್ರೀ ಪಾಂಡುರಂಗ ಅವರಿಗೂ ನಮ್ಮ ಕೃತಜ್ಞತೆಗಳು. ಪಠ್ಯಪುಸ್ತಕ ರಚನಾ ಕಾರ್ಯದಲ್ಲಿ ನನ್ನೊಡನೆ ಸರ್ವ ರೀತಿಯಲ್ಲೂ ಸಹಕರಿಸಿದ ಸಮಿತಿಯ ಎಲ್ಲ ಸದಸ್ಯರಿಗೂ, ಸೂಕ್ತ ಚಿತ್ರಗಳನ್ನು ರಚಿಸಿಕೊಟ್ಟ ಕಲಾವಿದರಿಗೂ ಮತ್ತು ಪರಿಶೀಲಕರಿಗೂ ನನ್ನ ವೈಯಕ್ತಿಕ ಧನ್ಯವಾದಗಳು.

**ಡಾ. ಆರ್. ನರಸಿಂಹಮೂರ್ತಿ**

ಅಧ್ಯಕ್ಷರು

ನುಡಿ ಕನ್ನಡ – ೯

ಪಠ್ಯ ಪುಸ್ತಕ ರಚನಾ ಸಮಿತಿ

©KTBS Not to be republished

## ಪಠ್ಯಪುಸ್ತಕ ಪರಿಷ್ಕರಣ ಸಮಿತಿಗಳ ವಿವರ

**ಸರ್ವಾಧ್ಯಕ್ಷರು :**

**ಪ್ರೊ. ಬರಗೂರು ರಾಮಚಂದ್ರಪ್ಪ.** ರಾಜ್ಯಪಠ್ಯಪುಸ್ತಕ ಪರಿಷ್ಕರಣಸಮಿತಿ, ಕರ್ನಾಟಕ ಪಠ್ಯಪುಸ್ತಕಸಂಘ(ರಿ) ಬೆಂಗಳೂರು-೮೫

## ಪರಿಷ್ಕರಣ ಸಮಿತಿ

**ಅಧ್ಯಕ್ಷರು :**

**ಪ್ರೊ. ರಹಮತ್ ತರೀಕೆರೆ.** ಪ್ರಾಧ್ಯಾಪಕರು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಹೊಸಪೇಟೆ ತಾ. ಬಳ್ಳಾರಿ ಜಿಲ್ಲೆ

**ಸದಸ್ಯರು :**

**ಪ್ರೊ. ರುದ್ರಮುನಿ ಹಿರೇಮಠ.** ಸಹಪ್ರಾಧ್ಯಾಪಕರು, ಕೆ.ಎಸ್.ಎಸ್. ಶಿಕ್ಷಣ ಮಹಾವಿದ್ಯಾಲಯ, ಸರಸ್ವತಿ ಬಡಾವಣೆ, ದಾವಣಗೆರೆ.

**ಶ್ರೀ. ಮಹದೇವಸ್ವಾಮಿ.ಬಿ.** ಕನ್ನಡ ಅಧ್ಯಾಪಕರು, ಎ.ಪಿ.ಎಸ್. ಗ್ರಾಮಾಂತರ ಪ್ರೌಢಶಾಲೆ, ಸೋಮನಹಳ್ಳಿ, ಬೆಂಗಳೂರು-೮೨

**ಶ್ರೀಮತಿ ಪದ್ಮ,** ಎ. ಕನ್ನಡ ಅಧ್ಯಾಪಕಿ, ಎಂ.ಎಲ್.ಎ ಪ್ರೌಢಶಾಲೆ, ೧೫ನೇ ಕ್ರಾಸ್, ಮಲ್ಲೇಶ್ವರಂ ಬೆಂಗಳೂರು-೦೩

**ಶ್ರೀ. ರಾಜುಶೆಟ್ಟಿ,** ಕನ್ನಡ ಅಧ್ಯಾಪಕರು, ಸರ್ಕಾರಿ ಪ.ಪೂ.ಕಾಲೇಜು, (ಪ್ರೌಢಶಾಲೆ ವಿಭಾಗ)ಹೊಮ್ಮರಹಳ್ಳಿ, ಹೆಚ್.ಡಿ.ಕೋಟೆ, ತಾ,

**ಶ್ರೀ. ಜವರೇಗೌಡ.** ಕನ್ನಡ ಅಧ್ಯಾಪಕರು, ಶ್ರೀ ವಿದ್ಯಾಗಣಪತಿ ಪ್ರೌಢಶಾಲೆ, ಬಿದರಕೋಟೆ, ಮದ್ದೂರು ತಾ, ಮಂಡ್ಯ ಜಿಲ್ಲೆ.

**ಕಲಾವಿದರು:**

**ಶ್ರೀ. ವೆಂಕಟೇಶ್.** ಚಿತ್ರಕಲಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಉರಮಾರ ಕೆಸಲಗೆರೆ, ಮಂಡ್ಯ ದಕ್ಷಿಣ ತಾಲ್ಲೂಕು,

## ಉನ್ನತ ಪರಿಶೀಲನ ಸಮಿತಿ

**ಡಾ. ಎಚ್.ಎಸ್. ರಾಘವೇಂದ್ರರಾವ್,** ನಿವೃತ್ತ ಪ್ರಾಧ್ಯಾಪಕರು, ನಂ.೭, ೧೫ನೇ ಕ್ರಾಸ್, ಜೆ.ಪಿ.ನಗರ, ಬೆಂಗಳೂರು-೭೮

**ಡಾ. ಜಿ.ಆರ್.ತಿಪ್ಪೇಸ್ವಾಮಿ,** ನಿವೃತ್ತ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮಾನಸ ಗಂಗೋತ್ರಿ , ಮೈಸೂರು-೬

**ಡಾ. ಸೈಯದ್ ಜಮೀರ್‌ಉಲ್ಲಾಷರೀಫ್,** ನಿವೃತ್ತ ಪ್ರಾಂಶುಪಾಲರು, ಭಟ್ಕಳ, ಉತ್ತರ ಕನ್ನಡ ಜಿಲ್ಲೆ.

**ಡಾ. ಯಲ್ಲಪ್ಪ ಹಿಮ್ಮಡಿ,** ಎಸ್.ಪಿ.ಎಂ. ಕಲಾ ಮತ್ತು ವಾಣಿಜ್ಯ ಕಾಲೇಜು, ರಾಯಬಾಗ, ಬೆಳಗಾವಿ ಜಿಲ್ಲೆ.

**ಡಾ. ಕಲಾವತಿ,** ಕನ್ನಡ ಅಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಳ್ಳಾರಿ.

**ಡಾ. ಪ್ರಶಾಂತ್ ನಾಯಕ್,** ಪ್ರಾಧ್ಯಾಪಕರು, ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾನಿಲಯ ಶಂಕರಘಟ್ಟ, ಶಿವಮೊಗ್ಗ.

**ಡಾ. ಗೀತಾವಸಂತ,** ಸಹಪ್ರಾಧ್ಯಾಪಕರು, ಕನ್ನಡ ವಿಭಾಗ ತುಮಕೂರು ವಿಶ್ವವಿದ್ಯಾಲಯ ತುಮಕೂರು.

**ಡಾ. ಸತ್ಯನಾರಾಯಣ,** ಎಚ್.ಎಸ್. ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವಕಾಲೇಜು, ಬಸವನಗುಡಿ, ಬೆಂಗಳೂರು.

**ಸಲಹೆ ಮತ್ತು ಮಾರ್ಗದರ್ಶನ :**

**ಶ್ರೀ. ನರಸಿಂಹಯ್ಯ.** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ) ಬೆಂಗಳೂರು-೮೫

**ಶ್ರೀಮತಿ ಸಿ. ನಾಗಮಣಿ,** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ) ಬೆಂಗಳೂರು-೮೫

**ಕಾರ್ಯಕ್ರಮ ಸಂಯೋಜಕರು :**

**ಶ್ರೀ ಪಾಂಡುರಂಗ,** ಹಿರಿಯ ಸಹಾಯಕ ನಿರ್ದೇಶಕರು ಕರ್ನಾಟಕ ಪಠ್ಯಪುಸ್ತಕ ಸಂಘ(ರಿ) ಬೆಂಗಳೂರು-೮೫

©KTBS Not to be republished

# ಪರಿಷ್ಕರಣೆ ಕುರಿತು

ಒಂದರಿಂದ ಹತ್ತನೇ ತರಗತಿಯ ಪಠ್ಯಪುಸ್ತಕಗಳ ಬಗ್ಗೆ ಪ್ರಕಟಗೊಂಡ ಸಾರ್ವಜನಿಕ ಅಭಿಪ್ರಾಯಗಳನ್ನು ಗಮನಿಸಿ ಮಾನ್ಯ ಮುಖ್ಯಮಂತ್ರಿಯವರೂ ಅರ್ಥಸಚಿವರೂ ಆಗಿರುವ ಶ್ರೀ ಸಿದ್ದರಾಮಯ್ಯನವರು ತಮ್ಮ ೨೦೧೪–೧೫ ರ ಬಜೆಟ್‌ನಲ್ಲಿ ತಜ್ಞರ ಸಮಿತಿಯನ್ನು ರಚಿಸುವ ಘೋಷಣೆ ಮಾಡಿದರು. ತಜ್ಞರು ಅನುಸರಿಸಬೇಕಾದ ಮೂಲ ಆಶಯವನ್ನು ಹೀಗೆ ಹೇಳಿದರು: "ಪಠ್ಯಪುಸ್ತಕಗಳನ್ನು ಸಾಮಾಜಿಕ ಸಾಮರಸ್ಯ, ನೈತಿಕಮೌಲ್ಯಗಳು, ವ್ಯಕ್ತಿತ್ವವಿಕಸನ, ವೈಜ್ಞಾನಿಕ ಮತ್ತು ವೈಚಾರಿಕ ಮನೋಭಾವ, ಜಾತ್ಯತೀತತೆ ಮತ್ತು ರಾಷ್ಟ್ರೀಯ ಬದ್ಧತೆಗಳಿಗೆ ಅನುವಾಗುವಂತೆ ತಜ್ಞರ ಸಮಿತಿಯನ್ನು ಪುನರ್ ರಚಿಸಲಾಗುವುದು" ಇದು ಬಜೆಟ್ ಭಾಷಣದಲ್ಲಿ ಸಾದರಪಡಿಸಿದ ಆಶಯ.

ಆನಂತರ ಶಿಕ್ಷಣ ಇಲಾಖೆಯು ಒಂದರಿಂದ ಹತ್ತನೇ ತರಗತಿಯವರೆಗಿನ ಪಠ್ಯಪುಸ್ತಕಗಳ ಪರಿಷ್ಕರಣೆಗಾಗಿ ೨೭ ಸಮಿತಿಗಳನ್ನು ರಚಿಸಿ ದಿನಾಂಕ: ೨೪.೧೧.೨೦೧೪ ರಂದು ಆದೇಶಹೊರಡಿಸಿತು. ಈ ಸಮಿತಿಗಳು ವಿಷಯವಾರು ಮತ್ತು ತರಗತಿವಾರು ಮಾನದಂಡಕ್ಕನುಗುಣವಾಗಿ ರಚಿತವಾದವು. ವಿವಿಧ ಪಠ್ಯವಿಷಯಗಳಿಗೆ ಸಂಬಂಧಿಸಿದ ತಜ್ಞರು, ಅಧ್ಯಾಪಕರು ಈ ಸಮಿತಿಗಳಲ್ಲಿದ್ದಾರೆ. ಈಗಾಗಲೇ ಲಿಖಿತವಾಗಿ ಬಂದಿರುವ ಅನೇಕ ಆಕ್ಷೇಪಗಳು ಮತ್ತು ವಿಶ್ಲೇಷಣೆಗಳನ್ನು ಪರಿಶೀಲಿಸಿ, ತಪ್ಪು ಒಪ್ಪುಗಳ ಬಗ್ಗೆ ನಿರ್ಣಯಿಸಿ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ ಹೊಣೆಹೊತ್ತ ಈ ಸಮಿತಿಗಳಿಗೆ 'ಅಗತ್ಯವಿದ್ದಲ್ಲಿ ಪಠ್ಯವಸ್ತುವನ್ನು ಪರಿಷ್ಕರಿಸಿ ನಂತರ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ' ಸ್ವಾತಂತ್ರ್ಯವನ್ನು ೨೪.೧೧.೨೦೧೪ರ ಆದೇಶದಲ್ಲೇ ನೀಡಲಾಗಿತ್ತು. ಆನಂತರ ೧೯.೦೯.೨೦೧೫ ರಂದು ಹೊಸ ಆದೇಶ ಹೊರಡಿಸಿ 'ಅಗತ್ಯವಿದ್ದಲ್ಲಿ ಪುನರ್ ರಚಿಸುವ' ಸ್ವಾತಂತ್ರ್ಯವನ್ನು ನೀಡಲಾಯಿತು. ಹೀಗೆ ಸಮಗ್ರ ಪರಿಷ್ಕರಣೆಗೊಂಡ ಪಠ್ಯಪುಸ್ತಕಗಳನ್ನು ೨೦೧೬–೧೭ ರ ಬದಲು ೨೦೧೭–೧೮ನೇ ಶೈಕ್ಷಣಿಕ ವರ್ಷದಲ್ಲಿ ಜಾರಿಗೊಳಿಸಲಾಗುವುದೆಂದು ಇದೇ ಆದೇಶದಲ್ಲಿ ತಿಳಿಸಲಾಯಿತು.

ಅನೇಕ ವ್ಯಕ್ತಿಗಳೂ ಸಂಘಟನೆಗಳೂ ಸ್ವಯಂಪ್ರೇರಿತರಾಗಿ ಪಠ್ಯಪುಸ್ತಕಗಳ ಮಾಹಿತಿದೋಷ, ಆಶಯದೋಷಗಳನ್ನು ಪಟ್ಟಿಮಾಡಿ ಶಿಕ್ಷಣ ಸಚಿವರಿಗೆ, ಪಠ್ಯಪುಸ್ತಕ ಸಂಘಕ್ಕೆ ಕಳುಹಿಸಿದ್ದರು. ಅವುಗಳ ಪರಿಶೀಲನೆಮಾಡಿದ್ದಲ್ಲದೆ, ಸಮಿತಿಗಳಾಚೆಗೆ ಅನೇಕ ಸಂವಾದಗಳನ್ನು ಏರ್ಪಡಿಸಿ ವಿಚಾರ ವಿನಿಮಯ ಮಾಡಿಕೊಂಡಿದ್ದೇವೆ. ಪ್ರಾಥಮಿಕ ಮತ್ತು ಪ್ರೌಢಶಾಲಾ ಅಧ್ಯಾಪಕರ ಸಂಘಗಳ ಜೊತೆ ಚರ್ಚಿಸಿದ್ದಲ್ಲದೆ ಪ್ರಶ್ನಾವಳಿ ಸಿದ್ಧಪಡಿಸಿ ಅಧ್ಯಾಪಕರಿಗೆ ಕಳಿಸಿ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ. ಅಧ್ಯಾಪಕರು, ವಿಷಯಪರಿವೀಕ್ಷಕರು ಮತ್ತು ಡಯಟ್ ಪ್ರಾಂಶುಪಾಲರ ಪ್ರತ್ಯೇಕ ಸಭೆಗಳನ್ನು ನಡೆಸಿ ವಿಶ್ಲೇಷಣಾತ್ಮಕ ಅಭಿಮತಗಳನ್ನು ಪಡೆಯಲಾಗಿದೆ. ವಿಜ್ಞಾನ, ಸಮಾಜವಿಜ್ಞಾನ, ಗಣಿತ, ಭಾಷೆ ಸಾಹಿತ್ಯಗಳಿಗೆ ಸಂಬಂಧಿಸಿದ ತಜ್ಞರಿಗೆ ಮೊದಲೇ ಪಠ್ಯಪುಸ್ತಕಗಳನ್ನು ಕಳುಹಿಸಿ ಆನಂತರ ಸಭೆ ನಡೆಸಿ ಚರ್ಚಿಸಲಾಗಿದೆ. ಮಹಿಳಾ ಸಂಘಟನೆ ಹಾಗೂ ವಿಜ್ಞಾನ ಸಂಬಂಧಿ ಸಂಸ್ಥೆಗಳನ್ನು ಆಹ್ವಾನಿಸಿ ಚಿಂತನೆ ನಡೆಸಲಾಗಿದೆ. ಹೀಗೆ ಎಲ್ಲಾ ಮೂಲಗಳಿಂದ ಪಡೆದ ಅರಿವಿನ ಆಧಾರದ ಮೇಲೆ ಪಠ್ಯಪುಸ್ತಕಗಳನ್ನು ಅಗತ್ಯವಿದ್ದಕಡೆ ಪರಿಷ್ಕರಿಸಲಾಗಿದೆ.

ಬಹುಮುಖ್ಯವಾದ ಇನ್ನೊಂದು ಸಂಗತಿಯನ್ನು ಇಲ್ಲಿ ಹೇಳಬೇಕು. ಕೇಂದ್ರೀಯ ಶಾಲಾ (ಎನ್.ಸಿ.ಇ.ಆರ್.ಟಿ) ಪಠ್ಯಪುಸ್ತಕಗಳ ಜೊತೆ ರಾಜ್ಯದ ಪಠ್ಯಪುಸ್ತಕಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿ ಸಲಹೆಗಳನ್ನು ನೀಡಲು ವಿಜ್ಞಾನ, ಗಣಿತ ಮತ್ತು ಸಮಾಜವಿಜ್ಞಾನಕ್ಕೆ ಸಂಬಂಧಿಸಿದಂತೆ ತಜ್ಞರ ಮೂರು

© KTBS Not to be republished

ಸಮಿತಿಗಳನ್ನು ರಚಿಸಲಾಯಿತು. ಈ ಸಮಿತಿಗಳು ನೀಡಿದ ತೌಲನಿಕ ವಿಶ್ಲೇಷಣೆ ಮತ್ತು ಸಲಹೆಗಳನ್ನು ಆಧರಿಸಿ ರಾಜ್ಯ ಪಠ್ಯಪುಸ್ತಕಗಳ ಗುಣಮಟ್ಟವನ್ನು ಹೆಚ್ಚಿಸಲಾಗಿದೆ. ಕೇಂದ್ರೀಯ ಶಾಲಾ ಪಠ್ಯಪುಸ್ತಕಗಳಿಗಿಂತ ನಮ್ಮ ರಾಜ್ಯದ ಪಠ್ಯಪುಸ್ತಕಗಳ ಗುಣಮಟ್ಟ ಕಡಿಮೆಯಾಗದಂತೆ ಕಾಯ್ದುಕೊಳ್ಳಲಾಗಿದೆ. ಜೊತೆಗೆ ಆಂಧ್ರ, ತಮಿಳುನಾಡು, ಮಹಾರಾಷ್ಟ್ರಗಳ ಪಠ್ಯಪುಸ್ತಕಗಳ ಜೊತೆ ನಮ್ಮ ಪಠ್ಯಪುಸ್ತಕಗಳನ್ನು ಪರಿಶೀಲಿಸಲಾಗಿದೆ.

ಇನ್ನೊಂದು ಸ್ಪಷ್ಟನೆಯನ್ನು ನೀಡಲು ಬಯಸುತ್ತೇನೆ. ನಮ್ಮ ಸಮಿತಿಗಳು ಮಾಡಿರುವುದು ಪರಿಷ್ಕರಣೆಯೇ ಹೊರತು ಪಠ್ಯಪುಸ್ತಕಗಳ ಸಮಗ್ರ ರಚನೆಯಲ್ಲ. ಆದ್ದರಿಂದ ಈಗಾಗಲೇ ರಚಿತವಾಗಿರುವ ಪಠ್ಯಪುಸ್ತಕಗಳ ಸ್ವರೂಪಕ್ಕೆ ಎಲ್ಲಿಯೂ ಧಕ್ಕೆಯುಂಟುಮಾಡಿಲ್ಲ. ಲಿಂಗತ್ವ ಸಮಾನತೆ, ಪ್ರಾದೇಶಿಕ ಪ್ರಾತಿನಿಧ್ಯ, ರಾಷ್ಟ್ರೀಯ ಸಮಗ್ರತೆ, ಸಮಾನತೆ, ಸಾಮಾಜಿಕ ಸಾಮರಸ್ಯಗಳ ಹಿನ್ನೆಲೆಯಲ್ಲಿ ಕೆಲವು ಪರಿಷ್ಕರಣೆಗಳು ನಡೆದಿವೆ. ಹೀಗೆ ಪರಿಷ್ಕರಿಸುವಾಗ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮತ್ತು ರಾಜ್ಯ ಪಠ್ಯಕ್ರಮ ಚೌಕಟ್ಟುಗಳನ್ನು ಮೀರಿಲ್ಲವೆಂದು ತಿಳಿಸಬಯಸುತ್ತೇವೆ: ಜೊತೆಗೆ ನಮ್ಮ ಸಂವಿಧಾನದ ಆಶಯಗಳನ್ನು ಅನುಸರಿಸಲಾಗಿದೆ. ಸಮಿತಿಗಳು ಮಾಡಿದ ಪರಿಷ್ಕರಣೆಯನ್ನು ಮತ್ತೊಮ್ಮೆ ಪರಿಶೀಲಿಸಲು ವಿಷಯವಾರು ಉನ್ನತ ಪರಿಶೀಲನ ಸಮಿತಿಗಳನ್ನು ರಚಿಸಿ ಅಭಿಪ್ರಾಯಪಡೆದು ಅಳವಡಿಸಲಾಗಿದೆ.

ಹೀಗೆ ಕ್ರಮಬದ್ಧವಾಗಿ ನಡೆದ ಕೆಲಸಕ್ಕೆ ತಮ್ಮನ್ನು ತಾವು ಸಂಪೂರ್ಣ ತೊಡಗಿಸಿಕೊಂಡ ೨೭ ಸಮಿತಿಗಳ ಅಧ್ಯಕ್ಷರು ಮತ್ತು ಸದಸ್ಯರನ್ನು ಹಾಗೂ ಉನ್ನತ ಪರಿಶೀಲನಾ ಸಮಿತಿಯ ಸಮಸ್ತರನ್ನು ಕೃತಜ್ಞತೆಯಿಂದ ನೆನೆಯುತ್ತೇವೆ. ಅಂತೆಯೇ ಸಮಿತಿಗಳ ಕೆಲಸ ಸುಗಮವಾಗಿ ನಡೆಯುವಂತೆ ವ್ಯವಸ್ಥೆಮಾಡಲು ಕಾರ್ಯಕ್ರಮ ಅಧಿಕಾರಿಗಳಾಗಿ ನಿಷ್ಠೆಯಿಂದ ದುಡಿದ ಪಠ್ಯಪುಸ್ತಕ ಸಂಘದ ಎಲ್ಲಾ ಅಧಿಕಾರಿಗಳನ್ನೂ ನೆನೆಯುತ್ತೇವೆ. ಸಹಕರಿಸಿದ ಸಿಬ್ಬಂದಿಗೂ ನಮ್ಮ ವಂದನೆಗಳು. ಅಭಿಪ್ರಾಯ ನೀಡಿ ಸಹಕರಿಸಿದ ಸರ್ವ ಸಂಘಟನೆಗಳು ಮತ್ತು ತಜ್ಞರಿಗೆ ಧನ್ಯವಾದಗಳು.

(ನರಸಿಂಹಯ್ಯ)
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)
ಬೆಂಗಳೂರು-೮೫

(ಪ್ರೊ. ಬರಗೂರು ರಾಮಚಂದ್ರಪ್ಪ)
ಸರ್ವಾಧ್ಯಕ್ಷರು
ರಾಜ್ಯ ಪಠ್ಯಪುಸ್ತಕ ಪರಿಷ್ಕರಣ ಸಮಿತಿ
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)
ಬೆಂಗಳೂರು-೮೫

©KTBS Not to be republished

# ಪರಿವಿಡಿ


| ಭಾಗ–೧ ಪಠ್ಯ ಪ್ರಧಾನ ಅಧ್ಯಯನ ಗದ್ಯ–ಪದ್ಯ | | | | |
|---|---|---|---|---|
| ಕ್ರ.ಸಂ. | ಪಠ್ಯದ ಹೆಸರು | ಪ್ರಕಾರ | ಕೃತಿಕಾರರ ಹೆಸರು | ಪುಟ ಸಂಖ್ಯೆ |
| ೧ | ವಸಂತ | ಪದ್ಯ | ಬಿ.ಎಂ. ಶ್ರೀ | ೦೧ |
| ೨ | ಅಧಿಕಾರ | ಗದ್ಯ | ಗಿರೀಶ ಕಾರ್ನಾಡ | ೦೭ |
| ೩ | ಮಿತ್ರ | ಪದ್ಯ | ಎಂ. ಅಕಬರ ಅಲಿ | ೧೭ |
| ೪ | ನಾಲಗೆ | ಗದ್ಯ | ಎನ್.ಎಸ್. ತಾರಾನಾಥ್ | ೨೧ |
| ೫ | ಕನ್ನಡವ ನುಡಿ | ಪದ್ಯ | ಸವಿತಾ ನಾಗಭೂಷಣ | ೩೦ |
| ೬ | ಯಕ್ಷಪ್ರಶ್ನೆ | ಗದ್ಯ | ಸಂಪಾದಿತ | ೩೪ |
| ೭ | ನೀತಿ ಮಾತು | ಪದ್ಯ | ಕನಕದಾಸ | ೪೩ |
| ೮ | ನಾನು ಕನ್ನಡ ಕವಿಯಾದೆ | ಗದ್ಯ | ಕುವೆಂಪು | ೪೭ |
| ೯ | ಒಂದು ರಾತ್ರಿ | ಪದ್ಯ | ಎಸ್.ವಿ. ಪರಮೇಶ್ವರ ಭಟ್ಟ | ೫೫ |
| ೧೦ | ಬುದ್ಧನ ಸನ್ನಿಧಿಯಲ್ಲಿ ದಿವ್ಯ ಮೌನ | ಗದ್ಯ | ರಾಜಶೇಖರ ಹತಗುಂದಿ | ೬೧ |
| ೧೧ | ನಿರೀಕ್ಷೆ | ಪದ್ಯ | ಡಿ.ಎಸ್. ವೀರಯ್ಯ | ೭೦ |
| ೧೨ | ನನ್ನ ಟೋಪಿ | ಗದ್ಯ | ಬಿ.ಜಿ.ಎಲ್. ಸ್ವಾಮಿ | ೭೪ |
| ೧೩ | ಬಡತನ | ಪದ್ಯ | ಜನಪದ | ೮೩ |
| ೧೪ | ಬುಲ್ಡೋಜರ್ ಸಂಸ್ಕೃತಿ | ಗದ್ಯ | ನಾಗೇಶ್ ಹೆಗಡೆ | ೮೬ |
| ೧೫ | ಸೂಲಗಿತ್ತಿ ನರಸಮ್ಮ | ಗದ್ಯ | ಬಾ. ಹ. ರಮಾಕುಮಾರಿ | ೯೨ |
| ಭಾಗ–೨ ಪಠ್ಯ ಪೂರಕ ಅಧ್ಯಯನ ಗದ್ಯ–ಪದ್ಯ | | | | |
| ೧ | ಚತುರ ಮೊಲ | ಗದ್ಯ | ಸಂಗ್ರಹ | ೯೯ |
| ೨ | ಅಲ್ಲಮನ ವಚನ | ಪದ್ಯ | ಅಲ್ಲಮ ಪ್ರಭು | ೧೦೧ |
| ೩ | ಕನ್ನಡ ನುಡಿ | ಗದ್ಯ | ಬೆಟಗೇರಿ ಕೃಷ್ಣಶರ್ಮ | ೧೦೩ |
| ೪ | ಶಬ್ದಗಳು | ಪದ್ಯ | ಡಾ. ಸರಜೂ ಕಾಟ್ಕರ್ | ೧೦೫ |
| ೫ | ಅಮ್ಮನಾಗುವುದೆಂದರೆ | ಪದ್ಯ | ರೂಪ ಹಾಸನ | ೧೦೭ |
| ೬ | ಯಾತಕ್ಕೆ ಮಳೆ ಹೋದವೊ | ಪದ್ಯ | ಜನಪದ | ೧೧೦ |


Not to be republished ©KTBS

# ೧. ವಸಂತ

**– ಬಿ. ಎಂ. ಶ್ರೀಕಂಠಯ್ಯ**

**ಪ್ರವೇಶ :** ಆರು ಋತುಗಳಲ್ಲಿ ಒಂದಾದ ವಸಂತ ಋತುವಿನ ಆಗಮನದಿಂದ ಪ್ರಕೃತಿ ಹೊಸ ಚೈತನ್ಯವನ್ನು ಪಡೆಯುತ್ತದೆ. ಎಳೆ ಚಿಗುರು, ಬಣ್ಣಬಣ್ಣದ ಹೂಗಳು, ತಂಪಾಗಿ ಬೀಸುವ ಗಾಳಿ, ಇಂಪಾಗಿ ಹಾಡುವ ಹಕ್ಕಿಗಳ ದನಿ ಮನಸ್ಸನ್ನು ಸೂರೆಗೊಳ್ಳುತ್ತವೆ. ಸಕಲ ಚರಾಚರ ಜೀವಜಂತುಗಳಲ್ಲಿಯೂ ನವ ಉತ್ಸಾಹವನ್ನು ತುಂಬುವ ಪ್ರಕೃತಿಯ ಸೊಬಗನ್ನು ಕವಿ ಇಲ್ಲಿ ಸುಂದರವಾಗಿ ಚಿತ್ರಿಸಿದ್ದಾರೆ.



ವಸಂತ ಬಂದ, ಋತುಗಳ ರಾಜ ತಾ ಬಂದ,
ಚಿಗುರನು ತಂದ, ಹೆಣ್ಗಳ ಕುಣಿಸುತ ನಿಂದ,
ಚಳಿಯನು ಕೊಂದ, ಹಕ್ಕಿಗಳುಲಿಗಳೆ ಚೆಂದ,
ಕೂವೂ, ಜಗ್ ಜಗ್, ಪುವ್ವಿ, ಟೂವಿಟ್ಟ ವೂ!

ಕುರಿ ನೆಗೆದಾಟ, ಕುರುಬರ ಕೊಳಲಿನೂದಾಟ,
ಇನಿಯರ ಬೇಟ; ಬನದಲಿ ಬೆಳದಿಂಗಳೂಟ,
ಹೊಸ ಹೊಸ ನೋಟ, ಹಕ್ಕಿಗೆ ನಲಿವಿನ ಪಾಟ,
ಕೂವೂ, ಜಗ್ ಜಗ್, ಪುವ್ವಿ, ಟೂವಿಟ್ಟ ವೂ!

ಮಾವಿನ ಸೊಂಪು, ಮಲ್ಲಿಗೆ ಬಯಲೆಲ್ಲ ಕಂಪು,
ಗಾಳಿಯ ತಂಪು, ಜನಗಳ ಜಾತ್ರೆಯ ಗುಂಪು,
ಕಿವಿಗಳಿಗಿಂಪು ಹಕ್ಕಿಗಳುಲುಹಿನ ಪೆಂಪು,
ಕೂವೂ, ಜಗ್ ಜಗ್, ಪುವ್ವಿ ಟೂವಿಟ್ಟ ವೂ!

ಬಂದ ವಸಂತ– ನಮ್ಮಾ
ರಾಜ ವಸಂತ!

© KTBS Not to be republished

## ಕೃತಿಕಾರರ ಪರಿಚಯ



ಬಿ.ಎಂ. ಶ್ರೀಕಂಠಯ್ಯ ಇವರು ನವೋದಯ ಕನ್ನಡ ಸಾಹಿತ್ಯದ ಆಚಾರ್ಯ ಪುರುಷ, ಕನ್ನಡದ ಕಣ್ವ ಬೆಳ್ಳೂರು ಮೈಲಾರಯ್ಯ ಶ್ರೀಕಂಠಯ್ಯನವರು 'ಶ್ರೀ' ಎಂಬ ಕಾವ್ಯನಾಮದಿಂದ ಪ್ರಸಿದ್ಧರು. ಇವರು ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನ ಬೆಳ್ಳೂರಿನಲ್ಲಿ ೧೮೮೪ರ ಜನವರಿ ೩ ರಂದು ಜನಿಸಿದರು. ಮೈಸೂರು ಮಹಾರಾಜ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿ ಸೇರಿದ ಶ್ರೀಯವರು ಅಲ್ಲಿಯೇ ಪ್ರಾಚಾರ್ಯ ಪದವಿಗೇರಿದರು. ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾಗಿ ಸೇವೆ ಸಲ್ಲಿಸಿದ ಇವರು ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿಯೂ, ಧಾರವಾಡದ ಖಾಸಗಿ ಕಾಲೇಜಿನ ಪ್ರಾಂಶುಪಾಲರಾಗಿಯೂ ಕಾರ್ಯ ನಿರ್ವಹಿಸಿದರು. ಕನ್ನಡ ನಾಡು, ನುಡಿಗೆ ಶ್ರೀಯವರು ನೀಡಿದ ಕೊಡುಗೆ ಅನನ್ಯವಾದುದು. 'ಇಂಗ್ಲಿಷ್ ಗೀತಗಳು', 'ಹೊಂಗನಸುಗಳು' ಇವರ ಪ್ರಮುಖ ಕವನ ಸಂಕಲನಗಳಾದರೆ, 'ಅಶ್ವತ್ಥಾಮನ್', 'ಪಾರಸಿಕರು', 'ಗದಾಯುದ್ಧ' ಪ್ರಸಿದ್ಧ ನಾಟಕಗಳು. 'ಕನ್ನಡ ಬಾವುಟ', 'ಕನ್ನಡ ಕೈಪಿಡಿ' ಸಂಪಾದನಾ ಕೃತಿಗಳು. ಇವರ ಸಮಗ್ರ ಸಾಹಿತ್ಯವನ್ನೊಳಗೊಂಡ ಕೃತಿ 'ಶ್ರೀ ಸಾಹಿತ್ಯ'. ಇವರಿಗೆ ೧೯೩೮ರಲ್ಲಿ ಮೈಸೂರು ರಾಜರು 'ರಾಜಾಸೇವಾಸಕ್ತ' ಬಿರುದನ್ನು ನೀಡಿ ಗೌರವಿಸಿದ್ದಾರೆ. ೧೯೨೮ರಲ್ಲಿ ಕಲಬುರ್ಗಿಯಲ್ಲಿ ನಡೆದ ೧೪ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿಯನ್ನು ಕೂಡ ಇವರಿಗೆ ನೀಡಿ ಗೌರವಿಸಲಾಗಿದೆ. ಇವರು ೧೯೪೬ರಲ್ಲಿ ನಿಧನರಾದರು.

ಪ್ರಸ್ತುತ 'ವಸಂತ' ಕವನವನ್ನು ಅವರ 'ಇಂಗ್ಲಿಷ್ ಗೀತಗಳು' ಸಂಕಲನದಿಂದ ಆರಿಸಲಾಗಿದೆ.

©KTBS Not to be republished

## ಪದಗಳ ಅರ್ಥ

| | |
|---|---|
| ಇನಿಯರ– ಪ್ರೇಮಿಗಳ; | ಪೆಂಪು –ಸೊಗಸು; |
| ಇಂಪು– ಮಧುರ; | ಬನ– ವನ, ಕಾಡು; |
| ಉಲುಹು– ಕಲರವ; ಧ್ವನಿ; | ಬಯಕೆ–ಆಸೆ; |
| ಕಂಪು – ಪರಿಮಳ, ಸುಗಂಧ; | ಬೇಟ–ಆಕರ್ಷಣೆ; |
| ಚಿಗುರು– ಕುಡಿ; | ಸೊಂಪು–ಸಮೃದ್ಧಿ. |

## ಟಿಪ್ಪಣಿ

**ಕೂವೂ, ಜಗ್‌ಜಗ್ ಪುವ್ವಿ ಟೂವಿಟ್ಟವೂ!** : ಇದು ಕೋಗಿಲೆ ಮುಂತಾದ ಹಕ್ಕಿಗಳ ಅನುಕರಣ ಧ್ವನಿ.

**ಋತು** : ಎರಡೆರಡು ತಿಂಗಳ ಕಾಲಾವಧಿ.

**ಋತುಗಳು :**

| | | | | |
|---|---|---|---|---|
| ಚೈತ್ರ | – | ವೈಶಾಖ | : | ವಸಂತ ಋತು |
| ಜ್ಯೇಷ್ಠ | – | ಆಷಾಢ | : | ಗ್ರೀಷ್ಮ ಋತು |
| ಶ್ರಾವಣ | – | ಭಾದ್ರಪದ | : | ವರ್ಷ ಋತು |
| ಆಶ್ವಯುಜ | – | ಕಾರ್ತಿಕ | : | ಶರದೃತು |
| ಮಾರ್ಗಶಿರ | – | ಪುಷ್ಯ | : | ಹೇಮಂತ ಋತು |
| ಮಾಘ | – | ಫಾಲ್ಗುಣ | : | ಶಿಶಿರ ಋತು |

## ಅಭ್ಯಾಸ

**ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಋತುಗಳ ರಾಜ ಯಾರು?

೨. ಚಿಗುರನ್ನು ತರುವ ಋತು ಯಾವುದು?

೩. ವಸಂತ ಪದ್ಯದಲ್ಲಿ ಹೇಳಿರುವಂತೆ ಬೆಳದಿಂಗಳೂಟ ಎಲ್ಲಿ ನಡೆಯುತ್ತದೆ?

೪. ಬಿ.ಎಂ. ಶ್ರೀಯವರು ವರ್ಣಿಸಿರುವಂತೆ ಬಯಲೆಲ್ಲಾ ಕಂಪಾಗುವಂತೆ ಮಾಡಿರುವುದು ಯಾವುದು?

೫. ವಸಂತ ಕಾಲದಲ್ಲಿ ಯಾವುದು ಕಿವಿಗಳಿಗೆ ಇಂಪಾಗಿರುತ್ತದೆ?

**ಆ) ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ವಸಂತ ಬಂದಾಗ ಪ್ರಕೃತಿಯಲ್ಲಾಗುವ ಬದಲಾವಣೆಗಳನ್ನು ಬಿಎಂಶ್ರೀಯವರು ಹೇಗೆ ವರ್ಣಿಸಿದ್ದಾರೆ? ವಿವರಿಸಿ.

೨. ವಸಂತ ಕಾಲದಲ್ಲಿ ಪ್ರಾಣಿ ಪಕ್ಷಿಗಳ ಪ್ರತಿಕ್ರಿಯೆಯನ್ನು 'ವಸಂತ' ಕವನದಲ್ಲಿ ಕವಿ ಹೇಗೆ ಬಣ್ಣಿಸಿದ್ದಾರೆ ಎಂಬುವುದನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**ಇ) ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ.**

ಕುರಿ ________________________

____________________________

____________________________

________________ಪುವ್ವಿಟೂವಿಟ್ಟವೂ

ಮಾವಿನ ಸೊಂಪು _______________

____________________________

____________________________

________________ಪುವ್ವಿಟೂವಿಟ್ಟವೂ!

©KTBS Not to be republished

## ಭಾಷಾಭ್ಯಾಸ

ಅ) 'ವಸಂತ' ಪದ್ಯದಲ್ಲಿ ಬಂದಿರುವ ಪ್ರಾಸಪದಗಳನ್ನು ಗುರುತಿಸಿ ಬರೆಯಿರಿ.

ಉದಾಹರಣೆ: ಕಂಪು– ತಂಪು

ಆ) ಕೆಳಗಿನ ಪದಗಳಿಗೆ ತತ್ಸಮ ತದ್ಭವಗಳನ್ನು ಬರೆಯಿರಿ.

ರಾಜ, ಬನ, ಜಾತ್ರೆ, ಮಲ್ಲಿಗೆ, ಹಕ್ಕಿ.

ಇ) 'ವಸಂತ' ಪದ್ಯದಲ್ಲಿರುವ ಅನುಸ್ವಾರಯುಕ್ತ ಪದಗಳನ್ನು ಪಟ್ಟಿ ಮಾಡಿರಿ.

ಉದಾಹರಣೆ: ಬಂದ, ತಂದ.

## ಭಾಷಾ ಚಟುವಟಿಕೆ

ಅ) ಬೇರೆ ಬೇರೆ ಋತುಗಳ ವರ್ಣನೆಯನ್ನು ಮಾಡಿರುವ ಕವಿತೆಗಳನ್ನು ಸಂಗ್ರಹಿಸಿ ಓದಿರಿ.

ಆ) ವಸಂತ ಪದ್ಯವನ್ನು ಕಂಠಪಾಠ ಮಾಡಿ, ತರಗತಿಯಲ್ಲಿ ರಾಗವಾಗಿ ಹಾಡಿರಿ.

ಇ) ಬಿ.ಎಂ. ಶ್ರೀಯವರ ಇತರ ಕವನಗಳನ್ನು ಸಂಗ್ರಹಿಸಿರಿ.

## ವ್ಯಾಕರಣ

### ಭಾಗ 'ಅ'

ನಾವು ಮಾತನಾಡುವ ಮಾತುಗಳೆಲ್ಲ ವಾಕ್ಯಗಳಾಗಿರುತ್ತವೆ. ವಾಕ್ಯಗಳು ಪದಗಳಿಂದ ಕೂಡಿರುತ್ತವೆ. ಪದಗಳು ಅಕ್ಷರಗಳಿಂದ ಕೂಡಿರುತ್ತವೆ. ಒಂದು ಭಾಷೆಯಲ್ಲಿರುವ ಅತಿ ಚಿಕ್ಕ ಅಂಶ 'ಅಕ್ಷರ'. ಉಚ್ಚರಿಸಲು ಸಾಧ್ಯವಿರುವ ಮತ್ತು ಬರಹದ ರೂಪವುಳ್ಳ ಅಂಶಗಳು ಮಾತ್ರ ಅಕ್ಷರಗಳೆನಿಸುತ್ತವೆ. ಅಕ್ಷರಗಳನ್ನು ಒಂದು ಕ್ರಮದಲ್ಲಿ ಜೋಡಿಸುವ ಪದ್ಧತಿ ಎಲ್ಲಾ ಭಾಷೆಗಳಲ್ಲೂ ರೂಢಿಯಲ್ಲಿ ಬಂದಿದೆ. ಕನ್ನಡ ಅಕ್ಷರಗಳ ಕ್ರಮಬದ್ಧ ಜೋಡಣೆಯೇ 'ಕನ್ನಡದ ವರ್ಣಮಾಲೆ'. ಇದು 'ಅ'ಕಾರದಿಂದ 'ಳ್'ಕಾರದವರೆಗಿನ ೪೯ ಅಕ್ಷರಗಳನ್ನು ಒಳಗೊಂಡಿದೆ. ಹಿಂದಿನ ತರಗತಿಗಳಲ್ಲಿ ಇವುಗಳ ಬಗೆಗೆ ವಿವರವಾಗಿ ನೋಡಿದ್ದೇವೆ.

### ಕನ್ನಡ ವರ್ಣಮಾಲೆ

**ಸ್ವರಗಳು = ೧೩**

ಅ ಆ ಇ ಈ ಉ ಊ ಋ ಎ ಏ ಐ ಒ ಓ ಔ

(ಸ್ವತಂತ್ರವಾಗಿ, ಸ್ಪಷ್ಟವಾಗಿ ಉಚ್ಚರಿಸುವ ಅಕ್ಷರಗಳು)

**ಯೋಗವಾಹಗಳು**

ಅನುಸ್ವಾರ (ಂ) ವಿಸರ್ಗ (ಃ) – ೨

(ಅಕ್ಷರದ ಸಂಬಂಧದಿಂದ ಮಾತ್ರವೇ ಉಚ್ಚರಿಸಲಾಗುವ ಅಕ್ಷರಗಳು)

©KTBS Not to be republished

**ವ್ಯಂಜನಗಳು = ೩೪**

ಕ್ ಖ್ ಗ್ ಘ್ ಙ್ – ಕ ವರ್ಗ – ೫

ಚ್ ಛ್ ಜ್ ಝ್ ಞ್ – ಚ ವರ್ಗ – ೫

ಟ್ ಠ್ ಡ್ ಢ್ ಣ್ – ಟ ವರ್ಗ – ೫

ತ್ ಥ್ ದ್ ಧ್ ನ್ – ತ ವರ್ಗ – ೫

ಪ್ ಫ್ ಬ್ ಭ್ ಮ್ – ಪ ವರ್ಗ – ೫

ಯ್ ರ್ ಲ್ ವ್ ಶ್ ಷ್ ಸ್ ಹ್ ಳ್ – ೯

(ಸ್ವರಗಳ ಸಹಾಯದಿಂದ ಮಾತ್ರ ಉಚ್ಚರಿಸಲು ಸಾಧ್ಯವಾಗುವ ಅಕ್ಷರಗಳು)

ಕನ್ನಡ ಭಾಷೆಯಲ್ಲಿ ಒಟ್ಟು ೪೯ ಅಕ್ಷರಗಳಿವೆ.

## ಗುಣಿತಾಕ್ಷರಗಳು

| ವ್ಯಂಜನ ಸ್ವರ | ಗುಣಿತಾಕ್ಷರ | ವ್ಯಂಜನ ಸ್ವರ | ಗುಣಿತಾಕ್ಷರ |
|---|---|---|---|
| ಕ್ +ಅ = | ಕ | ಟ್+ಎ = | ಟೆ |
| ಕ್ +ಆ = | ಕಾ | ಟ್+ಏ = | ಟೇ |
| ಚ್ +ಇ = | ಚಿ | ಪ್+ಐ = | ಪೈ |
| ಚ್ +ಈ = | ಚೀ | ಪ್+ಒ = | ಪೊ |
| ತ್ +ಉ = | ತು | ಬ್+ಓ = | ಬೋ |
| ತ್ +ಊ = | ತೂ | ಬ್+ಔ = | ಬೌ |
| ಗ್ +ಋ = | ಗೃ | ಮ್+ಅಂ= | ಮಂ |
| | | ಮ್+ಅಃ = | ಮಃ |

**ಗುಣಿತಾಕ್ಷರಗಳ ಬಗೆಗೆ ಹೆಚ್ಚಿನ ಮಾಹಿತಿಗಾಗಿ ಹಿಂದಿನ ತರಗತಿಗಳ ಪಠ್ಯ ಪುಸ್ತಕವನ್ನು ನೋಡಿರಿ.**

## ಭಾಗ 'ಆ'

**ಅ) ಹ್ರಸ್ವಸ್ವರದಿಂದ ಆರಂಭವಾಗುವ ಐದು ಪದ ಮತ್ತು ದೀರ್ಘಸ್ವರದಿಂದ ಆರಂಭವಾಗುವ ಐದು ಪದಗಳನ್ನು ಬರೆಯಿರಿ.**

**ಮಾದರಿ:** ಹ್ರಸ್ವಸ್ವರ: ಅರಸ, ಇರುವೆ

ದೀರ್ಘಸ್ವರ: ಆಗಸ, ಔತಣ

**ಆ) ಕೆಳಗಿನ ಅಕ್ಷರಗಳಲ್ಲಿ ಅಲ್ಪಪ್ರಾಣ, ಮಹಾಪ್ರಾಣ ಮತ್ತು ಅನುನಾಸಿಕ ಅಕ್ಷರಗಳನ್ನು ಗುರುತಿಸಿ ಬರೆಯಿರಿ.**

ನೌ, ಗು, ಝಾ, ಫೃ, ಮೊ, ಖೋ, ಛು, ಞ, ಟೂ, ಣೆ, ಜ, ಭೀ, ಢಿ, ಥೇ

©KTBS Not to be republished

ಇ) **ಅನುಸ್ವಾರವನ್ನು ಹೊಂದಿರುವ ಐದು ಪದಗಳನ್ನು, ವಿಸರ್ಗವನ್ನು ಹೊಂದಿರುವ ಐದು ಪದಗಳನ್ನು ಮತ್ತು ಅನುಸ್ವಾರ ಮತ್ತು ವಿಸರ್ಗ ಎರಡನ್ನೂ ಹೊಂದಿರುವ ಐದು ಪದಗಳನ್ನು ಬರೆಯಿರಿ.**

**ಮಾದರಿ:** ಅನುಸ್ವಾರ: ಸೌಂದರ್ಯ

ವಿಸರ್ಗ: ಪುನಃ

ಅನುಸ್ವಾರ ಮತ್ತು ವಿಸರ್ಗ: ಅಂತಃಸತ್ವ

ಈ) **ಕೆಳಗೆ ಕೊಟ್ಟಿರುವ ಪದಗಳಲ್ಲಿ ಯೋಗವಾಹಗಳಿಂದ ಕೂಡಿರುವ ಅಕ್ಷರಗಳನ್ನು ಪ್ರತ್ಯೇಕಿಸಿ ಬರೆಯಿರಿ.**

ವಸಂತ, ದುಃಖ, ಚಂದ, ಬೆಳದಿಂಗಳೂಟ, ಅಂಗಡಿ, ಅಂತಃಕರಣ, ನಮಃ, ಬಂದ, ತಂದ.

ಉ) **ಕೆಳಗಿನ ಪದಗಳಲ್ಲಿ ಅಡಿಗೆರೆ ಎಳೆದ ಅಕ್ಷರವು ಹ್ರಸ್ವಸ್ವರವೇ ಅಥವಾ ದೀರ್ಘಸ್ವರವೇ ಗುರುತಿಸಿ ಬರೆಯಿರಿ.**

ಅ) <u>ಒ</u>ಮ್ಮೆ ಆ) <u>ಅ</u>ರಣ್ಯ ಇ) <u>ಈ</u> ಹಕ್ಕಿ ಈ) <u>ಏ</u>ನನ್ನಾದರೂ ಉ) <u>ಊ</u>ಹಿಸು ಊ) <u>ಇ</u>ಚ್ಛಿಸಿದನು.

ಊ) **'ಕ್' ಕಾರದಿಂದ 'ಳ್' ಕಾರದವರೆಗಿನ ೩೪ ವ್ಯಂಜನಗಳಿಗೆ 'ಅ' ಯಿಂದ 'ಅಃ' ವರೆಗಿನ ಸ್ವರ ಸಂಜ್ಞೆಗಳನ್ನು ಸೇರಿಸಿ ಗುಣಿತಾಕ್ಷರ ಬರೆಯುವುದನ್ನು ಅಭ್ಯಾಸ ಮಾಡಿರಿ.**

ಋ) **ಸ್ವರ ಸಂಜ್ಞೆಗಳ ಬಳಕೆ ಸ್ಪಷ್ಟವಾಗಲು ವ್ಯಂಜನಗಳಿಗೆ ಒಂದು ಬಣ್ಣ ಮತ್ತು ಸ್ವರ ಸಂಜ್ಞೆಗಳಿಗೆ ಒಂದು ಬಣ್ಣ ಹಾಕಿ ಬರೆಯಿರಿ.**

**ಮಾದರಿ:** ಕ ಕಾ ಕಿ ಕೀ ಕು ಕೂ ಕೃ ಕೆ ಕೇ ಕೈ ಕೊ ಕೋ ಕೌ ಕಂ ಕಃ

ಎ) **ಕೆಳಗೆ ಕೊಟ್ಟಿರುವ ಗುಣಿತಾಕ್ಷರಗಳಿಂದ ಪ್ರಾರಂಭವಾಗುವ ಒಂದೊಂದು ಪದ ಬರೆಯಿರಿ.**

**ಮಾದರಿ:** ಬ–ಬನ

೧) ಭ– ೨) ಭಾ– ೩) ಭಿ– ೪) ಭೀ–

**ನಿಸರ್ಗವೇ ಜಗತ್ತಿನಲ್ಲಿ ಅತಿ ದೊಡ್ಡ ಗುರು**

*****

©KTBS Not to be republished

# ೨. ಅಧಿಕಾರ

**–ಗಿರೀಶ ಕಾರ್ನಾಡ**

**ಪ್ರವೇಶ:** ಸಾಮಾಜಿಕ ಬದಲಾವಣೆ ಮಾಡಬಯಸುವ ಸುಧಾರಕರು ಅನೇಕ ಬಗೆಯ ಕಷ್ಟಗಳನ್ನು ಎದುರಿಸಬೇಕಾಗುತ್ತದೆ. ಮುಖ್ಯವಾಗಿ ಸಂಪ್ರದಾಯವಾದಿಗಳ ವಿರೋಧ ಕಟ್ಟಿಕೊಳ್ಳಬೇಕಾಗುತ್ತದೆ. ಇಂತಹ ಸಮಾಜ ಸುಧಾರಕರ ಬಗ್ಗೆ ಆಳುವ ದೊರೆಗಳಿಗೆ ವೈಯಕ್ತಿಕವಾಗಿ ಗೌರವವಿರಬಹುದು. ಆದರೆ ಅವರು ಸಂಪ್ರದಾಯವಾದಿಗಳ ಒತ್ತಡಕ್ಕೆ ಒಳಗಾಗಿ ಆಡಳಿತ ಮಾಡಬೇಕಾಗುತ್ತದೆ. ಆಗ ಸಮಾಜ ಸುಧಾರಕರ, ಸಂಪ್ರದಾಯವಾದಿಗಳ ಹಾಗೂ ಅಧಿಕಾರಸ್ಥ ದೊರೆಗಳ ನಡುವೆ ಸಂಘರ್ಷ ಶುರುವಾಗುತ್ತದೆ. ಇದು ದುರಂತಗಳಿಗೆ ಕಾರಣವಾಗುತ್ತದೆ. ೧೨ನೇ ಶತಮಾನದ ಶರಣ ಚಳುವಳಿಯ ಹೊತ್ತಲ್ಲಿ ನಡೆದ ಇಂತಹ ಒಂದು ದುರಂತವು ಕಾರ್ನಾಡರ 'ತಲೆದಂಡ' ನಾಟಕದ ವಸ್ತು. ಇಲ್ಲಿ ಕೊಟ್ಟಿರುವ ನಾಟಕದ ಭಾಗದಲ್ಲಿ ಒಬ್ಬ ಅಧಿಕಾರಿಯಾಗಿದ್ದೂ ದೊರೆಯ ದೋಷಗಳನ್ನು ಹೇಳಬಲ್ಲ ಧೀಮಂತಿಕೆಯ ಬಸವಣ್ಣನಿದ್ದಾನೆ; ತನ್ನ ಅಧಿಕಾರ ಉಳಿಸಿಕೊಳ್ಳುವ ಕಷ್ಟದಲ್ಲಿರುವ ದೊರೆಯಿದ್ದಾನೆ. ಇವರ ನಡುವಿನ ಘರ್ಷಣೆಯ ಬೆಂಕಿಗೆ ಎಣ್ಣೆಸುರಿಸುತ್ತ ದೊರೆಯನ್ನು ಓಲೈಸುತ್ತ ಬದುಕುವ ಮಧ್ಯವರ್ತಿ ಮಂಚಣ್ಣನಿದ್ದಾನೆ. ಇವರ ನಡುವಿನ ತಾಕಲಾಟಗಳು ಇಲ್ಲಿ ವ್ಯಕ್ತವಾಗಿವೆ. ರಾಜ್ಯಭಾರ ಮಾಡುವುದು ಸಹ ಸಮಾಜಕ್ಕೆ ಸಲ್ಲಿಸುವ ಒಂದು ಸೇವೆ ಅಥವಾ ಕಾಯಕ ಎಂಬ ಆಶಯ ಇಲ್ಲಿದೆ. ಉತ್ತರ ಕರ್ನಾಟಕದ ಆಡುಮಾತಿನ ಶೈಲಿಯ ಸೊಬಗನ್ನೂ ನಾಟಕದ ಈ ಭಾಗದಲ್ಲಿ ಕಾಣುತ್ತೇವೆ.)

(ಅರಮನೆಯ ಇನ್ನೊಂದು ಭಾಗ. ಬಸವಣ್ಣ ಒಬ್ಬ ಮುದುಕಿಯೊಡನೆ ಮಾತನಾಡುತ್ತಿದ್ದಾನೆ. ಬಾಗಿಲಲ್ಲಿ ನಾಲ್ಕೈದು ಊಳಿಗದವರು ಗುಂಪುಗಟ್ಟಿ ನಿಂತಿದ್ದಾರೆ.)

ಬಸವಣ್ಣ : ಗುಡ್ಡೆವ್ವ, ನಿನ್ನ ಸೊಸಿ ಇನ್ನೂ ಸಣ್ಣಾಕಿ. ಅಂದಾಗ ನೀನೂ ಸ್ವಲ್ಪ ಸಂಭಾಳಿಸಿಕೋಬೇಕಬೇ. ನನ್ನ ಮಾತು ಕೇಳಾಂಗಿದ್ದರೆ ಒಂದು ಹೇಳತೀನಿ.

ಮುದುಕಿ : ನಿನ್ನ ಮಾತು ಯಾರು ತಗದು ಹಾಕತಾರಪಾ, ಬಸಣ್ಣ?

ಬಸವಣ್ಣ : ನಿನ್ನ ದನಿ ಭಾಳ ಛಂದ ಅದ ಅಂತ ಕೇಳೀನಿ, ಹೌದ? ಮಾದಾರ ಚೆನ್ನಯ್ಯನ ಗೀತ ಭಾಳ ಛಂದ ಹಾಡತೀಯಂತ_

ಮುದುಕಿ : (ನಾಚಿ) ಅಯ್ಯ, ನಿನಗ್ಯಾರು ಹೇಳಿದರಿದನ?

ಬಸವಣ್ಣ : ಹಾಂಗಾರ ಒಂದೆರಡು ದಿನದ ಮಟ್ಟಿಗೆ ನಿನ್ನ ಮನೀ ನಿನ್ನ ಸೊಸೀ ಕೈಯ್ಯಾಗ ಒಪ್ಪಿಸು. ಆಕಿ ನೋಡಿಕೊಳ್ಳಲಿ ಬಿಡದನ್ನ. ನೀ ಸಂಗಯ್ಯನ ಮಹಾಮನಿಗೆ ಬಾ. ಬರತೀಯಾ?

ಮುದುಕಿ : ನಿನ್ನ ಮನೀಗೆ? ನಾ ಒಲ್ಲೆಪಾ. ಅಲ್ಲಿ ನೀ ದಲಿತರನ್ನೆಲ್ಲ ಕರಸಿಕೊಂತೀಯಂತ. ಅವರ ಸಂಗಾಟ ಕುಂತು_

ಬಸವಣ್ಣ : (ನಕ್ಕು) ಅವರು ಬರತಾರಂಬೋದೇನೋ ಖರೆ. ಆದರ ನಿನಗೆಲ್ಲಿ ಸರಿ ಅನಸತೈತಿ ಅಲ್ಲಿ ಕೂಡಬೇ. ನೀ ಹಾಡು ಹೇಳು. ಅವರೂ ಹಾಡತಾರ. ಆಮ್ಯಾಲೆ ನಿನಗೇನನಸತದ ಹೇಳು. ಆತ?

(ಹೊರಗೆ ಪರಾಕು)



© KTBS Not to be republished

ವಂದಿ–ಮಾಗಧರು (ಹೊರಗಿನಿಂದಲೇ) ಮಹಾರಾಜಾಧಿರಾಜ ಕಾಳಂಜರಪುರಾಧೀಶ್ವರ ಸುವರ್ಣವೃಷಭಧ್ವಜ ಡಮರು ತೂರ್ಯನಿರ್ಘೋಷಣ ಕಲಚೂರ್ಯ ವಂಶಕಮಲಭಾಸ್ಕರ ತ್ರ್ಯಂಬಕಪಾದಪದ್ಮಮಧುಪ ಶನಿವಾರಸಿದ್ಧಿ ಭುಜಬಲಚಕ್ರವರ್ತಿ ಬಿಜ್ಜಳ ದೇವರಾಜ ಭೋ ಪರಾ! ಭೋ ಪರಾಕ್!

(ಬಿಜ್ಜಳ ಪ್ರವೇಶಿಸುತ್ತಾನೆ. ಅವನ ಜೊತೆಗೆ ಬ್ರಾಹ್ಮಣ ಮಂಚ್ಯಣಕ್ರಮಿತ ಬಸವಣ್ಣ ಬಿಜ್ಜಳನ್ನು ವಂದಿಸುತ್ತಾನೆ)

ಬಿಜ್ಜಳ : ಹ್ಯಾಂಗೈತಿ ನಮ್ಮ ಹೊಸ ಬಿರುದಾವಳಿ?

ಬಸವಣ್ಣ : (ನಕ್ಕು) ಕಿವಿ ತುಂಬಿ ತುಳುಕೋ ಹಾಂಗದ, ಧಣಿ.



ಮಂಚ್ಯಣಕ್ರಮಿತ : ಆದರೂ ಮಹಾರಾಜರ ಪರಾಕ್ರಮ ಬಲ್ಲವರಿಗೆ ಸ್ವಲ್ಪ ಅರಕಳಿ ಅನಿಸಿದರೆ ಆಶ್ಚರ್ಯ ಏನೂ ಇಲ್ಲ.

ಬಸವಣ್ಣ : ಸಂಸ್ಕೃತ ಹೆಚ್ಚಾತೋ ಏನೋ.....

ಬಿಜ್ಜಳ : ಅಧ! ಅಧ! ನನಗ್ಗೊತ್ತಿತ್ತು ನೀ ಹಾಂಗನತೀ ಅಂತ, ಹೊಸ ಶಿಲಾಶಾಸನ ಬರಸತಿದ್ದೆ. ಅದರ ಸಲುವಾಗಿ ನಮ್ಮ ಮಂಚ್ಯಣಕ್ರಮಿತರ ರಚಿಸಿದರು. ನಾ ಹೇಳಿದ್ನಿ ಅವರಿಗೆ.....

ಮಂಚ್ಯಣಕ್ರಮಿತ : ಸಂಸ್ಕೃತಕ್ಕಿರೋ ಘನತೆ–ಗಾಂಭೀರ್ಯ ಕನ್ನಡಕ್ಕೆ ಹ್ಯಾಂಗ ಬಂದೀತು?

ಬಸವಣ್ಣ : ಧಣಿ, ಹಿಂಗ ಬಿರುದಾವಳಿ ಬೆಳಕೋತ ಹೋದರ ರಾಜ್ಯದಾಗ ಸಿಗೋ ಅಷ್ಟೂ ಕಲ್ಲು ಒಟ್ಟಿದರೂ ಮಹಾರಾಜರ ಶಾಸನಗಳಿಗೆ ಸಾಕಾಗಲಿಕ್ಕಿಲ್ಲ.

ಮಂಚ್ಯಣಕ್ರಮಿತ : ಮಹಾರಾಜರು ತಮ್ಮ ಸಾಮ್ರಾಜ್ಯವನ್ನು ದಿಗಂತದಾಚೆಗೂ ವರ್ಧಿಸಲಿಕ್ಕ ಇದಕ್ಕಿಂತ ಒಳ್ಳೆಯ ಪ್ರಚೋದನೆ ಇನ್ನ್ಯಾವುದು? ಚೋಳ–ಪಾಂಡ್ಯರ ರಾಜ್ಯ ಅಲ್ಲಿಯ ಸಂಸ್ಕೃತಿಗಿಂತ ಹೆಚ್ಚಾಗಿ ಅಲ್ಲಿಯ ಶಿಲೆಗಳ ಸಲುವಾಗಿ ಹೆಸರಾಗಿರೋದೊ ನಮಗೆ ಅನುಕೂಲ.

ಬಸವಣ್ಣ : (ಕನಲಿ) ಒಂದು ಹೊಸ ಶಾಸನ. ಅದರೊಳಗೆ ಮೆರಸಲಿಕ್ಕಂತ ಒಂದು ಹೊಸ ಯುದ್ಧ. ಐನೂರು ಹೊಸ ವೀರಗಲ್ಲು, ಸಾವಿರ ಹಸಿ ವಿಧವೆಯರ ಹಲುಬು! ಮತ್ತು ಈ ಪರಾಕ್ರಮದ ವೆಚ್ಚಕ್ಕಂತ ಹೊಸ ತೆರಿಗೆ, ಬಿಟ್ಟಿ, ಕೊಟ್ಟಣ, ಗೋಳು.

ಮಂಚ್ಯಣಕ್ರಮಿತ : ನಾವು ಮಹಾರಾಜರ ಪ್ರಜೆಗಳು. ಮಹಾರಾಜರ ಕೀರ್ತಿಗೋಸ್ಕರ ಗೋಳನ್ನ ಸಹಿಸಿಕೊಳ್ಳೋದು ನಮ್ಮ ಕರ್ತವ್ಯ.

ಬಸವಣ್ಣ : ನಾವು ಮಹಾರಾಜರ ಅಧಿಕಾರಿಗಳು. ಮಹಾರಾಜರ ಪ್ರಜೆಗಳ ಗೋಳನ್ನ ಮಹಾರಾಜರ ಕಿವಿಮ್ಯಾಲ ಹಾಕೋದು ನಮ್ಮ ಕರ್ತವ್ಯ.

ಮಂಚ್ಯಣಕ್ರಮಿತ : (ನಕ್ಕು) ಮನುಷ್ಯ ಜೀವನ ನಶ್ವರ, ಬಸವಣ್ಣ. ನಾವೆಲ್ಲ ಹೋಗತೀವಿ. ಆದರೆ ಆ ಶಾಸನ ಇನ್ನೊಂದು ಸಹಸ್ರ ವರ್ಷ ಗಟ್ಟಿಯಾಗಿ ನಿಂತು ಮಹಾರಾಜರ ಕೀರ್ತಿಯನ್ನ ದಿಗದಿಗಂತಕ್ಕ ಹಾಡಿ ಹಬ್ಬಿಸತಾವಂಬೋದನ್ನ ನೀವು ಮರೀತಕ್ಕದ್ದಲ್ಲ.

ಬಸವಣ್ಣ : ಕೊರಿದಿಟ್ಟ ಅಕ್ಷರಗಳನ್ನ ಓದಲಿಕ್ಕ ಕಣ್ಣು ಬೇಕು. ಹಾಡಲಿಕ್ಕ ನಾಲಿಗೀಬೇಕು. ಈ ಸ್ಥಾವರ ಶಿಲೆಗಳಿಂದೇನಾಗಬೇಕು? ಹೊರಡುವ ಅರ್ಥವನ್ನ ಈ ಮನುಷ್ಯ ದೇಹ ಹೊರಡಸತದ. ಅದಕ್ಕ ನಾವು ಮೊದಲು ಮನುಷ್ಯರ ಪರಿವೆ ಮಾಡಬೇಕು.

ಬಿಜ್ಜಳ : ನೀ ಬಂದರ ಓಲಗಕ್ಕ ಒಗ್ಗರಣೆ ಹಾಕಿದ ಹಾಂಗಾಕ್ಕೇತಿ ನೋಡು.

ಬಸವಣ್ಣ : (ನಮ್ರವಾಗಿಯೇ) ಧಣಿ, ಇವು ಭಂಡಾರದ ಕೀಲಿಕೈ. ನನ್ನ ಮ್ಯಾಲ ನಂಬಿಕೀ ಇಟ್ಟು ನನಗೆ ಒಪ್ಪಿಸಿದ್ದಿರಿ. ಉಪಕಾರ ಮರೆಯೂದಿಲ್ಲ. ಆದರ ಈಗ ಒಜ್ಜೆ ಅನಸಲಿಕ್ಕ ಹತ್ತ್ಯಾವ. ಇವನ್ನ ಹೊಳ್ಳಿ ತಗೋಬೇಕು.

ಬಿಜ್ಜಳ : ನಾ ತಗೊಳ್ಳೂದಿಲ್ಲ ಅಂದರೆ?

ಬಸವಣ್ಣ : ಅರಮನಿಯೊಳಗೆ ಶಿವಾಲಯ ಅದ. ಅಲ್ಲಿ ಲಿಂಗಕ್ಕ ಅರ್ಪಿಸಿ ಹೋಗುತೀನಿ.

(ಮೌನ)

ಬಿಜ್ಜಳ : ನಾಕೈದು ವರ್ಷ ಆದವು. ಹಬ್ಬ–ಹರದಿನ ಬಿಟ್ಟರ ನೀ ಅರಮನೀ ಹಂತ್ಯಾಕ ಹಾದಿಲ್ಲ, ನಾ ಯಾಕಂತ ಕೇಳಿಲ್ಲ. ಮಹಾರಾಜರಿಗೂ ಭಂಡಾರಿ ಬಸವಣ್ಣಗೂ ಮುರಗಡೆ ಆಗೇತಿ ಇಡೀ ರಾಜ್ಯ ಆಡಿಕೊಣ್ಣಾಕ ಹತ್ತೇತಿ. ಹೀಂಗಿದ್ದು ನಾ ಈ ಭಂಡಾರದ ಕೀಲಿಕೈ ಹೊಳ್ಳಿ ಇಸಕೊಳ್ಳಲಿಲ್ಲ. ನಮ್ಮ ಅರಸೊತ್ತಿಗೆಯನ್ನ ಹಂಗಿಸಿ ನೀ ವಚನ ಬರದೀ. ನಿಮ್ಮ ಅನುಭಾವಗೋಷ್ಠಿಯೊಳಗ ಹಾಡಿದೀ, ನನಗೆ ಗೊತ್ತೈತಿ.....

ಬಸವಣ್ಣ : ನಾ ಮೊದಲೇ ಹೇಳಿದ್ದೆ, ಧಣಿ. ನಾ ಭಂಡಾರದಲ್ಲಿ ದುಡಿಯೋದು ಬಿಜ್ಜಳ ಮಹಾರಾಜರ ಅನುಕೂಲತೆಗಾಗಿ ಅಲ್ಲ. ಆ ಸಂಪತ್ತು ರಾಜವಂಶದ ಸೊತ್ತಲ್ಲ. ಜನರ ಸೊತ್ತು. ಪ್ರಜೆಗಳ ಪಾಲಕ ಅಂತ ರಾಜನಿಗೆ ಅಲ್ಲಿ ಅಧಿಕಾರ ಅದ. ಆದರ ರಾಜನ ಮನೆಯವರಿಗೆ ಅಲ್ಲಿ ಪ್ರವೇಶ ಇಲ್ಲ!

ಬಿಜ್ಜಳ : ಅದೇನೇ ಇರಲಿ, ನಾ ಕೇಳೋ ಪ್ರಶ್ನೆಗೆ ನೆಟ್ಟಗ ಉತ್ತರ ಹೇಳು: ಬ್ಯಾರೆ ಯಾವನರೆ ಅರಸ ಆಗಿದ್ದರೆ ನನ್ನಷ್ಟು ಸಡಲು ಬಿಡತಿದ್ದನೇನು?

ಬಸವಣ್ಣ : ಇಲ್ಲ, ಧಣಿ. ಒಪ್ಪಿಕೋತೀನಿ. ಬಿಡತಿದ್ದಿಲ್ಲ.

©KTBS Not to be republished

ಬಿಜ್ಜಳ : ಹಾಂಗಾರ ನಾ ಹೇಳಿದ್ದು ಕೇಳು. ಹುಡುಗಾಟದಾಗ ಆದದ್ದು ಆಗಿಹೋತು. ಮರೆತುಬಿಡು ಅದನ್ನ. ನನ್ನ ಮಗ ಎಬಡ. ಅರಿವುಗೇಡಿ.

ಮಂಚ್ಯಣಕ್ರಮಿತ : ಛೆ ಛೆ, ಮಹಾಪ್ರಭು, ಏನೀ ಮಾತು!

ಬಿಜ್ಜಳ : ನಿನಗನಿಸಿದರ ಹೇಳು–ಈಗಿಂದೀಗ ಅವನನ್ನ ಕಟ್ಟಿ ತಂದು ನಿನ್ನ ಕಾಲಾಗ ಚೆಲ್ಲತೀನಿ.

ಬಸವಣ್ಣ : ನಾ ರಾಜಕುಮಾರನ್ನ ಮಾತ್ರ ಯಾಕೆ ದೂರಲಿ? ಅನುಭಾವ ಗೋಷ್ಠಿನೂ ಕರೀಲಿಕ್ಕ ಹತ್ತೇದ. ಇನ್ನು ಮುಂದೆ ಅದಕ್ಕೆ ಅರ್ಪಿಸಿಕೊಳ್ಳೋಣ ಅಂತಿದ್ದೀನಿ.

ಬಿಜ್ಜಳ : (ನಿಂತು) ನನಗ ಸೇರೂದಿಲ್ಲ ಅಂದರ ಇದು! 'ರಾಜಕುಮಾರ?' ಜನರು ನನ್ನ ಮಗನನ್ನ 'ಯುವರಾಜ' ಅಂತ ಕರದರ ರಾಣಿ ರಂಭಾವತಿಗೂ ತೃಪ್ತಿಯಾದೀತು, ನನಗೂ ನೆಮ್ಮದಿಯಾದೀತು. ಇದು ಇಡೀ ಆಸ್ಥಾನಕ್ಕೆ ಗೊತ್ತಿದ್ದ ಮಾತು.

ಬಸವಣ್ಣ : ಮಹಾರಾಜರು ರಾಜಕುಮಾರರಿಗೆ ಯುವರಾಜಪಟ್ಟ ಕಟ್ಟಿದ್ದು ನನಗಂತೂ ಗೊತ್ತಿದ್ದಿಲ್ಲ.

ಬಿಜ್ಜಳ : ಕಟ್ಟಲ್ಲೋ, ಮಹಾರಾಯಾ, ಕಟ್ಟಿಲ್ಲ. ಕಟ್ಟಿದ್ದರೆ ನನ್ನ ಉಳಕೀ ತಲೆದಂಡ ಹುಡುಗರು ಕೇಳ್ಯಾರ? ನಾಳೆ ಹರಕೊಂಡು ಬಿದ್ದಾರು ನನಮ್ಯಾಗ, ಆದರ ರಾಜಧಾನ್ಯಾಗ ಒಬ್ಬನ ರಾಜಪುತ್ರ ಇದ್ದಾಗ ಅವನನ್ನ ಯುವರಾಜ ಅಂತ ಕರಿಯೋದು–ಒಂದು ಪದ್ಧತಿ.

ಬಸವಣ್ಣ : ಹೊಸ ಪದ್ಧತಿ ಇದ್ದೀತು, ಮಹಾಸ್ವಾಮಿ. ನಾನಿನ್ನು ಕಲಿತಿಲ್ಲ, ಆದರೆ ಯುವರಾಜ ಆಗೋ ವ್ಯಕ್ತಿಗೆ ಕೆಲವು ಹೊಣೆಗಾರಿಕಿ ಇರತಾವ.

ಬಿಜ್ಜಳ : ಮತ್ತ ಸುರು ಮಾಡತೀ ಏನೀಗ?

ಬಸವಣ್ಣ : ಇಲ್ಲ, ಹದಿನೈದು ವರ್ಷದ ಹಿಂದೆ ನಾವು ಸಾಕಷ್ಟು ಚರ್ಚಾ ಮಾಡೀವಿ. ಆ ಪಲ್ಲ ಮತ್ತ ಹಾಡೂದಿಲ್ಲ. ಆದರ ರಾಜ್ಯಭಾರ ಒಂದು ಕಾಯಕ. ಅದು ಹುಟ್ಟಾ ಬರತಕ್ಕಂಥಾ ಹಕ್ಕಲ್ಲ. ಆಸ್ತಿ ಅಲ್ಲ. ಅದನ್ನ ಮಾಡೋ ಅಧಿಕಾರ ಗಳಿಸಿಕೋಬೇಕು. ಅಮ್ಯಾಲ ಅದನ್ನ ಶ್ರದ್ಧೆಯಿಂದ ಮಾಡಬೇಕು.

(ಬಿಜ್ಜಳ ಬಸವಣ್ಣನ ಸಮಾಧಾನ ಮಾಡಲಿಕ್ಕೆಂಬಂತೆ ನಗುತ್ತ)

ಬಿಜ್ಜಳ : ಅಯ್ಯೋ, ನನಗದೆಲ್ಲ ಗೊತ್ತಿಲ್ಲ? ಮಂಚ್ಯಣಕ್ರಮಿತ, ಹದಿನೈದು–ಹದಿನಾರು ವರ್ಷದ ಕೆಲಗಿನ ಮಾತು, ನಾನು ಆಗ ಚಾಲುಕ್ಯರ ಸಾಮಂತ! ಚಾಲುಕ್ಯರ ಸಾಮಂತನಾಗಿರೋದೇ ಮನುಷ್ಯ ಜನ್ಮದ ಪರಮೋಚ್ಚ ತತ್ತ್ವ ಅಂತ ನಂಬಿ ಆ ಅರಗೊಡ್ಡಿ ಚಕ್ರವರ್ತಿಯ ಕೈಕೆಳಗೆ ದುಡೀತಿದ್ನಿ, ಆಗ ಬಸವಣ್ಣ ಮಂಗಳವಾಡಕ್ಕ ಬಂದ, ಇನ್ನೂ ಇಪ್ಪತ್ತು ತುಂಬಿರಾಕಿಲ್ಲ– ಆದರೆ ಏನು ಮಾತು! ಏನು ಚಟುವಟಿಕೆ! ಆಗಳೇ ಅನತಿದ್ದ; 'ರಾಜ್ಯಭಾರ ಅಂದರ ಕಾಯಕ. ಅದಕ್ಕ ವಂಶಾ ಇದ್ದರ ಸಾಲದು. ಯೋಗ್ಯತಾ ಬೇಕು' ಅಂತ. ಬಸವಣ್ಣ, ಖರೆನ ನೀ ಅಂದು ಆ ಮಾತು ಆಡದೇ ಹೋಗಿದ್ದರ ನಾ ಚಾಲುಕ್ಯರ ಕೈಯ್ಯಾಗಿಂದ ಈ ಪಟ್ಟ ಕಸಗೊಂತಿದ್ದಿಲ್ಲ. ಕಲ್ಯಾಣದ ಚಕ್ರವರ್ತಿ ಆಗತಿದ್ದಿಲ್ಲ.

©KTBS Not to be republished

## ಕೃತಿಕಾರರ ಪರಿಚಯ



ಬಹುಭಾಷೆಗಳನ್ನು ಬಲ್ಲ ಹಿರಿಮೆಗೆ ಪಾತ್ರರಾಗಿರುವ ಗಿರೀಶ ಕಾರ್ನಾಡರು ೧೯೩೮ ಮೇ ೧೯ರಂದು ಮಹಾರಾಷ್ಟ್ರದ ಮಾಥೇರಾನದಲ್ಲಿ ಜನಿಸಿದರು. ಇವರು ಬರೆದಿರುವ ಕೆಲವು ಪ್ರಸಿದ್ಧ ನಾಟಕಗಳೆಂದರೆ 'ಯಯಾತಿ', 'ತುಘಲಕ್', 'ಹಯವದನ', 'ಅಂಜುಮಲ್ಲಿಗೆ', 'ನಾಗಮಂಡಲ', 'ಟಿಪ್ಪುವಿನ ಕನಸುಗಳು', 'ಅಗ್ನಿ ಮತ್ತು ಮಳೆ''ತಲೆದಂಡ' ಮುಂತಾದವು. 'ಆಡಾಡತ ಆಯುಷ್ಯ' ಇವರ ಆತ್ಮಕಥೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಶ್ರೀಯುತರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪದ್ಮಶ್ರೀ, ಪದ್ಮಭೂಷಣ, ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿಗಳನ್ನೊಳಗೊಂಡಂತೆ ಅನೇಕ ಪ್ರಶಸ್ತಿಗಳು ಲಭ್ಯವಾಗಿವೆ. ಚಲನಚಿತ್ರ ಹಾಗೂ ನಾಟಕಗಳನ್ನು ನಿರ್ದೇಶಿಸುವುದರ ಜೊತೆಗೆ ಅಭಿನಯಿಸಿದ್ದಾರೆ.

ಪ್ರಸ್ತುತ 'ಅಧಿಕಾರ' ಪಠ್ಯಭಾಗವನ್ನು 'ತಲೆದಂಡ' ನಾಟಕದ ಮೂರನೇ ದೃಶ್ಯದಿಂದ ಆರಿಸಿಕೊಳ್ಳಲಾಗಿದೆ.

## ಪದಗಳ ಅರ್ಥ

ಅನುಭಾವ–ಅತೀಂದ್ರಿಯವಾದ ಅನುಭವ;

ಅರಕಳಿ–ಕೊರತೆ;

ಅರಸೊತ್ತಿಗೆ–ರಾಜಪ್ರಭುತ್ವ;

ಅರಿವುಗೇಡಿ–ತಿಳಿಗೇಡಿ;

ಊಳಿಗದವರು–ಸೇವಕರು;

ಎಬಡ–ದಡ್ಡ;

ಒಜ್ಜೆ–ಜವಾಬ್ದಾರಿ, ಹೊಣೆಗಾರಿಕೆ;

ಓಲಗ–ಆಸ್ಥಾನ, ರಾಜಸಭೆ;

ಕನಲು–ಕೆರಳು;

ಕೊಟ್ಟಣ–ಆಶ್ರಯ, ರಕ್ಷಣೆ;

ದಿಗಂತ–ದಿಕ್ಕಿನಕೊನೆ, ಕ್ಷಿತಿಜ;

ನಶ್ವರ–ನಾಶವಾಗತಕ್ಕದ್ದು, ಅಶಾಶ್ವತ;

ಪರಾಕು–ಹೊಗಳಿಕೆ;

ಪ್ರಚೋದನೆ–ಪ್ರೇರಣೆ, ಉದ್ದೀಪನೆ;

ಬಿಟ್ಟಿ–ಅರಮನೆಗೆ ಮಾಡುವ ಉಚಿತ ಚಾಕರಿ;

ಭಂಡಾರ–ರಾಜನ ಬೊಕ್ಕಸ;

ಮಹಾಮನಿ–ಶರಣರು ಚರ್ಚೆಗೆ ಸೇರುತ್ತಿದ್ದ ಸ್ಥಳ;

ವರ್ಧಿಸು–ಹೆಚ್ಚಾಗು;

ವೀರಗಲ್ಲು–ಯುದ್ಧದಲ್ಲಿ ಮಡಿದ ವೀರರ ಸಲುವಾಗಿ ನಿಲ್ಲಿಸುತ್ತಿದ್ದ ಸ್ಮಾರಕ;

ವೃಷಭ–ಬಸವ, ಎತ್ತು;

ಸಂಭಾಳಿಸು–ಸುಧಾರಿಸು, ನಿರ್ವಹಿಸು;

ಹೊಳ್ಳಿ–ಮರಳಿ, ವಾಪಾಸು;

©KTBS
Not to be republished

## ಅಭ್ಯಾಸ

**ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

೧. ಗುಡ್ಡೆವ್ವ ಮುದುಕಿಯು ನಾಚಿಕೊಂಡಿದ್ದೇಕೆ?

೨. ಬಿರುದಾವಳಿಗಳು ಬೆಳೆಯುತ್ತಾ ಹೋದರೆ ಏನಾಗುವುದೆಂದು ಬಸವಣ್ಣನವರು ಹೇಳಿದರು?

೩. ಮಂಚ್ಯಣಕ್ರಮಿತರ ಯಾವ ಮಾತಿಗೆ ಬಸವಣ್ಣನವರು ಕನಲಿದರು?

೪. ಬಿಜ್ಜಳನು ನೇರವಾದ ಉತ್ತರವನ್ನು ಬಯಸಿ ಬಸವಣ್ಣನವರಿಗೆ ಕೇಳಿದ ಪ್ರಶ್ನೆ ಯಾವುದು?

೫. ಮಂಚ್ಯಣಕ್ರಮಿತರ ಪ್ರಕಾರ ಪ್ರಜೆಗಳ ಕರ್ತವ್ಯವೇನು?

೬. ಅಧಿಕಾರಿಗಳ ಕರ್ತವ್ಯ ಯಾವುದೆಂದು ಬಸವಣ್ಣನವರು ಹೇಳಿದರು?

೭. ಬಿಜ್ಜಳನು ಕೀಲಿಕೈಯನ್ನು ತೆಗೆದುಕೊಳ್ಳುವುದಿಲ್ಲವೆಂದರೆ ಏನು ಮಾಡುವೆನೆಂದು ಬಸವಣ್ಣನವರು ಹೇಳಿದರು?

**ಆ) ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಎರಡು-ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

೧. ಬಿಜ್ಜಳನು ಬಿರುದಾವಳಿಗಳನ್ನು ಏಕೆ ಬರೆಸಿದನು?

೨. ಬಿಜ್ಜಳನನ್ನು ಕುರಿತು ವಂದಿ ಮಾಗಧರು ಏನೆಂದು ಪರಾಕು ಮಾಡಿದರು?

೩. ಹದಿನೈದು ವರ್ಷಗಳ ಹಿಂದೆಯೇ ಬಸವಣ್ಣನವರು ಬಿಜ್ಜಳನಿಗೆ ಏನೆಂದು ಹೇಳಿದ್ದರು?

೪. ಶಾಸನಗಳನ್ನು ಹಾಕಿಸುವುದರ ಬಗೆಗೆ ಬಸವಣ್ಣನವರ ಅಭಿಪ್ರಾಯವೇನು?

**ಇ) ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಏಳು-ಎಂಟು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

೧. ಬಿಜ್ಜಳ ಮತ್ತು ಬಸವಣ್ಣನವರ ನಡುವೆ ನಡೆದ ಸಂಭಾಷಣೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

೨. 'ಅಧಿಕಾರ ಎನ್ನುವುದು ಕಾಯಕ' ಎನ್ನುವ ಭಾವನೆ 'ಅಧಿಕಾರ' ನಾಟಕದಲ್ಲಿ ಹೇಗೆ ಮೂಡಿಬಂದಿದೆ?

೩. ಬಸವಣ್ಣ ಮತ್ತು ಮಂಚ್ಯಣಕ್ರಮಿತರವರ ವ್ಯಕ್ತಿತ್ವವನ್ನು ವರ್ಣಿಸಿರಿ

**ಈ) ಕೆಳಗಿನ ಸನ್ನಿವೇಶವನ್ನು ಸ್ವಾರಸ್ಯಸಹಿತ ವಿವರಿಸಿರಿ.**

೧. "ನಿನ್ನ ಮಾತು ಯಾರು ತಗದು ಹಾಕತಾರಪಾ, ಬಸಣ್ಣ?"

೨. "ಆಮ್ಯಾಲೆ ನಿನಗೇನನಸತದ ಹೇಳು. ಆತ?"

೩. "ಸಂಸ್ಕೃತಕ್ಕಿರೋ ಘನತೆ-ಗಾಂಭೀರ್ಯ ಕನ್ನಡಕ್ಕೆ ಹ್ಯಾಂಗ ಬಂದೀತು?"

೪. "ನಾ ಭಂಡಾರದಲ್ಲಿ ದುಡಿಯೋದು ಬಿಜ್ಜಳ ಮಹಾರಾಜರ ಅನುಕೂಲತೆಗಾಗಿ ಅಲ್ಲ."

೫. "ಹೊಸ ಪದ್ಧತಿ ಇದ್ದೀತು, ಮಹಾಸ್ವಾಮಿ. ನಾನಿನ್ನು ಕಲಿತಿಲ್ಲ."

೬. "ರಾಜ್ಯಭಾರ ಅಂದರ ಕಾಯಕ ಅದಕ್ಕ ವಂಶಾ ಇದ್ದರ ಸಾಲದು."

©KTBS Not to be republished

**ಉ) ಕೆಳಗಿನ ವಾಕ್ಯಗಳಲ್ಲಿ ಖಾಲಿಬಿಟ್ಟಿರುವ ಸ್ಥಳಗಳನ್ನು ತುಂಬಿರಿ.**

೧. ಬಿಜ್ಜಳನೊಂದಿಗೆ ಬಂದ ಬ್ರಾಹ್ಮಣನ ಹೆಸರು----------

೨. ಗುಡ್ಡೆವ್ವನು ಚೆನ್ನಾಗಿ ಹಾಡುತ್ತಿದ್ದ ಗೀತೆ------------

೩. ಬಿಜ್ಜಳನ ಬಿರುದಾವಳಿಗಳನ್ನು ಬರೆದವರು---------

೪. ಬಿಜ್ಜಳನ ಪತ್ನಿಯ ಹೆಸರು-----------

## ಭಾಷಾಭ್ಯಾಸ

**ಅ) ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.**

ಸಣ್ಣಾಕಿ, ರಾಜಾಧಿರಾಜ, ಪುರಾಧೀಶ್ವರ, ಶಿವಾಲಯ, ದಿಗಂತ, ಬಿರುದಾವಳಿ.

**ಆ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.**

ಉಪಕಾರ, ನಂಬಿಕೆ, ಸ್ಥಾವರ, ಖರೆ.

**ಇ) ಕೆಳಗಿನ ಪದಗಳ ಗ್ರಾಂಥಿಕರೂಪವನ್ನು ಬರೆಯಿರಿ.**

ಕುಂತು, ಕೈಯ್ಯಾಗ, ಮನೀಗೆ, ಬಿಡದನ್ನ, ಅನಸತೈತಿ, ಹ್ಯಾಂಗ, ಆಮ್ಯಾಲೆ, ಹಾಂಗದ, ಬೆಳಕೋತ.

**ಈ) ಕೆಳಗೆ ಕೊಟ್ಟಿರುವ ತತ್ಸಮಗಳಿಗೆ ತದ್ಭವಗಳನ್ನು ಬರೆಯಿರಿ.**

ಸಂಸ್ಕೃತ, ಯುದ್ಧ, ವೃಷಭ, ಕೀರ್ತಿ, ರಾಜ, ವರ್ಷ, ಅಕ್ಷರ.

**ಉ) ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.**

ಧ್ವಜ, ದಿಗಂತ, ಭಾಸ್ಕರ, ಸುವರ್ಣ.

## ಭಾಷಾ ಚಟುವಟಿಕೆ

ಅ) ನಿಮ್ಮ ಅನುಭವಕ್ಕೆ ಬಂದಿರುವ ಯಾವುದಾದರು ಘಟನೆಯನ್ನು ಕತೆಯ ರೂಪದಲ್ಲಿ ಬರೆಯಿರಿ.

ಆ) ಮಾನವೀಯತೆಯನ್ನು ಬಿಂಬಿಸುವ ಕತೆ, ಕವನ, ನಾಟಕಗಳನ್ನು ಸಂಗ್ರಹಿಸಿ ಓದಿರಿ.

ಇ) ಹೃದಯವಂತಿಕೆಯನ್ನು ಮೆರೆದ ನೈಜ ಪ್ರಸಂಗಳನ್ನು ಕೇಳಿತಿಳಿಯಿರಿ.

## ವ್ಯಾಕರಣ

### ಭಾಗ–'ಅ'

### ಸಂಯುಕ್ತಾಕ್ಷರಗಳು

ಎರಡು ಅಥವಾ ಅದಕ್ಕಿಂತ ಹೆಚ್ಚಿನ ವ್ಯಂಜನಗಳು ಒಂದು ಸ್ವರದೊಂದಿಗೆ ಸೇರಿ ಆಗುವ ಅಕ್ಷರವೇ ಸಂಯುಕ್ತಾಕ್ಷರ. ಸಂಯುಕ್ತಾಕ್ಷರದಲ್ಲಿ ಬಳಸುವ ವ್ಯಂಜನ ಸಂಜ್ಞೆಗಳನ್ನು ಒತ್ತುಗಳೆಂದು ಕರೆಯುತ್ತಾರೆ. ಒತ್ತುಗಳನ್ನು ಹೊಂದಿರುವ ಅಕ್ಷರಗಳೇ ಸಂಯುಕ್ತಾಕ್ಷರಗಳು.

© KTBS Not to be republished

ವ್ಯಂಜನ+ವ್ಯಂಜನ+ಸ್ವರ ಅಥವಾ ವ್ಯಂಜನ+ವ್ಯಂಜನ+ವ್ಯಂಜನ+ಸ್ವರ=ಸಂಯುಕ್ತಾಕ್ಷರ

ವ್ಯಂ + ವ್ಯಂ + ಸ್ವ = ಸಂಯುಕ್ತಾಕ್ಷರ

ಕ್ + ತ್ + ಅ = ಕ್ತ

ವ್ಯಂ + ವ್ಯಂ + ವ್ಯಂ + ಸ್ವ =ಸಂಯುಕ್ತಾಕ್ಷರ

ಸ್ + ತ್ + ರ್ + ಅ = ಸ್ತ್ರ

ಸಂಯುಕ್ತಾಕ್ಷರದಿಂದ ಕೂಡಿದ ಪದಗಳು ಅಕ್ಷರ, ಶಬ್ದ, ಭಕ್ತ, ಶಾಸ್ತ್ರ

**ಸಂಯುಕ್ತಾಕ್ಷರಗಳಲ್ಲಿ ಎರಡು ವಿಧ:**

೧) ಸಜಾತೀಯ ಸಂಯುಕ್ತಾಕ್ಷರ   ೨) ವಿಜಾತೀಯ ಸಂಯುಕ್ತಾಕ್ಷರ

ಒಂದೇ ಜಾತಿಯ ವ್ಯಂಜನಗಳನ್ನು ಹೊಂದಿರುವ ಸಂಯುಕ್ತಾಕ್ಷರವೇ 'ಸಜಾತೀಯ ಸಂಯುಕ್ತಾಕ್ಷರ' ಉದಾ: ನ್ನ, ಮ್ಮ, ಗ್ಗ, ರ್ರ, ಸ್ಸ ಇತ್ಯಾದಿ.

ಬೇರೆ ಬೇರೆ ವ್ಯಂಜನಗಳನ್ನು ಹೊಂದಿರುವ ಸಂಯುಕ್ತಾಕ್ಷರವೇ 'ವಿಜಾತೀಯ ಸಂಯುಕ್ತಾಕ್ಷ' ಉದಾ: ಸ್ತ್ರ, ಖ್ಯಾ, ಕ್ಷ, ಯೋರ್ಗ, ಜ್ಞ ಇತ್ಯಾದಿ.

**(ಅ) ಕೆಳಗೆ ಕೊಟ್ಟಿರುವ ಪದಗಳನ್ನು ಸಜಾತೀಯ ಮತ್ತು ವಿಜಾತೀಯ ಸಂಯುಕ್ತಾಕ್ಷರಗಳೆಂದು ವಿಂಗಡಿಸಿ ಬರೆಯಿರಿ.**

**ಉದಾ:** ದಟ್ಟ, ಪಾತ್ರ, ಪ್ರತಿನಿತ್ಯ, ಬೇಸತ್ತ, ಪ್ರಾಣಿ, ಒಪ್ಪಿತು, ನೆಮ್ಮದಿ, ಸ್ವಲ್ಪ, ಅಲ್ಲಿದ್ದ, ಕ್ಷಮಿಸು, ಗರ್ಜಿಸು.

## ಕನ್ನಡ ಸಂಧಿಗಳು

**ಕೆಳಗಿನ ಪದಗಳನ್ನು ಗಮನಿಸಿರಿ.**

ಗುಂಡಿಕ್ಕು, ಹೊಲವನ್ನು, ಹೊಸಗನ್ನಡ

**ಇವುಗಳನ್ನು ಬಿಡಿಸಿ ಬರೆದಾಗ**

| | | | |
|---|---|---|---|
| ಉ+ | ಇ | = | ಇ |
| ಗುಂಡು+ | ಇಕ್ಕು | = | ಗುಂಡಿಕ್ಕು |
| ಅ + | ಅ | = | ವ |
| ಹೊಲ + | ಅನ್ನು | = | ಹೊಲವನ್ನು |
| ಅ + | ಕ್ | = | ಗ್ |
| ಹೊಸ + | ಕನ್ನಡ | = | ಹೊಸಗನ್ನಡ |

ಈ ಮೇಲಿನ ಶಬ್ದಗಳನ್ನು ಕೂಡಿಸಿ ಬರೆದಾಗ ಅವುಗಳ ಮಧ್ಯ ಅಕ್ಷರಗಳು ಕಾಲ ವಿಳಂಬವಿಲ್ಲದೆ ಸೇರಿ ಅರ್ಥಪೂರ್ಣವಾದ ಪದ ದೊರೆಯುತ್ತದೆ.

©KTBS
Not to be republished

ಹೀಗೆ ಎರಡು ಶಬ್ದಗಳು ಕಾಲ ವಿಳಂಬವಿಲ್ಲದೇ ಒಂದೆಡೆ ಅರ್ಥವತ್ತಾಗಿ ಒಂದಾಗುವುದಕ್ಕೆ 'ಸಂಧಿ' ಎಂದು ಕರೆಯುತ್ತಾರೆ. ಈ ರೀತಿಯಲ್ಲಿ ಶಬ್ದಗಳು ಒಟ್ಟು ಸೇರುವಾಗ ಮೂಲ ಪದಗಳ ಅರ್ಥಕ್ಕೆ ಯಾವ ಲೋಪವೂ ಬರಬಾರದು. ಅರ್ಥಕ್ಕೆ ಲೋಪ ಬರುವುದಾದಲ್ಲಿ ಸಂಧಿ ಮಾಡಬಾರದೆಂಬ ನಿಯಮವುಂಟು.

ಹೀಗೆ ಸಂಧಿಯಾಗುವಾಗ ಸ್ವರದ ಮುಂದೆ ಸ್ವರ ಇದ್ದು ಸಂಧಿಯಾದರೆ ಅದು 'ಸ್ವರಸಂಧಿ'. ಸ್ವರದ ಮುಂದೆ ವ್ಯಂಜನ ವ್ಯಂಜನದ ಮುಂದೆ ಸ್ವರ ಅಥವಾ ವ್ಯಂಜನ ಇದ್ದು ಸಂಧಿಯಾದರೆ ಅದು 'ವ್ಯಂಜನ ಸಂಧಿ'. ಸಂಧಿಗಳಲ್ಲಿ 'ಕನ್ನಡ ಸಂಧಿ' ಮತ್ತು 'ಸಂಸ್ಕೃತ ಸಂಧಿ' ಗಳೆಂದು ಎರಡು ವಿಧಗಳಿವೆ. ಕನ್ನಡ ಶಬ್ದಗಳೇ ಸೇರಿ ಅಥವಾ ಕನ್ನಡ ಮತ್ತು ಸಂಸ್ಕೃತ ಶಬ್ದಗಳು ಸೇರಿ ಸಂಧಿಯಾದರೆ 'ಕನ್ನಡ ಸಂಧಿ' ಎಂತಲೂ ಸಂಸ್ಕೃತ ಪದಗಳು ಸೇರಿ ಸಂಧಿಯಾದರೆ 'ಸಂಸ್ಕೃತ ಸಂಧಿ' ಎಂತಲೂ ಕರೆಯಲ್ಪಡುತ್ತವೆ.

ಕನ್ನಡ ಸಂಧಿಯಲ್ಲಿ ಪ್ರಮುಖವಾಗಿ ಲೋಪ, ಆಗಮ, ಆದೇಶ ಎಂಬ ಮೂರು ಪ್ರಕಾರಗಳಿರುತ್ತವೆ.

## ಲೋಪಸಂಧಿ

ಉ + ಊ 'ಉ' ಲೋಪ.

೧) ಊರು + ಊರು = ಊರೂರು

ಎ + ಒ 'ಎ' ಲೋಪ

೨) ಬೇರೆ + ಒಬ್ಬ = ಬೇರೊಬ್ಬ

ಇ + ಅ 'ಇ' ಲೋಪ.

೩) ಅಲ್ಲಿ + ಅಲ್ಲಿ = ಅಲ್ಲಲ್ಲಿ

ಮೇಲಿನ ಉದಾಹರಣೆಯಲ್ಲಿ ಪೂರ್ವ ಪದವಾದ ಊರು ಎಂಬಲ್ಲಿಯ ಕೊನೆಯ ಸ್ವರ 'ಉ' ಲೋಪವಾಗಿವೆ. ಅದೇ ರೀತಿ ಎರಡನೇ ಮತ್ತು ಮೂರನೇ ಉದಾಹರಣೆಗಳಲ್ಲಿ ಕ್ರಮವಾಗಿ 'ಎ' ಮತ್ತು 'ಇ' ಲೋಪವಾಗಿವೆ.

ಸ್ವರದ ಮುಂದೆ ಸ್ವರವು ಬಂದು ಸಂಧಿ ಕಾರ್ಯ ಮಾಡುವಾಗ ಪೂರ್ವ ಪದದ ಕೊನೆಯ ಸ್ವರವು ಅರ್ಥ ವ್ಯತ್ಯಾಸವಾಗದಂತೆ ಲೋಪವಾದರೆ ಅದಕ್ಕೆ ಲೋಪಸಂಧಿ ಅಥವಾ ಸ್ವರಲೋಪಸಂಧಿ ಎಂದು ಕರೆಯುತ್ತಾರೆ. ಇದೇ ರೀತಿಯಾಗಿ ಈ ಕೆಳಗಿನ ಪದಗಳನ್ನು ಬಿಡಿಸಿರಿ.

ದೇವರಿಂದ, ಎಲ್ಲುಂಟು, ಮಾತಿಲ್ಲ, ಬೇರೆಲ್ಲಿ.

## ಆಗಮ ಸಂಧಿ

| | | | | |
|---|---|---|---|---|
| ಎ | + | ಇಂ | = | 'ಯ್' ಆಗಮ |
| ಮನೆ | + | ಇಂದ | = | ಮನೆಯಿಂದ |
| ಉ | + | ಅ | = | 'ವ' ಆಗಮ |
| ಹಸು | + | ಅನ್ನು | = | ಹಸುವನ್ನು |

©KTBS Not to be republished

ಈ ಮೇಲಿನ ಉದಾಹರಣೆಗಳನ್ನು ಗಮನಿಸಿ. ಇಲ್ಲಿ ಸ್ವರಕ್ಕೆ ಸ್ವರ ಪರವಾಗಿದೆ. (ಉ+ಅ, ಎ+ಇ) ಆದರೆ ಕೂಡಿಸಿದಾಗ ಯಾವ ಸ್ವರವೂ ಲೋಪವಾಗಿಲ್ಲ ಅಥವಾ ಬಿಟ್ಟುಹೋಗಿಲ್ಲ. ಒಂದು ವೇಳೆ ಸ್ವರ ಲೋಪವಾದರೆ ಅರ್ಥ ಕೆಟ್ಟು ಹೋಗುತ್ತದೆ. ಆದುದರಿಂದ ಆ ಎರಡೂ ಸ್ವರಗಳ ನಡುವೆ 'ಯ್' ಅಥವಾ 'ವ್'– ವ್ಯಂಜನ ಹೆಚ್ಚಾಗಿ ಸೇರಿಕೊಂಡಿದೆ ಅಂದರೆ ಆಗಮವಾಗಿದೆ.

ಹೀಗೆ ಸ್ವರಕ್ಕೆ ಸ್ವರ ಪರವಾದಾಗ ಲೋಪವಾಗಿ ಅರ್ಥ ಕೆಡುವುದಿದ್ದರೆ ಆ ಸ್ವರಗಳ ಮಧ್ಯೆ 'ಯ'ಕಾರ ಅಥವಾ 'ವ'ಕಾರವು ಹೊಸದಾಗಿ ಸೇರಿ ಆಗಮ ಸಂಧಿಯಾಗುವುದು. 'ಯ'ಕಾರ ಸೇರಿದರೆ ಯಕಾರಾಗಮ ಸಂಧಿಯೂ, 'ವ'ಕಾರ ಸೇರಿದರೆ ವಕಾರಾಗಮ ಸಂಧಿ ಎಂದೂ ಕರೆಯುತ್ತಾರೆ.

## ಆದೇಶ ಸಂಧಿ

**ಕೆಳಗಿನ ಉದಾಹರಣೆಗಳನ್ನು ಗಮನಿಸಿರಿ.**

ಕ್ ಗ

ತಲೆ + ಕೂದಲು = ತಲೆಗೂದಲು (ಕ್ ಕಾರಕ್ಕೆ ಗ್‌ಕಾರ ಆದೇಶ)

ತ್ ದ್

ಕೆಳ + ತುಟಿ = ಕೆಳದುಟಿ (ತ್ ಕಾರಕ್ಕೆ ದ್‌ಕಾರ ಆದೇಶ)

ಪ್ ಬ್

ಕಣ್ + ಪನಿ = ಕಂಬನಿ (ಪ್ ಕಾರಕ್ಕೆ ಬ್ ಕಾರ ಆದೇಶ)

ಸಂಧಿಯಾಗುವಾಗ ಒಂದು ಅಕ್ಷರದ ಸ್ಥಾನದಲ್ಲಿ ಬೇರೊಂದು ಅಕ್ಷರವು ಬರುವುದೇ ಆದೇಶಸಂಧಿ. ಆದೇಶಸಂಧಿಯನ್ನು ಕನ್ನಡದ ವ್ಯಂಜನ ಸಂಧಿ ಎಂದು ಕರೆಯುವರು.

ಉತ್ತರ ಪದದ ಮೊದಲ ವ್ಯಂಜನಾಕ್ಷರಗಳಾದ ಕ, ತ, ಪ ಗಳಿಗೆ ಅನುಕ್ರಮವಾಗಿ ಗ, ದ, ಬ ವ್ಯಂಜನಾಕ್ಷರಗಳು ಆದೇಶವಾಗಿ ಬರುತ್ತವೆ.

## ಭಾಗ – 'ಆ'

**ಅ) ಕೆಳಗೆ ಕೊಟ್ಟಿರುವ ಪದಗಳನ್ನು ಸಜಾತೀಯ ಮತ್ತು ವಿಜಾತೀಯ ಸಂಯುಕ್ತಾಕ್ಷರಗಳೆಂದು ವಿಂಗಡಿಸಿ ಬರೆಯಿರಿ.**

ದಟ್ಟ, ಪಾತ್ರ, ಪ್ರತಿನಿತ್ಯ, ಬೇಸತ್ತ, ಪ್ರಾಣಿ, ಒಪ್ಪಿತು, ನೆಮ್ಮದಿ, ಸ್ವಲ್ಪ, ಅಲ್ಲಿದ್ದ, ಕ್ಷಮಿಸು, ಗರ್ಜಿಸು.

**ಆ) ಕೆಳಗಿನ ಪದಗಳನ್ನು ಕೂಡಿಸಿ ಬರೆಯಿರಿ.**

ಹುಲಿ + ತೊಗಲು , ಮಳೆ + ಕಾಲ

**ಇ) ಕನ್ನಡ ಸಂಧಿಗಳಿಗೆ ಐದೈದು ಉದಾಹರಣೆಗಳನ್ನು ಬರೆಯಿರಿ.**

* * * * *

©KTBS Not to be republished

# ೩. ಮಿತ್ರ

– ಎಂ. ಅಕಬರ ಅಲಿ

**ಪ್ರವೇಶ:** ಸೂರ್ಯ ಒಂದು ದೊಡ್ಡ ನಕ್ಷತ್ರ. ಭೂಮಿಗೆ ಬೆಳಕು, ಶಕ್ತಿ ಕೊಡುವ ಗೆಳೆಯ. ಇರುಳನ್ನು ಕಳೆದು ಬೆಳಕನ್ನು ತರುವ ಇವನು ಮನುಷ್ಯರಿಗಷ್ಟೇ ಅಲ್ಲ, ಸಕಲ ಜೀವರಾಶಿಗಳಿಗೂ ಚೇತನ ನೀಡುವವನು. ಎಲ್ಲರ ಬಾಳಿನಲ್ಲೂ ಬೆಳಕು ಚೆಲ್ಲುವವನು. ಇಂತಹ ಸೂರ್ಯನ ಶಕ್ತಿ ಸಾಮರ್ಥ್ಯದ ಚಿತ್ರಣ ಇಲ್ಲಿದೆ.




ಇರುಳನು ಚದುರಿಸಿ ಹಗಲನು ಕುದುರಿಸಿ
ಹೂಬನವೆಲ್ಲವ ನಳನಳಿಸಿ
ಬಂದನು ಮಿತ್ರ ಪಾವನ ಪಾತ್ರ
ಜೀವನವೆಲ್ಲವ ನಲಿನಲಿಸಿ

ರನ್ನದ ಕನ್ನಡಿ ಬದುಕಿಗೆ ಹಿಡಿಯುತ
ಮಮತೆಯ ದೃಷ್ಟಿಯ ಬೀರುತಿಹ
ಬಾಳನು ಬೆಳಗಿಸಿ, ಕೊಳೆ ತಿಳಿಯಾಗಿಸಿ
ಸಮತೆಯ ಸೃಷ್ಟಿಯ ತೋರುತಿಹ.

ಬಾಳಿನ ನಂಜನು ಗೋಳಿನ ಮಂಜನು
ಕಳೆಯಲಿಕೆಂದೇ ಬಂದಿಹನು
ಹೊಗೆಯನು ಚದುರಿಸಿ ನಗೆಯನು ಕುದುರಿಸಿ
ಬಗೆಯನು ಬೆಳೆಸುತ ನಿಂದಿಹನು

## ಕೃತಿಕಾರರ ಪರಿಚಯ



೧೯೨೫ರಲ್ಲಿ ಹುಟ್ಟಿದ ಎಂ. ಅಕಬರ ಅಲಿ ಬೆಳಗಾವಿ ಜಿಲ್ಲೆಯ ಉಳ್ಳಾಗಡ್ಡಿ ಖಾನಾಪುರದವರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದ ಇವರು 'ನವಚೇತನ', 'ಸುಮನ ಸೌರಭ', 'ಗಂಧಕೇಶ್ವರ', 'ತಮಸಾ ನದಿಯ ಎಡಬಲದಿ', 'ಅಕಬರ ಅಲಿ ಚುಟುಕುಗಳು', 'ಕಸಿ ಗುಲಾಬಿಯ ಕಥನ' ಎಂಬ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕೇಂದ್ರ ಸರ್ಕಾರದ ಶಿಕ್ಷಣ ಇಲಾಖೆ ಬಹುಮಾನ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳು ಸಂದಿವೆ. ಈ ಕವನವನ್ನು 'ತಮಸಾ ನದಿಯ ಎಡಬಲದಿ' ಸಂಕಲನದಿಂದ ಆರಿಸಲಾಗಿದೆ. ೨೦೧೬ರಲ್ಲಿ ಶ್ರೀಯುತರು ನಿಧನರಾದರು.

©KTBS Not to be republished

## ಪದಗಳ ಅರ್ಥ

ಗೋಳು–ಕಷ್ಟ ; ಮಂಜು–ಮಸುಕು, ಮಬ್ಬು, ಇಬ್ಬನಿ;

ನಂಜು–ವಿಷ ; ಮಮತೆ–ಪ್ರೀತಿ;

ಪಾವನ–ಪವಿತ್ರ; ಮಿತ್ರ–ಸೂರ್ಯ, ಗೆಳೆಯ;

ಬಗೆ–ಬುದ್ಧಿ, ಮನಸ್ಸು; ರನ್ನ–ರತ್ನ;

ಬಾಳು–ಜೀವನ; ಸೃಷ್ಟಿ–ಪ್ರಕೃತಿ.

## ಅಭ್ಯಾಸ

**ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಇರುಳನ್ನು ಚದುರಿಸುವವನು ಯಾರು?

೨. ಮಿತ್ರನು ಮಮತೆಯ ದೃಷ್ಟಿಯನ್ನು ಹೇಗೆ ಬೀರುತ್ತಿರುವನೆಂದು ಅಕಬರ ಅಲಿಯವರು ಹೇಳಿದ್ದಾರೆ?

೩. 'ಮಿತ್ರ' ಕವನದಲ್ಲಿ ಹೇಳಿರುವಂತೆ ನಗೆಯನ್ನು ಕುದುರಿಸುವವರು ಯಾರು?

೪. 'ಮಿತ್ರ' ಪದ್ಯದಲ್ಲಿ ತಿಳಿಸಿರುವಂತೆ ಸೂರ್ಯನು ಏನನ್ನು ಕಳೆಯಲು ಬಂದಿರುವನು?

**ಆ) ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

೧. ಮಿತ್ರನನ್ನು ಪಾವನ ಪಾತ್ರನೆಂದು ಕವಿ ಏಕೆ ಕರೆದಿದ್ದಾರೆ?

೨. ಸೂರ್ಯನು ಸಮತೆಯನ್ನು ಹೇಗೆ ತೋರುತ್ತಿರುವನೆಂದು ಅಕಬರ ಅಲಿಯವರು ಹೇಳಿದ್ದಾರೆ?

೩. 'ಮಿತ್ರ' ಪದ್ಯದಲ್ಲಿ ವರ್ಣಿಸಿರುವಂತೆ ಸೂರ್ಯನು ಕಷ್ಟಗಳನ್ನು ಕಳೆದು ಬಾಳನ್ನು ಹೇಗೆ ಹಸನುಗೊಳಿಸುತ್ತಿದ್ದಾನೆ?

**ಇ) ಕೆಳಗಿನ ನುಡಿಗಳ ಸಂದರ್ಭವನ್ನು ಸ್ವಾರಸ್ಯ ಸಹಿತ ವಿವರಿಸಿರಿ.**

೧. "ಜೀವನವೆಲ್ಲವ ನಲಿನಲಿಸಿ".

೨. "ರನ್ನದ ಕನ್ನಡಿ ಬದುಕಿಗೆ ಹಿಡಿದಿಹನು".

೩. "ಬಗೆಯನು ಬೆಳೆಸುತ ನಿಂದಿಹನು".

©KTBS Not to be republished

## ಭಾಷಾಭ್ಯಾಸ

**ಅ) ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯವನ್ನು ರಚಿಸಿರಿ.**

೧. ಇರುಳು. ೨. ಮಂಜು. ೩. ಗೋಳು. ೪. ಕೊಳೆ.

**ಆ) ಗುಂಪಿಗೆ ಸೇರದ ಪದವನ್ನು ಗುರುತಿಸಿ ಬರೆಯಿರಿ.**

೧. ಹೂವು, ಸುಮ, ಸುಗಂಧ, ಪುಷ್ಪ.

೨. ಮಿತ್ರ, ಗೆಳೆಯ, ಸ್ನೇಹಿತ, ಬಳಗ.

೩. ಬಾನು, ಭಾನು, ಆಕಾಶ, ಆಗಸ.

೪. ಜನನ, ಜೀವನ, ಬಾಳು, ಬದುಕು.

## ಭಾಷಾ ಚಟುವಟಿಕೆ

**ಅ. 'ಮಿತ್ರ' ಪದ್ಯವನ್ನು ಕಂಠಪಾಠ ಮಾಡಿರಿ.**

**ಆ. ಕುವೆಂಪು ಅವರ ಈ ಪದ್ಯಭಾಗದ ಸ್ವಾರಸ್ಯವನ್ನು ತಿಳಿದುಕೊಂಡು ರಾಗವಾಗಿ ಹಾಡಿರಿ.**

ಆನಂದಮಯ ಈ ಜಗಹೃದಯ
ಏತಕೆ ಭಯ? ಮಾಣೊ!
ಸೂರ್ಯೋದಯ ಚಂದ್ರೋದಯ
ದೇವರ ದಯ ಕಾಣೊ

ಬಿಸಿಲಿದು ಬರಿ ಬಿಸಿಲಲ್ಲವೊ
ಸೂರ್ಯನ ಕೃಪೆ ಕಾಣೊ
ಸೂರ್ಯನು ಬರಿ ರವಿಯಲ್ಲವೊ
ಆ ಭ್ರಾಂತಿಯ ಮಾಣೊ!

©KTBS Not to be republished

–ಕುವೆಂಪು

## ವ್ಯಾಕರಣ

## ಭಾಗ 'ಅ'

## ಛಂದಸ್ಸು

**ಈ ಕೆಳಗಿನ ಪದ್ಯಭಾಗವನ್ನು ಗಮನಿಸಿ:**

ಆಚಾರವಿಲ್ಲದ ನಾಲಗೆ ನಿನ್ನ
ನೀಚ ಬುದ್ಧಿಯ ಬಿಡು ನಾಲಗೆ
ವಿಚಾರವಿಲ್ಲದೆ ಪರರ ದೂಷಿಸುವುದಕೆ
ಚಾಚಿಕೊಂಡಿರುವಂಥ ನಾಲಗೆ

**– ಪುರಂದರದಾಸರು**

ಇಲ್ಲಿ ಪದ್ಯದ ಪ್ರತಿ ಸಾಲಿನ ಮೊದಲ ಪದವನ್ನು ಗಮನಿಸಿ, ಪದದಲ್ಲಿರುವ ಎರಡನೆಯ ವರ್ಣದ ವ್ಯಂಜನ 'ಚ್' ಎಲ್ಲಾ ಸಾಲಿನಲ್ಲೂ ಕ್ರಮವಾಗಿ ಬಂದಿದೆ. ಈ ರೀತಿ ಒಂದೇ ವ್ಯಂಜನಗಳು ಕ್ರಮವಾಗಿ ಬಂದ ಪದಗಳನ್ನು **'ಪ್ರಾಸ ಪದಗಳು'** ಎನ್ನುತ್ತೇವೆ. ಇವು ಪದ್ಯದ ಪ್ರತಿ ಸಾಲಿನ ಮೊದಲಲ್ಲೋ, ಮಧ್ಯದಲ್ಲೋ ಅಥವಾ ಕೊನೆಯಲ್ಲೋ ಬರಬಹುದು. ಹೀಗೆ ಬಂದ ಪದಗಳನ್ನು ಕ್ರಮವಾಗಿ ಆದಿಪ್ರಾಸ, ಮಧ್ಯಪ್ರಾಸ ಮತ್ತು ಅಂತ್ಯಪ್ರಾಸ ಎಂದು ಕರೆಯುತ್ತೇವೆ.

## ಭಾಗ 'ಆ'

**ದಿನಕರ ದೇಸಾಯಿ ಅವರು ಬರೆದಿರುವ ಕೆಳಗಿನ ಪದ್ಯದಲ್ಲಿ ಬಂದಿರುವ ಪ್ರಾಸಪದಗಳನ್ನು ಗುರುತಿಸಿ ಬರೆಯಿರಿ:**

ಎಲ್ಲರಿಗೊಂದೆ ಭೂತಲವೆಂದೆ
ಎಲ್ಲರಿಗೂ ಭಗವಂತನು ತಂದೆ
ಸರ್ವರಿಗೊಂದೆ ಸೂರ್ಯನ ಕಣ್ಣು
ವಿಧ ವಿಧ ಸಸ್ಯಕೆ ಒಂದೇ ಮಣ್ಣು
ಬಗೆ ಬಗೆಯಾದರೂ ದೇಹದ ಬಣ್ಣ
ಎಲ್ಲರ ನಗೆಯೂ ಒಂದೇ ಅಣ್ಣ
ಏತಕೆ ಯುದ್ಧವು? ಏತಕೆ ಮದ್ದು
ಒಂದೇ ಮನೆಯೊಳಗೆಲ್ಲರು ಇದ್ದು

**ಜಗತ್ತನ್ನು ಬೆಳಗಲು ಸೂರ್ಯ ಬೇಕು, ಬಾಳನ್ನು ಬೆಳಗಲು ಪುಸ್ತಕ ಬೇಕು.**

© KTBS Not to be republished

# ೪. ನಾಲಗೆ

– ಎನ್.ಎಸ್. ತಾರಾನಾಥ

**ಪ್ರವೇಶ:** ಒಬ್ಬ ವ್ಯಕ್ತಿಯು ತನ್ನ ಅನುಭವ, ವಿಚಾರ, ಭಾವನೆಗಳನ್ನು ಮತ್ತೊಬ್ಬರಿಗೆ ತಿಳಿಸಲು ಬಳಸುವ ಶಾಬ್ದಿಕ ಮಾಧ್ಯಮಕ್ಕೆ ಭಾಷೆ ಎಂದು ಕರೆಯುತ್ತಾರೆ. ಪ್ರತಿಯೊಬ್ಬ ವ್ಯಕ್ತಿಯು ಬಳಸುವ ಭಾಷೆಯು ಅವನ ವ್ಯಕ್ತಿತ್ವ ಮತ್ತು ಸಂಸ್ಕೃತಿಯನ್ನು ತಿಳಿಸುತ್ತದೆ. ಪದ ಹಾಗೂ ವಾಕ್ಯಗಳು ಭಾಷೆಯ ಅವಿಭಾಜ್ಯ ಅಂಗವಾಗಿರುತ್ತವೆ. ನಾವು ಮಾತನಾಡುವಾಗ ನಾಲಗೆಯು ಪ್ರಮುಖವಾದ ಕಾರ್ಯ ನಿರ್ವಹಿಸುತ್ತದೆ. ಪಂಚೇಂದ್ರಿಯಗಳಲ್ಲಿ ಒಂದಾದ ನಾಲಗೆಯ ಕೆಲಸ ಮತ್ತು ಸ್ಥಾನಮಾನವನ್ನು ಈ ಪಾಠದಲ್ಲಿ ಚರ್ಚಿಸಲಾಗಿದೆ.

ಕಣ್ಣು, ಕಿವಿ, ಮೂಗು, ಚರ್ಮ, ನಾಲಗೆ ಮನುಷ್ಯನ ಐದು ಇಂದ್ರಿಯಗಳು. ಕಣ್ಣು ನೋಡುತ್ತದೆ; ಕಿವಿ ಆಲಿಸುತ್ತದೆ; ಮೂಗು ಆಘ್ರಾಣಿಸುತ್ತದೆ; ಚರ್ಮ ವಸ್ತುವಿನ ಕೋಮಲತೆ ಅರಿಯುತ್ತದೆ; ನಾಲಗೆ ರುಚಿ ತಿಳಿಸುತ್ತದೆ. ಕಣ್ಣುಗಳು ಎರಡು– ನೋಟ ಒಂದು; ಕಿವಿಗಳು ಎರಡು–ಶಬ್ದ ಒಂದು; ಮೂಗಿನ ಹೊಳ್ಳೆಗಳು ಎರಡು, ವಾಸನೆ ಒಂದು; ಚರ್ಮ ಬಹುವ್ಯಾಪ್ತಿಯದು, ಸ್ಪರ್ಶ ಒಂದು. ಆದರೆ ನಾಲಗೆ ಹೀಗೆ ಅಲ್ಲ. ಅದು ಒಂದೇ, ಅದರ ಕೆಲಸ ಮಾತ್ರ ಎರಡು.

ನಾಲಗೆಯ ಮುಖ್ಯ ಕೆಲಸ ರುಚಿ ನೋಡುವುದು. ಅದಕ್ಕೆ ಭೇದಭಾವ ಇಲ್ಲ. ಅದು ಸಿಹಿ, ಕಹಿ, ಹುಳಿ, ಕಾರ, ಸಪ್ಪೆ ಎಲ್ಲದರ ರುಚಿ ನೋಡುತ್ತದೆ. ರುಚಿಕೆಟ್ಟ ವಸ್ತುವನ್ನು ನಾಲಗೆ ದೇಹದ ಒಳಕ್ಕೆ ಸೇರಿಸುವುದಿಲ್ಲ; ರುಚಿ ಹಿತವಿದ್ದ, ಸರಿಯಿದ್ದ ವಸ್ತುವನ್ನು ಮಾತ್ರ ಅದು ಒಳಕ್ಕೆ ಕಳಿಸುತ್ತದೆ. ಒಂದೊಮ್ಮೆ ಅಂಥದ್ದು ಒಳಹೊಕ್ಕರೂ ಹೊಟ್ಟೆ ಹೊರದಬ್ಬಿದಾಗ ನಾಲಗೆ ಅದಕ್ಕೆ ಸಹಾಯಕವಾಗಿ ಅದನ್ನು ತುಟಿಯಿಂದ ಹೊರಚೆಲ್ಲುತ್ತದೆ. ದೇಹದ ಆರೋಗ್ಯವನ್ನು ಕಾಪಾಡುವ, ವರ್ಧಿಸುವ ಶಕ್ತಿ ನಾಲಗೆಗೆ ಇದೆ. ನಾಲಗೆಗೆ ಸ್ವಾರ್ಥವಿಲ್ಲ; ಅದು ಯಾವುದಕ್ಕೂ ಅಂಟಿಕೊಳ್ಳುವುದಿಲ್ಲ. ಬಾಯೊಳಗೆ ಹೋಗುವ, ಬಾಯಿಂದ ಹೊರಹೋಗುವ ಯಾವುದೇ ಪದಾರ್ಥದ ಕಣವನ್ನೂ ಅದು ಇರಿಸಿಕೊಳ್ಳುವುದಿಲ್ಲ. ಹಾಲು–ನೀರು, ಎಣ್ಣೆ–ತುಪ್ಪ, ಕೆನೆ–ಪಾಕ, ಬಿಸಿ–ತಂಪು ಯಾವುದನ್ನು ಬೇಕಾದರೂ ನಾಲಗೆ ಸ್ವೀಕರಿಸುತ್ತದೆ. ಆದರೆ ಅದು ಯಾವುದಕ್ಕೂ ಅಂಟಿಕೊಳ್ಳುವುದಿಲ್ಲ; ಎಲ್ಲವನ್ನೂ ಸ್ವೀಕರಿಸಿಯೂ ತಾನು ನಿರ್ಲೇಪವಾಗಿರುತ್ತದೆ, ಶುಭ್ರವಾಗಿರುತ್ತದೆ. ಬದುಕಿನಲ್ಲಿ ಬಂದ ನೋವು–ನಲಿವು, ಸುಖ–ದುಃಖ ಏರುಪೇರುಗಳನ್ನು ಸ್ವೀಕರಿಸಿ, ಯಾವುದಕ್ಕೂ ಅಂಟಿಕೊಳ್ಳದೇ ಇರಲೇ ಬೇಕೆಂಬುದನ್ನು ನಾಲಗೆ ಇಂಗಿತಗೊಳಿಸುತ್ತದೆ. 'ಜೀವನವರ್ಧಕವಾದುದನ್ನು ಇಟ್ಟುಕೊ, ಜೀವಕ್ಷೀಣಗೊಳಿಸುವುದನ್ನು ತ್ಯಜಿಸು' ಎಂಬ ಸೂತ್ರ ಇಲ್ಲಿಯೇ ಇದೆ.

ನಾಲಗೆಯ ಮತ್ತೊಂದು ಕೆಲಸ ಮಾತನಾಡುವುದು. ನಮ್ಮ ಭಾವನೆ, ಚಿಂತನೆ, ಪ್ರಾರ್ಥನೆ, ಆಸೆ, ಸಂಕಟ, ಸಂತೋಷ, ಉಲ್ಲಾಸ, ಮ್ಲಾನತೆ ಎಲ್ಲವನ್ನೂ ವ್ಯಕ್ತಪಡಿಸಲು ನಾಲಗೆಯೇ ವಾಹಕ ಅದು ಹೃದಯದ ಲೇಖನಿ; ಮನಸ್ಸಿನ ದೂತ, ದೇಹವೆಂಬ ಸೌಧಕ್ಕೆ ಬಾಯಿ ಹೆಬ್ಬಾಗಿಲಾದರೆ ನಾಲಗೆ ಅಗಣಿ. ಅದನ್ನು ತೆರೆಯುವುದು

©KTBS Not to be republished


ಮುಚ್ಚುವುದು ನಮ್ಮ ಕೈಯಲ್ಲಿದೆ. ಅದು ಮೃದುವಾದ ಮೆದುವಾದ ಮಧುರವಾದ ಮಿತವಾದ ಲಹರಿ ಹರಿಸಬಲ್ಲದು. ಹಾಗೆಯೆ ಕೆಸರ ಹೊಳೆಯನ್ನೊ ಉರಿಯ ಮಳೆಯನ್ನೊ ಮಾತ್ಸರ್ಯದ ತುಂತುರನ್ನೊ ಚೆಲ್ಲಬಲ್ಲದು. ಅದು ಇತರರನ್ನು ಚುಚ್ಚಿ ನೋಯಿಸಬಲ್ಲದು; ಚಾಚಿ ಪರರನ್ನು ನಿಂದಿಸಬಲ್ಲದು; ಹುಸಿಯಾಡಿ ಆಚಾರ ಕಳೆಯಬಲ್ಲದು. ಆದ್ದರಿಂದಲೇ 'ಕಾಲು ಜಾರಿದರೂ ನಾಲಗೆ ಜಾರಬಾರದು' ಎಂಬ ಮಾತು ರೂಢಿಗೆ ಬಂದಿರುವುದು. ಕಾಲು ಜಾರುವಿಕೆಯಿಂದ ಮೂಳೆ ಮಾತ್ರ ಮುರಿಯುತ್ತದೆ. ನಾಲಗೆ ಜಾರುವುದರಿಂದ ಮನಸ್ಸು ಮುರಿಯುತ್ತದೆ, ಬದುಕು ಒಡೆಯುತ್ತದೆ. ಆರಂಗುಲದ ನಾಲಗೆಗೆ ಆರಡಿ ವ್ಯಕ್ತಿಯನ್ನು ಕರಗಿಸುವ, ಕೆರಳಿಸುವ, ಅಗಲಿಸುವ ಶಕ್ತಿಯಿದೆ. 'ಚಾಡಿ ಹೇಳಲು ಬೇಡ ನಾಲಗೆ ನಿನ್ನ ಬೇಡಿಕೊಂಬೆನು' ಎಂದು ಪುರಂದರರು ಹೇಳುವುದಾದರೂ ಇದಕ್ಕೆ.

ನಾಲಗೆ ತನ್ನ ಮನೆಯಾದ ಬಾಯಿಂದ ಹೊರಬರುವುದಿಲ್ಲ. ಅದು ತನ್ನ ಸರಹದ್ದನ್ನು ಮೀರಿ ಚಾಚಿಕೊಳ್ಳುವುದು ತೀರ ವಿರಳ. ಮಾತನಾಡುವಾಗ ಹೊರತು ನಾಲಗೆ ಸದ್ದು ಮಾಡುವುದಿಲ್ಲ. ಅದು ತಿನ್ನುವಾಗ, ಮಾತನಾಡುವಾಗ, ಓದುವಾಗ, ಹಾಡುವಾಗ ಚುರುಕಾಗಿ ಚಲಿಸುತ್ತದೆ. ಇಂಥ ಸಂದರ್ಭದಲ್ಲಿ ಅದಕ್ಕೆ ಆಲಸ್ಯವೆಂಬುವುದಿಲ್ಲ. ಮೇಲೆ-ಕೆಳಗೆ, ಹಿಂದೆ-ಮುಂದೆ, ಅಕ್ಕ-ಪಕ್ಕ ಅಗತ್ಯಕ್ಕೆ ತಕ್ಕಷ್ಟು ಸರಿಯುತ್ತದೆ; ಓಡಾಡುತ್ತದೆ, ಅಲಗಿನಂತೆ ಮೊನಚಾದ ಹಲ್ಲುಗಳಿಂದ ತಪ್ಪಿಸಿಕೊಂಡು ತನ್ನನ್ನು ತಾನು ರಕ್ಷಿಸಿಕೊಳ್ಳುತ್ತದೆ. ನಾಲಗೆಯನ್ನು ತಿನ್ನಲಾಗದ ಹಲ್ಲುಗಳು ನಾಲಗೆ ನೀಡಿದ್ದನ್ನು ಅಗಿದು ಜಗಿದು ನರಳುತ್ತವೆ, ಉರುಳುತ್ತವೆ, ಸೋಲುತ್ತವೆ, ನಾಲಗೆ ಅಜೇಯವಾಗಿರುತ್ತದೆ. ಇದನ್ನರಿತ ನಾಲಗೆಯ ಮನುಷ್ಯ ಕೂಡ ವಿಜೇತನಾಗಬಲ್ಲ.

ನಾಲಗೆ ಮನುಷ್ಯ ದೇಹದ ಒಂದು ಒಂಟಿ ಸಲಗ. ಅದನ್ನು ಕಟ್ಟಿದರೆ ಜಿಹ್ವಾಚಾಪಲ್ಯ ಮರೆಯಾಗಿ ಆರೋಗ್ಯ ವರ್ಧಿಸುತ್ತದೆ. ಅದರ ಮಾತನ್ನು ನಿಯಂತ್ರಿಸಿದರೆ ವ್ಯಕ್ತಿತ್ವ ಕಾಂತಿಯುಕ್ತವಾಗುತ್ತದೆ. ಹೃದಯದ ಕವಚವಾಗಿ ವ್ಯಕ್ತಿಯ ಪ್ರಾಣವನ್ನು ಕಾಪಾಡುವ 'ನಾಲಗೆಯಿಂದಾಗದುದೇನು?' ಎಂಬ ಕವಿ ಮಾತು ಚಿಂತನೀಯ.

**'ನಾಲಗೆ ಒಳ್ಳೆಯದಾದರೆ ನಾಡೆಲ್ಲ ಒಳ್ಳೆಯದು'**

## ಕೃತಿಕಾರರ ಪರಿಚಯ



ಮೈಸೂರಿನ ಡಾ. ಎನ್.ಎಸ್. ತಾರಾನಾಥರು ನವೆಂಬರ್ ೮, ೧೯೫೩ರಲ್ಲಿ ಹುಟ್ಟಿದರು. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಇವರು ಕನ್ನಡ ಸಾಹಿತ್ಯ ಪರಿಷತ್ತಿನ 'ಕನ್ನಡ-ಕನ್ನಡ-ಇಂಗ್ಲಿಷ್ ನಿಘಂಟು'ವಿನ ಪರಿಷ್ಕರಣ ಯೋಜನೆಯ ಸಂಪಾದಕ ಸಮಿತಿಯ ಸದಸ್ಯರಾಗಿ, ಕನ್ನಡ ಶಾಸ್ತ್ರೀಯ ಭಾಷಾ ವರದಿ ಸಲ್ಲಿಕೆ ಸಮಿತಿಯ ಸದಸ್ಯರಾಗಿ ಕೆಲಸ ಮಾಡಿದ್ದಾರೆ. ಇವರ ಪ್ರಮುಖ ಕೃತಿಗಳೆಂದರೆ 'ಶೋಧನ ಲೋಕ', 'ಪರಿಶೋಧನ', 'ಸಾಹಿತ್ಯಲೋಕ' ಮುಂತಾದವು.

ಶ್ರೀಯುತರ 'ಬೆಳಕಿನ ಬಳ್ಳಿ' ಎಂಬ ಕೃತಿಯಿಂದ 'ನಾಲಗೆ' ಪಾಠವನ್ನು ಆಯ್ದುಕೊಳ್ಳಲಾಗಿದೆ.

©KTBS Not to be republished

## ಪದಗಳ ಅರ್ಥ

ಅಜೇಯ–ಗೆಲ್ಲಲಾಗದ;

ಅಗಣಿ–ಬಾಗಿಲನ್ನು ತೆರೆಯಲಾಗದಂತೆ ಮಾಡುವ ಸಾಧನ, ಚಿಲಕ;

ಅಲಗು–ಹರಿತವಾದ ಬಾಯಿಯಿರುವುದು, ಖಡ್ಗ, ಕತ್ತಿ

ಆಲಿಸು–ಕೇಳು;

ಆಘ್ರಾಣಿಸು–ವಾಸನೆ ನೋಡು;

ಇಂಗಿತ–ಆಶಯ;

ಇಂದ್ರಿಯಗಳು–ಮನುಷ್ಯನಿಗೆ ವಿವಿಧ ಅನುಭವಗಳನ್ನು ನೀಡುವ ಅಂಗಗಳ, ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮ ಇವುಗಳಿಗೆ ಪಂಚೇಂದ್ರಿಯಗಳು ಎಂದು ಕರೆಯುವರು;

ಉಲ್ಲಾಸ–ಸಂತೋಷ;

ಕವಚ–ಹೊದಿಕೆ, ರಕ್ಷಾ

ಕೋಮಲ–ಸೂಕ್ಷ್ಮ;

ಜಿಹ್ವಾಚಾಪಲ್ಯ–ನಾಲಗೆಯ ಚಪಲತೆ;

ಜಿಹ್ವೆ–ನಾಲಗೆ.

ತ್ಯಜಿಸು–ಬಿಡು;

ನರಳು–ಸಂಕಟಪಡು;

ನಿರ್ಲೇಪ–ಅಂಟಿಕೊಳ್ಳದಿರುವುದು

ಮಾತ್ಸರ್ಯ–ಹೊಟ್ಟೆಕಿಚ್ಚು;

ಮ್ಲಾನತೆ–ಬೇಸರ;

ಮೆದು–ಮೃದು;

ಲಹರಿ–ಮನಸ್ಸಿನ ಒಲವು, ಉಲ್ಲಾಸ, ಗುಂಗು

ವರ್ಧಿಸು–ಅಭಿವೃದ್ಧಿ ಹೊಂದು;

ವಾಹಕ–ಸಾಗಿಸುವ ಸಾಧನ;

ಸರಹದ್ದು–ಗಡಿ;

ಸಲಗ–ಪ್ರಾಯದ ಗಂಡಾನೆ;

ಸೌಧ–ದೊಡ್ಡಕಟ್ಟಡ;

ಸ್ವಾರ್ಥ–ಸ್ವಪ್ರಯೋಜನ;

ಹುಸಿ–ಸುಳ್ಳು;

ಹೊಳ್ಳೆ–ಮೂಗಿನ ರಂಧ್ರ.

## ಅಭ್ಯಾಸ

**ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಪಂಚೇಂದ್ರಿಯಗಳು ಯಾವುವು?

೨. ಒಂದೇ ಇದ್ದರೂ ಎರಡು ಕೆಲಸವನ್ನು ನಿರ್ವಹಿಸುತ್ತಿರುವ ಇಂದ್ರಿಯ ಯಾವುದು?

೩. ನಾಲಗೆಯು ಯಾವ ಯಾವ ರುಚಿಯನ್ನು ನೋಡುತ್ತದೆ?

೪. ನಾಲಗೆಯು ಮಾಡುತ್ತಿರುವ ಕೆಲಸಗಳಾವುವು?

೫. ನಾಲಗೆಯು ತನ್ನ ಕೆಲಸದಲ್ಲಿ ಅಳವಡಿಸಿಕೊಂಡಿರುವ ಸೂತ್ರ ಯಾವುದು?

© KTBS Not to be republished

೬. ದೇಹವೆಂಬ ಸೌಧಕ್ಕೆ ಹೆಬ್ಬಾಗಿಲು ಮತ್ತು ಅಗಣಿ ಯಾವುದು?

೭. ಎನ್. ಎಸ್. ತಾರಾನಾಥ ಅವರು ಹೇಳಿರುವಂತೆ ವಿಜೇತನಾಗಬಲ್ಲ ಮನುಷ್ಯ ಯಾರು?

೮. ನಾಲಗೆಯು ಯಾವಾಗ ಚುರುಕಾಗಿ ಚಲಿಸುತ್ತದೆ?

**ಆ) ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಬದುಕಿನಲ್ಲಿ ಯಾವುದಕ್ಕೂ ಅಂಟಿಕೊಳ್ಳದೇ ಇರಬೇಕೆಂಬುದನ್ನು ನಾಲಗೆಯು ಹೇಗೆ ತಿಳಿಸುತ್ತದೆ?

೨. ನಾಲಗೆ ಸ್ವಾರ್ಥವಿಲ್ಲದೆ ನಿರ್ಲೇಪವಾಗಿರುತ್ತದೆ ಎಂದು ಲೇಖಕರು ಏಕೆ ಹೇಳಿದ್ದಾರೆ?

೩. ಕಾಲು ಜಾರಿದರೂ ನಾಲಗೆ ಜಾರಬಾರದೆಂದು ಏಕೆ ಹೇಳುತ್ತಾರೆ?

೪. ನಾಲಗೆಯು ಅಜೇಯವಾಗಿರುತ್ತದೆ ಎಂದು ಲೇಖಕರು ಏಕೆ ಹೇಳಿದ್ದಾರೆ?

**ಇ) ಕೆಳಗಿನ ನುಡಿಗಳ ಸಂದರ್ಭವನ್ನು ಸ್ವಾರಸ್ಯ ಸಹಿತ ವಿವರಿಸಿರಿ.**

೧. “ಚಾಡಿ ಹೇಳಲು ಬೇಡ ನಾಲಗೆ ನಿನ್ನ ಬೇಡಿಕೊಂಬೆನು”.

೨. “ಜೀವನವರ್ಧಕವಾದುದನ್ನು ಇಟ್ಟುಕೊ”.

೩. “ಆರೋಗ್ಯ ವರ್ಧಿಸುತ್ತದೆ”.

## ಭಾಷಾಭ್ಯಾಸ

**ಅ. ಕೆಳಗಿನ ವಾಕ್ಯಗಳಲ್ಲಿ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೇ ಪದಕ್ಕೆ ಸಂಬಂಧ ಬರೆಯಿರಿ.**

೧. ಕಣ್ಣು : ನಯನ :: ಕಿವಿ : ____________

೨. ಸುಖ : ದು:ಖ :: ನಲಿವು : ____________

೩. ಬಿಸಿ : ತಂಪು :: ಮೇಲೆ : ____________

**ಆ. ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.**

**ಮಾದರಿ : ಕೈ + ಅಲ್ಲಿ = ಕೈಯಲ್ಲಿ**

೧. ದೇಹವೆಂಬ = ____________

೨. ಮಿತವಾದ = ____________

೩. ಹೊಳೆಯನ್ನು = ____________

೪. ಬಾಯಿಂದ = ____________

೫. ಮರೆಯಾಗಿ = ____________

©KTBS Not to be republished

**ಇ) 'ನಾಲಗೆ' ಗದ್ಯಭಾಗದಲ್ಲಿ ಬಂದಿರುವ ಜೋಡುನುಡಿಗಳನ್ನು ಸಂಗ್ರಹಿಸಿ ಬರೆಯಿರಿ.**

**ಈ) ಕೆಳಗಿನ ವಾಕ್ಯಗಳಲ್ಲಿ ಪದಗಳ ಸ್ಥಾನ ಹಿಂದು ಮುಂದಾಗಿದೆ. ಅದನ್ನು ಸರಿಯಾಗಿ ಜೋಡಿಸಿ ಅರ್ಥಪೂರ್ಣ ವಾಕ್ಯಗಳನ್ನಾಗಿ ಮಾರ್ಪಡಿಸಿರಿ.**

ಉದಾ : ರುಚಿ ನೋಡುವುದು ಕೆಲಸ ಮುಖ್ಯ ನಾಲಗೆಯ.

ಉತ್ತರ : ನಾಲಗೆಯ ಮುಖ್ಯ ಕೆಲಸ ರುಚಿ ನೋಡುವುದು.

೧. ಆರೋಗ್ಯವನ್ನು ಕಾಪಾಡುವ ದೇಹದ ಇದೆ ವರ್ಧಿಸುವ ಶಕ್ತಿ ನಾಲಗೆಗೆ.

೨. ಜಾರಿದರೂ ಕಾಲು ಜಾರಬಾರದು ನಾಲಗೆ.

೩. ಮಾತು ಬೇಡ ನಾಲಗೆ ನಿನ್ನ ಬೇಡಿಕೊಂಬೆನು ನಾಡ.

**ಉ) ಇವುಗಳನ್ನು ಬಿಡಿಸಿ ಬರೆದು ಸಂಧಿಗಳನ್ನು ಹೆಸರಿಸಿರಿ.**


ಮೊನಚಾದ, ಮೃದುವಾದ, ಮಾತನ್ನು.

**ಊ) ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.**

ಕಣ್ಣು, ಸಂತೋಷ, ಸೌದ, ಆನೆ.

## ಭಾಷಾ ಚಟುವಟಿಕೆ

**ಅ) ಕೆಳಗಿನ ಚಿತ್ರಗಳಲ್ಲಿರುವ ಅಂಗಗಳನ್ನು ಹೆಸರಿಸಿ ಅವುಗಳ ಕೆಲಸಗಳನ್ನು ತಿಳಿಸಿರಿ.**

**ಆ) ಕೆಳಗೆ ಕೊಟ್ಟಿರುವ ಪದಗಳಿಗೆ ನಿಘಂಟನ್ನು ನೋಡಿ ಸಮಾನಾರ್ಥಕ ಪದಗಳನ್ನು ಬರೆಯಿರಿ.**

ಸಂಕಟ, ವಿಜೇತ, ಚಾಪಲ್ಯ, ಮೊನಚು.

**ಇ) ಕೆಳಗಿನ ಪದಗಳನ್ನು ಓದಿಕೊಂಡು ನಿಮ್ಮ ಪುಸ್ತಕದಲ್ಲಿ ಬರೆಯಿರಿ.**

ಮೊನಚು, ಅಗಿದು, ಜಗಿದು, ಒಂಟಿಸಲಗ, ಕವಚ, ವ್ಯಕ್ತಿತ್ವ.

**ಈ) ಪುರಂದರದಾಸರ ಕೀರ್ತನೆಗಳನ್ನು ಸಂಗ್ರಹಿಸಿ ಹಾಡಿರಿ.**

**ಉ. 'ನಾಲಗೆ ಒಳ್ಳೆಯದಾದರೆ ನಾಡೆಲ್ಲ ಒಳ್ಳೆಯದು'** ಈ ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ.

©KTBS Not to be republished

# ವ್ಯಾಕರಣ

## ಸಂಸ್ಕೃತ ಸಂಧಿಗಳು

ಎರಡು ಸಂಸ್ಕೃತ ಶಬ್ದಗಳು ಸೇರಿದಾಗ ಸಂಧಿಕಾರ್ಯ ನಡೆದರೆ ಸಂಸ್ಕೃತ ಸಂಧಿಯಾಗುತ್ತದೆ. ಎರಡು ಸಂಸ್ಕೃತ ಶಬ್ದಗಳು ಸೇರಿದಾಗ ಪರಸ್ಪರ ಎದುರಾದ ಅಕ್ಷರಗಳ ನಡುವೆ ಸಂಧಿಯಾದರೆ ಸಂಸ್ಕೃತ ಸಂಧಿಯಾಗುತ್ತದೆ. (ಒಂದು ಸಂಸ್ಕೃತ ಶಬ್ದವು ಕನ್ನಡ ಶಬ್ದದೊಡನೆ ಸೇರಿದಾಗ ಪರಸ್ಪರ ಎದುರಾದ ಅಕ್ಷರಗಳ ನಡುವೆ ಸಂಧಿಯಾದರೆ ಕನ್ನಡ ಸಂಧಿಯೇ ಆಗುತ್ತದೆ.)

ಸಂಸ್ಕೃತದಲ್ಲಿ ಸ್ವರಸಂಧಿಗಳು, ವ್ಯಂಜನ ಸಂಧಿಗಳೆಂದು ಎರಡು ವಿಧ.

ಸಂಸ್ಕೃತ ಸ್ವರಸಂಧಿ: ಸ್ವರಕ್ಕೆ ಸ್ವರ ಪರವಾಗಿ ಸಂಧಿಯಾದರೆ ಸ್ವರಸಂಧಿ.

ಸಂಸ್ಕೃತ ವ್ಯಂಜನ ಸಂಧಿ: ವ್ಯಂಜನಕ್ಕೆ ವ್ಯಂಜನ, ವ್ಯಂಜನಕ್ಕೆ ಸ್ವರ, ಸ್ವರಕ್ಕೆ ವ್ಯಂಜನ ಪರವಾಗಿ ಸಂಧಿಯಾದರೆ ವ್ಯಂಜನ ಸಂಧಿ.

ಸಂಸ್ಕೃತದಲ್ಲಿ ನಾಲ್ಕು ಸ್ವರಸಂಧಿಗಳು ಮತ್ತು ಮೂರು ವ್ಯಂಜನ ಸಂಧಿಗಳಿವೆ.

## ಸಂಸ್ಕೃತ ಸ್ವರಸಂಧಿಗಳು

**ಸವರ್ಣದೀರ್ಘ ಸಂಧಿ:**

ಸವರ್ಣಸ್ವರಗಳಾದ ಅಆ, ಇಈ, ಉಊಗಳು ಒಂದರ ಮುಂದೊಂದು ಬಂದಾಗ ಅವೆರಡರ ಸ್ಥಾನದಲ್ಲಿ ಅದೇ ಸ್ವರದ ದೀರ್ಘಸ್ವರವು ಅಂದರೆ ಅಆ–ಆ, ಇಈ–ಈ, ಉಊ_ಊ, ಆದೇಶವಾಗಿ ಬರುವುದು. ಇದಕ್ಕೆ ಸವರ್ಣದೀರ್ಘ ಸಂಧಿಯೆಂದು ಹೆಸರು.

**ಉದಾಹರಣೆಗೆ :–**

೧. ದೇವ + ಆಲಯ =ದೇವಾಲಯ

೨. ಮಹಾ + ಆಸನ = ಮಹಾಸನ

೩. ಗಿರಿ + ಈಶ =ಗಿರೀಶ

೪. ಅತಿ + ಇಂದ್ರ = ಅತೀಂದ್ರ

೫. ಗುರು+ಉಪದೇಶ=ಗುರೂಪದೇಶ

| | | |
|---|---|---|
| ಅ+ಅ=ಆ | ಇ+ಇ=ಈ | ಉ+ಉ=ಊ |
| ಆ+ಆ=ಆ | ಈ+ಈ=ಈ | ಊ+ಊ=ಊ |
| ಅ+ಆ=ಆ | ಇ+ಈ=ಈ | ಉ+ಊ=ಊ |
| ಆ+ಅ=ಆ | ಈ+ಇ=ಈ | ಊ+ಉ=ಊ |

©KTBS Not to be republished

## ಗುಣಸಂಧಿ:

ಅ ಆ ಕಾರಗಳಿಗೆ ಇ ಈ ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ 'ಏ'ಕಾರವೂ, ಉ ಊ ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ 'ಓ' ಕಾರವೂ, ಋ ಕಾರ ಪರವಾದರೆ ಅವೆರಡರ ಸ್ಥಾನದಲ್ಲಿ 'ಅರ್' ಕಾರವೂ ಆದೇಶಗಳಾಗಿ ಬರುತ್ತವೆ. ಇದಕ್ಕೆ 'ಗುಣಸಂಧಿ' ಎಂದು ಹೆಸರು.

**ಉದಾಹರಣೆಗೆ :–** ೧. ಮಹಾ+ಇಂದ್ರ=ಮಹೇಂದ್ರ

೨. ಸೂರ್ಯ + ಉದಯ =ಸೂರ್ಯೋದಯ

೩. ಮಹಾ+ಈಶ=ಮಹೇಶ

೪. ಮಹಾ+ಉದಯ=ಮಹೋದಯ

೫. ಮಹಾ+ಊರ್ಜಿತ=ಮಹೋರ್ಜಿತ

೬. ಮಹಾ+ಋಷಿ=ಮಹರ್ಷಿ

| | | |
|---|---|---|
| ಅ+ಇ= ಏ | ಅ+ಉ=ಓ | ಅ+ಋ= ಅರ್ |
| ಆ+ಇ=ಏ | ಆ+ಉ=ಓ | ಆ+ಋ=ಅರ್ |
| ಅ+ಈ=ಏ | ಅ+ಊ=ಓ | |
| ಆ+ಈ=ಏ | ಆ+ಊ=ಓ | |

## ವೃದ್ಧಿ ಸಂಧಿ:

ಅ ಆ ಕಾರಗಳಿಗೆ ಏ ಐ ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ 'ಐ'ಕಾರವೂ, ಓ ಔ ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ 'ಔ' ಕಾರವೂ ಆದೇಶಗಳಾಗಿ ಬರುತ್ತವೆ. ಇದಕ್ಕೆ 'ವೃದ್ಧಿಸಂಧಿ' ಯೆನ್ನುವರು.

**ಉದಾಹರಣೆಗೆ :–** ೧. ಮಹಾ+ಏಕ=ಮಹೈಕ

೨. ಮಹಾ+ಐಕ್ಯ=ಮಹೈಕ್ಯ

೩. ಏಕ+ಐಕ್ಯ=ಏಕೈಕ್ಯ

೪. ಮಹಾ+ಓಘ=ಮಹೌಘ

೫. ಮಹಾ+ಔಷಧ=ಮಹೌಷಧ

| | |
|---|---|
| ಅ+ಏ=ಐ | ಅ+ಓ=ಔ |
| ಆ+ಏ=ಐ | ಅ+ಔ=ಔ |
| ಅ+ಐ=ಐ | ಅ+ಔ=ಔ |
| ಆ+ಐ=ಐ | ಆ+ಓ=ಔ |

## ಯಣ್ ಸಂಧಿ:

ಇ, ಈ, ಉ, ಊ, ಋ ಕಾರಗಳಿಗೆ ಸವರ್ಣವಲ್ಲದ ಸ್ವರ ಪರವಾದರೆ ಇಈ ಕಾರಗಳಿಗೆ 'ಯ್' ಕಾರವೂ, ಉ ಊ ಕಾರಗಳಿಗೆ 'ವ್' ಕಾರವೂ, ಋ ಕಾರಕ್ಕೆ 'ರ್'(ರೇಫ)ವೂ ಆದೇಶಗಳಾಗಿ ಬರುತ್ತವೆ. ಇದಕ್ಕೆ ಯಣ್ ಸಂಧಿಯೆಂದು ಹೆಸರು.

ಇ+ಆ ಯ್

೧. ಅತಿ+ಆಸೆ = ಅತ್ಯಾಸೆ

ಇ+ಅಂ ಯ್

೨. ಅತಿ+ಅಂತ=ಅತ್ಯಂತ

ಇ+ಉ ಯ್

೩. ಅತಿ+ಉನ್ನತ=ಅತ್ಯುನ್ನತ

ಇ+ಔ ಯ್

೪. ಅತಿ+ಔದಾರ್ಯ=ಅತ್ಯೌದಾರ್ಯ

ಉ+ಆ = ವ್

೫. ಗುರು+ಆಜ್ಞೆ=ಗುರ್ವಾಜ್ಞೆ

ಋ+ಆ = ರ್

೬. ಪಿತೃ+ಆಜ್ಞೆ=ಪಿತ್ರಾಜ್ಞೆ

೧. ಸವರ್ಣದೀರ್ಘ ಸಂಧಿ–ಸವರ್ಣದೀರ್ಘಸ್ವರ ಆದೇಶ.

೨. ಗುಣಸಂಧಿ–ಏ, ಓ, ಅರ್ ಆದೇಶ.

೩. ವೃದ್ಧಿ ಸಂಧಿ– ಐ, ಔ ಆದೇಶ.

೪. ಯಣ್ ಸಂಧಿ–ಯ್, ವ್, ರ್ ಆದೇಶ.

## ಗಾದೆಗಳು

## ಭಾಗ–'ಅ'

ಗಾದೆಗಳು ನಾಣ್ಣುಡಿ, ಲೋಕೋಕ್ತಿಗಳೆಂತಲೂ ಪ್ರಸಿದ್ಧವಾಗಿವೆ. ಜನಸಾಮಾನ್ಯರ ಅನುಭವದ ಸಾರವೇ ಗಾದೆಗಳ ರೂಪ ತಾಳಿವೆ. ಸರಳವಾಗಿ ಸಂಕ್ಷಿಪ್ತವಾಗಿ ಪ್ರಾಸಬದ್ಧವಾಗಿರುವ ಗಾದೆಗಳು ಜನರ ಮನದಲ್ಲಿ ಶಾಶ್ವತವಾಗಿ ಉಳಿಯುವಂತಿವೆ.

ಗಾದೆಗಳನ್ನು ವೇದಕ್ಕೆ ಹೋಲಿಸುವುದಿದೆ. 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' ಎನ್ನುವ ನಾಣ್ಣುಡಿಯು ಇದೆ. ಬದುಕಿನ ಎಲ್ಲ ವಿಚಾರಗಳಿಗೂ ಮಾರ್ಗದರ್ಶನ ಮಾಡುವ ಅಸಂಖ್ಯ ಗಾದೆಗಳಿವೆ.

ಉದಾ : 'ತುಂಬಿದ ಕೊಡ ತುಳುಕುವುದಿಲ್ಲ'.

©KTBS Not to be republished

ಕೊಡದ ತುಂಬ ನೀರಿದ್ದಾಗ ಅದು ತುಳುಕಾಡುವುದಿಲ್ಲ. ಸದ್ದು ಮಾಡುವುದಿಲ್ಲ. ಅದೇ ಅರ್ಧ ತುಂಬಿದ ಕೊಡದಲ್ಲಿ ನೀರು ತುಳುಕಾಡುತ್ತದೆ. ಶಬ್ದ ಮಾಡುತ್ತದೆ. ಇದು ಸಹಜವಾದುದು. ಇದು ಈ ಗಾದೆಯ ಮೇಲ್ನೋಟದ ಅರ್ಥ.

ಪೂರ್ಣ ವಿಚಾರವನ್ನು ಅರಿತವರು, ಪಂಡಿತರು ಅನಗತ್ಯವಾಗಿ ಮಾತನಾಡುವುದಿಲ್ಲ. ಪ್ರಚಾರಪ್ರಿಯರಲ್ಲ, ಅವಶ್ಯವಿದ್ದಾಗ ಮಾತ್ರ ತಾವು ತಿಳಿದುದನ್ನು ತಿಳಿಸಿ ಹೇಳಲು ಬಯಸುತ್ತಾರೆ. ಆದರೆ ಅರೆಬರೆ ತಿಳಿದವರು ತಾವು ತಿಳಿಯದ ವಿಚಾರಗಳನ್ನು ಕುರಿತು ತಿಳಿದವರ ಹಾಗೆ ನಟಿಸುತ್ತಾರೆ.

ಆದುದರಿಂದ ತುಂಬಿದ ಕೊಡ ಹೇಗೆ ತುಳುಕುವುದಿಲ್ಲವೊ ಹಾಗೆ ಮಹಾಜ್ಞಾನಿಯಾದವರು ಎಂದಿಗೂ ಗರ್ವಿಯಾಗಿರದೇ ವಿನಮ್ರವಾಗಿರುತ್ತಾರೆ ಎಂಬುದು ಈ ಗಾದೆಯ ತಾತ್ಪರ್ಯ. ಅರೆ ಬರೆ ಜ್ಞಾನ ಅಪಾಯಕಾರಿ.

**ಭಾಗ–'ಆ'**

**ಪ್ರಚಲಿತವಿರುವ ಗಾದೆಗಳನ್ನು ಸಂಗ್ರಹಿಸಿ.**

**ಮಾತು ಬಲ್ಲವನಿಗೆ ಜಗಳವಿಲ್ಲ, ಊಟ ಬಲ್ಲವನಿಗೆ ರೋಗವಿಲ್ಲ.**

* * * * *


©KTBS Not to be republished

# ೫. ಕನ್ನಡವ ನುಡಿ

– ಸವಿತಾ ನಾಗಭೂಷಣ

**ಪ್ರವೇಶ:** ಕನ್ನಡವು ನಮ್ಮ ನಾಡಿನ ಪ್ರಧಾನ ಭಾಷೆಯಾಗಿದೆ. ನಮ್ಮ ಭಾವನೆಗಳು ನಮ್ಮ ಮಾತೃಭಾಷೆಯಲ್ಲಿ ಅಥವಾ ಪರಿಸರದ ಭಾಷೆಯಲ್ಲಿ ಮಾತ್ರ ಸ್ಪಷ್ಟವಾಗಿ ವ್ಯಕ್ತವಾಗುತ್ತವೆ. ಪ್ರತಿಯೊಬ್ಬನೂ ಮಾತೃಭಾಷಾ ಪ್ರೇಮಿಯಾಗಿರಬೇಕು. ಕನ್ನಡದ ಬಳಕೆ ಕಡಿಮೆಯಾಗುತ್ತಿರುವ ಈ ದಿನಗಳಲ್ಲಿ ಅದನ್ನು ಉಳಿಸಿ ಬೆಳೆಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. ಕವಯಿತ್ರಿಯು ಕನ್ನಡ ಬೆಳೆಸುವ ವಿವಿಧ ಬಗೆಗಳನ್ನು ಇಲ್ಲಿ ತಿಳಿಸಿದ್ದಾರೆ.

ಅಪ್ಪ ಅಮ್ಮ ಅನ್ನು
ಕನ್ನಡ ಉಳಿಯುವುದು
ಕಳ್ಳುಬಳ್ಳಿ ತಾನೆ
ನಂಟನು ಬೆಸೆಯುವುದು



ಅಕ್ಕಿ ರಾಗಿ ಅನ್ನು
ಕನ್ನಡ ಉಳಿಯುವುದು
ಕಾಳು ಕಡ್ಡಿ ತಾನೆ
ಹಸಿವನು ನೀಗುವುದು

ಹಳ್ಳಕೊಳ್ಳ ಅನ್ನು
ಕನ್ನಡ ಉಳಿಯುವುದು
ನೀರೊಂದಿದ್ದರೆ ಸಾಕು
ಊರೂ ಬೆಳೆಯುವುದು

ಗಿಡಮರ ಅನ್ನು
ಕನ್ನಡ ಉಳಿಯುವುದು
ಹೂವು ಹಣ್ಣು ಬೀಜ
ಬಸಿರು ಬೆಳೆಯುವುದು

ಗಾಳಿ ಬೆಂಕಿ ಅನ್ನು
ಕನ್ನಡ ಉಳಿಯುವುದು
ಬೆಳಕೊಂದಿದ್ದರೆ ಸಾಕು
ಕತ್ತಲು ಹರಿಯುವುದು

ತಾಳು ಬಾಳು ಅನ್ನು
ಕನ್ನಡ ಉಳಿಯುವುದು
ಹಮ್ಮನು ಬಿಟ್ಟರೆ ತಾನೆ
ಒಮ್ಮತ ಮೂಡುವುದು

©KTBS Not to be republished

## ಕೃತಿಕಾರರ ಪರಿಚಯ



೧೯೬೧ ಮೇ ೧೧ ರಂದು ಚಿಕ್ಕಮಗಳೂರಿನಲ್ಲಿ ಜನಿಸಿದ ಸವಿತಾ ನಾಗಭೂಷಣ ಅವರು ಈವರೆಗೆ 'ನಾ ಬರೆಯತ್ತೇನೆ ಕೇಳು', 'ಚಂದ್ರನನ್ನು ಕರೆಯಿರಿ ಭೂಮಿಗೆ', 'ಹೊಳೆಮಗಳು', 'ಜಾತ್ರೆಯಲ್ಲಿ ಶಿವ' ಹಾಗೂ 'ದರುಶನ' ಎಂಬ ಕವನ ಸಂಕಲನಗಳನ್ನು, 'ಸ್ತ್ರೀಲೋಕ' ಎಂಬ ವಿಶಿಷ್ಟ ಕಾದಂಬರಿಯನ್ನು ಮತ್ತು 'ಹೂ ಮನಸ್ಸಿನ ಹೋರಾಟಗಾರ ಮತ್ತು ಇತರ ಲೇಖನಗಳು' ಎಂಬ ಸಂಗ್ರಹವನ್ನು ಪ್ರಕಟಿಸಿರುವರು. 'ಆಕಾಶಮಲ್ಲಿಗೆ', 'ಕಾಡು ಲಿಲ್ಲಿ ಹೂವುಗಳು' ಹಾಗೂ 'ಹಳ್ಳಿಯ ದಾರಿ'- ಇವರ ಇನ್ನಿತರ ಕವನ ಸಂಗ್ರಹಗಳು. ಇವರು ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ ಒಳಗೊಂಡಂತೆ ಅನೇಕ ಪ್ರಶಸ್ತಿಗಳನ್ನು ಪಡೆದಿದ್ದಾರೆ. 'ಕನ್ನಡವ ನುಡಿ' ಕವನವನ್ನು ಅವರ 'ದರುಶನ' ಕವನ ಸಂಕಲನದಿಂದ ಆರಿಸಲಾಗಿದೆ.

## ಪದಗಳ ಅರ್ಥ

ಒಮ್ಮತ–ಒಂದೇ ಅಭಿಪ್ರಾಯ;
ಕತ್ತಲು ಹರಿಯುವುದು– ಬೆಳಕಾಗುವುದು;
ಕಳ್ಳುಬಳ್ಳಿ–ರಕ್ತಸಂಬಂಧಿಕರು;
ನಂಟು–ಸಂಬಂಧ;
ನೀಗು–ಹೋಗಲಾಡಿಸು;
ಬಸಿರು–ಗರ್ಭ;
ಬಸಿರು ಬೆಳೆಯುವುದು– ಅಭಿವೃದ್ಧಿಯಾಗುವುದು;
ಬೆಸೆ–ಕೂಡಿಸು;
ಹಮ್ಮು–ಗರ್ವ, ಅಹಂಕಾರ.

## ಅಭ್ಯಾಸ

**ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ನಂಟನು ಬೆಸೆಯುವುದು ಯಾವುದು ಎಂದು ಕನ್ನಡವ ನುಡಿ ಪದ್ಯದಲ್ಲಿ ಕವಯಿತ್ರಿ ಹೇಳಿದ್ದಾರೆ?

೨. ಕಾಳು ಕಡ್ಡಿಯು ಏನನ್ನು ನೀಗಿಸುತ್ತದೆ?

೩. ಊರು ಬೆಳೆಯಲು ಏನೊಂದಿದ್ದರೆ ಸಾಕು ಎಂದು ಸವಿತಾ ನಾಗಭೂಷಣ ಹೇಳಿದ್ದಾರೆ?

೪. ಸವಿತಾ ನಾಗಭೂಷಣರವರು ಕತ್ತಲು ಹರಿಯಲು ಯಾವುದೊಂದಿದ್ದರೆ ಸಾಕು ಎಂದಿದ್ದಾರೆ?

೫. ಒಮ್ಮತ ಮೂಡಲು ಏನನ್ನು ಬಿಡಬೇಕು ಎಂದು ಕನ್ನಡವ ನುಡಿ ಪದ್ಯದಲ್ಲಿ ಕವಯಿತ್ರಿ ಹೇಳಿದ್ದಾರೆ?

©KTBS Not to be republished

**ಆ) ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

೧. ಕನ್ನಡ ಉಳಿಯಲು ಏನೇನು ಮಾಡಬೇಕೆಂದು ಸವಿತಾ ನಾಗಭೂಷಣ ಹೇಳಿದ್ದಾರೆ?

೨. ಕನ್ನಡವ ನುಡಿ ಪದ್ಯದ ಸಾರಾಂಶವನ್ನು ಬರೆಯಿರಿ.

## ಭಾಷಾಭ್ಯಾಸ

**ಅ) ಕೆಳಗಿನ ವಾಕ್ಯಗಳಲ್ಲಿಯ ಸರಿ / ತಪ್ಪು ಗಮನಿಸಿ ತಪ್ಪಿದ್ದಲ್ಲಿ ತಿದ್ದಿ ಬರೆಯಿರಿ.**

೧. ಕಳ್ಳು ಬಳ್ಳಿ ನಂಟನು ಬೆಸೆಯುವುದು.

೨. ಗಾಳಿ ಬೆಂಕಿ ತಾನೆ ಹಸಿವನು ನೀಗುವುದು.

೩. ಹಮ್ಮನು ಬಿಡದಿರೆ ತಾನೆ ಒಮ್ಮತ ಮೂಡುವುದು.

೪. ಬೆಳಕಿನಿಂದ ಕತ್ತಲು ಹರಿಯುವುದು.

**ಆ) 'ಕನ್ನಡವ ನುಡಿ' ಪದ್ಯದಲ್ಲಿ ಬಂದಿರುವ ಜೋಡುಪದಗಳನ್ನು ಸಂಗ್ರಹಿಸಿ ಬರೆಯಿರಿ.**

**ಮಾದರಿ:** ಹಳ್ಳ-ಕೊಳ್ಳ

**ಇ) ಕನ್ನಡದ ಉಳಿವಿನ ಬಗೆಗೆ ಕವಯಿತ್ರಿಯ ಅಭಿಪ್ರಾಯವನ್ನು ಸಂಗ್ರಹಿಸಿ ಬರೆಯಿರಿ.**

## ಭಾಷಾ ಚಟುವಟಿಕೆ

ಅ) ನನ್ನ ಕನ್ನಡ ನುಡಿಯೇ, ನೀನೆಷ್ಟು ಚಂದ,
ಏನು ಗೀಚಿದರೂ ಆಗುವುದು ಶ್ರೀಗಂಧ,
ಸಿಂಗರದ ಗಣಿ ನಿನ್ನ ಶಬ್ದ ಸಂಪತ್ತು,
ಬಂಗಾರಕ್ಕಿಂತಲೂ ಶ್ರೇಷ್ಠ ನಿನ್ನ ನುಡಿ ಮುತ್ತು.

**– ದಿನಕರ ದೇಸಾಯಿ**

**ಮೇಲಿನ ಪದ್ಯವನ್ನು ರಾಗಬದ್ಧವಾಗಿ ಹಾಡಿರಿ.**

ಆ) ಕನ್ನಡದಲ್ಲಿಯೇ ಮಾತನಾಡಲು ಅಭ್ಯಾಸ ಮಾಡಿರಿ.

ಇ) ಕನ್ನಡನಾಡು ನುಡಿಯನ್ನು ಬಿಂಬಿಸುವ ಕವನಗಳನ್ನು ಸಂಗ್ರಹಿಸಿ.

©KTBS Not to be republished

## ವ್ಯಾಕರಣ

### ಭಾಗ–'ಅ'

### ಜೋಡುನುಡಿಗಳು

**ಗಮನಿಸಿ :**

- ಬೆಟ್ಟಗುಡ್ಡಗಳು ಸೌಂದರ್ಯದ ಪ್ರತೀಕಗಳು.
- ಮಕ್ಕಳು ಕಾಡು–ಮೇಡುಗಳನ್ನು ಸುತ್ತಿ ಬಸವಳಿದರು.
- ರಾಮನು ಪೇಟೆಯಿಂದ ಹಣ್ಣು–ಹಂಪಲು ತಂದನು.
- ನಾವು ಸುಖ–ದುಃಖಗಳನ್ನು ಸಮನಾಗಿ ಸ್ವೀಕರಿಸಬೇಕು.

ಮೇಲೆ ಗೆರೆ ಎಳೆದ ಪದಗಳನ್ನು ಗಮನಿಸಿ. ಇಂತಹ ಅನೇಕ ಪದಗಳನ್ನು ನಾವು ದಿನನಿತ್ಯದಲ್ಲಿ ಬಳಸುತ್ತೇವೆ. ಕೆಲವೊಮ್ಮೆ ನಮ್ಮ ಮಾತಿನಲ್ಲಿ ಬರವಣಿಗೆಯಲ್ಲಿ ಒಂದಕ್ಕೊಂದು ಪೂರಕವಾದ, ಒಂದಕ್ಕೊಂದು ವಿರುದ್ಧವಾದ ಪದಗಳನ್ನು ಜೋಡಿ ಮಾಡುತ್ತೇವೆ. ಕೆಲವೊಮ್ಮೆ ಮೊದಲನೆಯ ಪದಕ್ಕೆ ಮಾತ್ರ ಅರ್ಥವಿದ್ದು, ಎರಡನೆಯ ಪದದ ಅರ್ಥ ಅಸ್ಪಷ್ಟವಾಗಿರುತ್ತದೆ. ಇಂಥ ಪದಗಳನ್ನು 'ಜೋಡುನುಡಿ' ಗಳೆಂದು ಕರೆಯುತ್ತಾರೆ.

### ಭಾಗ–'ಆ'

ಇದರಂತೆಯೇ 'ಕನ್ನಡವ ನುಡಿ' ಪದ್ಯದಲ್ಲಿ ಬಂದಿರುವ ಜೋಡುನುಡಿಗಳನ್ನು ಗುರುತಿಸಿ ಬರೆಯಿರಿ.

* * * * *

©KTBS Not to be republished

# ೬. ಯಕ್ಷ ಪ್ರಶ್ನೆ

**– ಸಂಗ್ರಹ**

**ಪ್ರವೇಶ:** ವ್ಯಾಸರು ರಚಿಸಿರುವ ಮಹಾಭಾರತ ಸಂಸ್ಕೃತ ಭಾಷೆಯಲ್ಲಿರುವ ಒಂದು ಬೃಹತ್ ಮಹಾಕಾವ್ಯ. ಇದರಲ್ಲಿ ಬರುವ ಪಾಂಡವರು ಮತ್ತು ಕೌರವರ ಕತೆ ನಮಗೆ ನೀತಿ–ಮೌಲ್ಯಗಳನ್ನು ತಿಳಿಸುವಂತಹದು. ಕೌರವರೊಡನೆ ಆಡಿದ ಜೂಜಿನಲ್ಲಿ ರಾಜ್ಯ, ಸಂಪತ್ತು ಎಲ್ಲವನ್ನೂ ಕಳೆದುಕೊಂಡ ಪಾಂಡವರು ವನವಾಸಕ್ಕೆ ಬರುತ್ತಾರೆ. ವನವಾಸದ ಸಂದರ್ಭದಲ್ಲಿ ನಡೆಯುವ ಒಂದು ಪ್ರಸಂಗವೇ 'ಯಕ್ಷಪ್ರಶ್ನೆ'. ಇಲ್ಲಿ ಪಾಂಡವರಲ್ಲಿ ಹಿರಿಯನಾದ ಧರ್ಮರಾಜ ತನ್ನ ಜ್ಞಾನ, ಸತ್ಯ, ನಿಷ್ಠೆಗಳಿಂದ ಹೇಗೆ ಯಕ್ಷನ ಮೆಚ್ಚುಗೆ ಗಳಿಸಿದ ಎಂಬುದನ್ನು ತಿಳಿಯಬಹುದು. ಧರ್ಮರಾಜನು ಯಕ್ಷನಿಗೆ ಕೊಟ್ಟ ಉತ್ತರಗಳು ನಮ್ಮ ಜೀವನಕ್ಕೆ ದಾರಿ ತೋರಿಸುವಂತಹವುಗಳಾಗಿವೆ.

## ದೃಶ್ಯ–೧

(ಯಜ್ಞ ಮಾಡಲು ಬೇಕಾದ ಅರಣಿಯನ್ನು ಕಚ್ಚಿಕೊಂಡು ಹೋದ ಜಿಂಕೆಯನ್ನು ಬೆನ್ನಟ್ಟಿ ಧರ್ಮರಾಜ, ಭೀಮ, ಅರ್ಜುನ, ನಕುಲ ಮತ್ತು ಸಹದೇವ ಎಲ್ಲರೂ ಓಡುತ್ತಾರೆ. ಅದು ಅವರಿಗೆ ಸಿಗದೆ ಬಳಲಿ ಒಂದೆಡೆ ವಿಶ್ರಾಂತಿಗಾಗಿ ಕುಳಿತಿದ್ದಾರೆ.)

ಅರ್ಜುನ – ಅಣ್ಣಾ, ಎಷ್ಟು ಪ್ರಯತ್ನಪಟ್ಟರೂ ಆ ಜಿಂಕೆಯನ್ನು ನಮ್ಮಿಂದ ಹಿಡಿಯಲು ಆಗಲಿಲ್ಲವಲ್ಲ!

ಧರ್ಮರಾಜ – ಹೌದು ತಮ್ಮ, ನಮ್ಮ ಪ್ರಯತ್ನ ಫಲಿಸಲಿಲ್ಲ. ಜಿಂಕೆಯ ಹಿಂದೆ ಓಡಿ ಬಹಳ ಆಯಾಸವಾಗಿದೆ. (ಬೆವರೊರೆಸಿಕೊಳ್ಳುವನು)

ನಕುಲ – ತುಂಬ ಬಾಯಾರಿಕೆ ಆಗುತ್ತಿದೆ. ಹತ್ತಿರದಲ್ಲಿ ಎಲ್ಲಿಯಾದರೂ ನೀರು ಕಂಡರೆ ಮೊದಲು ನೀರು ಕುಡಿಯಬೇಕು.

ಸಹದೇವ – (ಆ ಕಡೆ ಈ ಕಡೆ ನೋಡುತ್ತಾ ಸ್ವಲ್ಪ ಮುಂದೆ ಬಂದು, ದೂರದಲ್ಲಿದ್ದ ಸರೋವರವನ್ನು ಗುರುತಿಸಿ) ನಕುಲ, ಅಲ್ಲಿ ಸ್ವಲ್ಪ ದೂರದಲ್ಲಿ ಸರೋವರವಿರುವಂತೆ ಕಾಣುತ್ತಿದೆ. ಒಬ್ಬರು ಹೋಗಿ ನೀರು ತರೋಣ.

ನಕುಲ – ಆಯಿತು, ನಾನೇ ಹೋಗುತ್ತೇನೆ. (ಸರೋವರದ ಕಡೆ ಹೋಗುವನು)

(ಸ್ವಲ್ಪ ಸಮಯದ ನಂತರ)

ಸಹದೇವ – (ನಕುಲ ಹೋದ ದಿಕ್ಕನ್ನೇ ನೋಡುತ್ತಾ) ನೀರು ತರುವೆನೆಂದು ಹೋದವ ಇನ್ನೂ ಬರಲಿಲ್ಲವಲ್ಲ! ನಾನೇ ಹೋಗಿ ನೋಡಿ ಬರುತ್ತೇನೆ.

ಭೀಮ – ಆಗಲಿ, ಬೇಗ ಹೋಗಿ ನೀರು ತೆಗೆದುಕೊಂಡು ಬಾ.

(ಮತ್ತೆ ಸ್ವಲ್ಪ ಸಮಯದ ನಂತರ)

ಅರ್ಜುನ – ಇದೇನಿದು? ನಕುಲನನ್ನು ಕರೆತರಲು ಹೋದ ಸಹದೇವನೂ ಬರಲಿಲ್ಲ. ನೀರು ತರಲು ಇಷ್ಟು ಸಮಯಬೇಕೆ? ಇರಲಿ, ನಾನೊಮ್ಮೆ ನೋಡಿ ಬರುತ್ತೇನೆ.

ಧರ್ಮರಾಜ – ಹೌದು ಅರ್ಜುನ, ನೀನು ಹೇಳುತ್ತಿರುವುದೂ ಸರಿಯೇ. ನೀನೇ ಹೋಗಿ ಏನಾಯಿತೋ ನೋಡಿ ಬಾ.

©KTBS Not to be republished

(ಇನ್ನೂ ಸ್ವಲ್ಪ ಸಮಯದ ನಂತರ)

ಭೀಮ – ಅಣ್ಣಾ ಧರ್ಮರಾಜ, ಇದೇನು ವಿಚಿತ್ರ! ನೀರು ತರಲು ಹೋದ ಮೂವರು ಸಹೋದರರೂ ಮರಳಿ ಬರಲಿಲ್ಲವಲ್ಲ! ಏನಾಯಿತು ಇವರಿಗೆ?. . . ನಾನೇ ಹೋಗಿ ಅವರನ್ನು ಕರೆತರುವೆ. ಬಾಯಾರಿಕೆ ತಡೆಯಲಾಗುತ್ತಿಲ್ಲ.

ಧರ್ಮರಾಜ – ಬೇಗ ಹೋಗಿ ಬಾ. ನಿನ್ನ ದಾರಿಯನ್ನೇ ನಾನು ನೋಡುತ್ತಿರುವೆ. (ಮತ್ತೂ ಸ್ವಲ್ಪ ಸಮಯದ ನಂತರ) ಬೇಗ ಬರುವೆನೆಂದು ಹೋದ ಭೀಮನೂ ಬರಲಿಲ್ಲವಲ್ಲ! ಸರೋವರ ಇಲ್ಲಿಯೇ ಸಮೀಪದಲ್ಲಿದೆಯೆಂದು ಹೇಳಿ ಹೋದ ನಾಲ್ವರು ಸಹೋದರರೂ ಬರಲಿಲ್ಲ. ಏನಾಗಿರಬಹುದು? ಇನ್ನಾವ ಕಷ್ಟಕ್ಕೆ ಸಿಕ್ಕಿಕೊಂಡರೋ ಕಾಣೆನಲ್ಲ. (ಕಳವಳದಿಂದ) ನಾನೇ ಹೋಗಿ ನೋಡಿ ಬರುತ್ತೇನೆ.

## ದೃಶ್ಯ–೨

(ಸರೋವರದ ದಡದಲ್ಲಿ ನಕುಲ, ಸಹದೇವ, ಅರ್ಜುನ, ಭೀಮ ನಿಶ್ಚಲವಾಗಿ ಬಿದ್ದಿದ್ದಾರೆ. ಧರ್ಮರಾಜ ಅಲ್ಲಿಗೆ ಬಂದು, ಬಿದ್ದ ತಮ್ಮಂದಿರ ಮೈದಡವುತ್ತಾ ಎಚ್ಚರಗೊಳಿಸುವ ಪ್ರಯತ್ನ ಮಾಡುತ್ತಾನೆ. ಯಾರೊಬ್ಬರೂ ಏಳದಿದ್ದಾಗ ದುಃಖದಿಂದ ಅಳತೊಡಗುತ್ತಾನೆ.)

ಧರ್ಮರಾಜ – ಅಯ್ಯೋ ವಿಧಿಯೇ..., ಇದೇನು ಅನ್ಯಾಯವಾಯಿತು. ನೀರು ತರಲು ಬಂದವರು. ಹೀಗೆ ಸಾವನ್ನಪ್ಪಿದ್ದಾರಲ್ಲ. ನಾನೀಗ ಏನು ಮಾಡಲಿ? (ಕಣ್ಣೀರನ್ನು ಒರೆಸಿಕೊಳ್ಳುತ್ತಾ ಆ ಕಡೆ ಈ ಕಡೆ ನೋಡುವನು.) ಪರಮ ಪರಾಕ್ರಮಿಗಳಾದ ನನ್ನ ತಮ್ಮಂದಿರಿಗೆ ಈ ಸ್ಥಿತಿಯೇ? ಇಲ್ಲಿ ಯಾರೂ ಬಂದಂತೆಯೂ ಕಾಣುವುದಿಲ್ಲ. ಇದು ದುರ್ಯೋಧನನ ಕುತಂತ್ರವಿರಬಹುದೆ? ಅಥವಾ .... ಅಥವಾ... ಗೂಢಚಾರರ ಕೆಲಸವೇ? ಏನೂ ಅರ್ಥವಾಗುತ್ತಿಲ್ಲವಲ್ಲ..... (ತಮ್ಮಂದಿರ ಹತ್ತಿರ ಬಂದು ಒಬ್ಬೊಬ್ಬರ ಮೈದಡವುತ್ತಾ) ಈ ಸರೋವರದ ನೀರಿನಲ್ಲಿ ವಿಷವಿದ್ದಿತೆ? ಆದರೆ ಇವರ ಮುಖಗಳನ್ನು ನೋಡಿದರೆ ವಿಷದಿಂದ ಸತ್ತ ಹಾಗೆ ಕಾಣುವುದಿಲ್ಲ. ಮೈ ಮೇಲೆ ಯಾವ ಆಯುಧದ ಗುರುತೂ ಇಲ್ಲ. ಇದೇನು ವಿಚಿತ್ರ! ದೇವರೇ, . .ಏನು ಮಾಡಲೀಗ? (ಕುಸಿದು ಕುಳಿತುಕೊಳ್ಳುವನು. ನಂತರ ನಿಧಾನವಾಗಿ ಸರೋವರದ ಹತ್ತಿರ ಬಂದು ಅತ್ತ ಇತ್ತ ನೋಡುತ್ತ ನೀರಿಗೆ ಇಳಿದು ಬೊಗಸೆಯಲ್ಲಿ ನೀರು ತುಂಬಿಕೊಳ್ಳುತ್ತಾನೆ. ಅಷ್ಟರಲ್ಲಿ,)

ಧ್ವನಿ – ನಿಲ್ಲು... ಧರ್ಮರಾಜ,.. ನಿಲ್ಲು. ಯಾರ ಅಪ್ಪಣೆ ಪಡೆದು ಈ ಸರೋವರದ ನೀರನ್ನು ಕುಡಿಯುತ್ತಿರುವೆ? ಇದು ನನ್ನ ಸರೋವರ. ನನ್ನ ಅಪ್ಪಣೆಯಿಲ್ಲದೆ ಯಾರೂ ಈ ನೀರನ್ನು ಕುಡಿಯಲಾಗದು.

ಧರ್ಮರಾಜ – (ಧ್ವನಿ ಬಂದತ್ತ ತಿರುಗಿ) ಯಾರು?. . .ಯಾರು ಮಾತನಾಡುತ್ತಿರುವುದು? ಯಾರೂ ಕಾಣುತ್ತಿಲ್ಲವಲ್ಲ!.... ಕೇವಲ ಧ್ವನಿ ಮಾತ್ರ ಕೇಳುತ್ತಿದೆ. ಇದು ನನ್ನ ಭ್ರಮೆಯಲ್ಲ ತಾನೆ?

ಧ್ವನಿ – ಧರ್ಮರಾಜ, ಇತ್ತ ನೋಡು. ನಾನೊಬ್ಬ ಯಕ್ಷ. (ಕಾಣಿಸಿಕೊಳ್ಳುವನು)

ಧರ್ಮರಾಜ – ಓ, ಯಕ್ಷನೇ? ಪರಮ ಪರಾಕ್ರಮಿಗಳಾದ ನನ್ನ ತಮ್ಮಂದಿರ ಈ ಸ್ಥಿತಿಗೆ ನೀನೇ ಕಾರಣನೋ?

©KTBS Not to be republished



ಯಕ್ಷ – ಹೌದು. . . ನಾನೇ ಕಾರಣ.

ಧರ್ಮರಾಜ – ಎಲೈ ಯಕ್ಷನೇ, ಇವರು ನಿನಗೇನು ಕೇಡು ಮಾಡಿದರೆಂದು ಹೀಗೆ ಮಾಡಿದೆ? ಬಾಯಾರಿ ನೀರಿಗೆ ಬಂದವರನ್ನು ಹೀಗೆ ಕೊಲ್ಲಬಹುದೆ?

ಯಕ್ಷ – ನನ್ನ ಮಾತನ್ನು ಕೇಳಿದ್ದರೆ ಅವರಿಗೆ ಈ ಸ್ಥಿತಿ ಬರುತ್ತಿರಲಿಲ್ಲ.

ಧರ್ಮರಾಜ – ನಿನ್ನ ಮಾತೆ? ಅದ್ಯಾವ ಮಾತು ನೀನು ಹೇಳಿದ್ದು?

ಯಕ್ಷ – ಅವಸರ ಪಡಬೇಡ ಧರ್ಮರಾಜ. ನೀನಾದರೂ ಸಹನೆಯಿಂದ ನನ್ನ ಮಾತುಗಳನ್ನು ಕೇಳು. ಮೊದಲು ನನ್ನ ಪ್ರಶ್ನೆಗಳಿಗೆ ಉತ್ತರಿಸಿ, ಆ ಮೇಲೆ ನೀರು ಕುಡಿಯಲು ಹೇಳಿದರೆ, ಯಾರೊಬ್ಬರೂ ಕೇಳಲಿಲ್ಲ. ನನ್ನ ಮಾತುಗಳನ್ನು ಧಿಕ್ಕರಿಸಿ ನೀರು ಕುಡಿದರು.

ಧರ್ಮರಾಜ – ಅದಕ್ಕೆ... ನೀನು ಈ ಶಿಕ್ಷೆ ಕೊಟ್ಟೆಯಾ?

ಯಕ್ಷ – ಹೌದು ಧರ್ಮರಾಜ, ಈಗ ನೀನು ಯೋಚನೆ ಮಾಡು. ಮೊದಲು ನೀರು ಕುಡಿದು ಸಾಯುವೆಯೋ? ಇಲ್ಲಾ ನನ್ನ ಪ್ರಶ್ನೆಗಳಿಗೆ ಉತ್ತರ ಹೇಳಿ ಬದುಕುವಿಯೋ?

ಧರ್ಮರಾಜ – (ಸ್ವಗತ: ಏನು ಮಾಡಲಿ ಈಗ? ಈ ಯಕ್ಷನ ಪ್ರಶ್ನೆಗಳಿಗೆ ಉತ್ತರಿಸಿ ನನ್ನ ತಮ್ಮಂದಿರನ್ನು ಕಾಪಾಡುವುದೇ ಸರಿಯಾದ ಉಪಾಯ) ಸರಿ. ನಿನ್ನ ಪ್ರಶ್ನೆಗಳಿಗೆ ಉತ್ತರ ಹೇಳಿದರೆ ನನಗಾಗುವ ಉಪಯೋಗವೇನು?

ಯಕ್ಷ – ಹಾಂ, ... ನೀನು ಕೇಳಿದ್ದು ಸರಿಯೇ. ನನ್ನ ಪ್ರಶ್ನೆಗಳಿಗೆ ಸರಿಯಾಗಿ ಉತ್ತರಿಸಿದರೆ ಸತ್ತಿರುವ ನಿನ್ನ ತಮ್ಮಂದಿರಲ್ಲಿ ಒಬ್ಬನನ್ನು ಬದುಕಿಸಿ ಕೊಡುತ್ತೇನೆ.

ಧರ್ಮರಾಜ – ಆಗಲಿ. ನಿನ್ನ ಮಾತನ್ನು ನಂಬುತ್ತೇನೆ. ಏನು ಪ್ರಶ್ನೆಗಳನ್ನು ಕೇಳಲಿಚ್ಛಿಸುವೆಯೋ ಕೇಳು.

ಯಕ್ಷ – ಧರ್ಮರಾಜ, ಹೇಳು ಭೂಮಿಗಿಂತ ದೊಡ್ಡ ವಸ್ತು ಯಾವುದು?

ಧರ್ಮರಾಜ – ಭೂಮಿಗಿಂತ ದೊಡ್ಡ ವಸ್ತು ತಾಯಿ.

ಯಕ್ಷ – ಸರಿ. ಹಾಗಾದರೆ ಆಕಾಶಕ್ಕಿಂತ ಉನ್ನತ ವಸ್ತು ಯಾವುದು?

©KTBS Not to be republished

ಧರ್ಮರಾಜ – ಕೇಳು ಯಕ್ಷನೇ, ಪ್ರಪಂಚದಲ್ಲಿ ಆಕಾಶಕ್ಕಿಂತ ಉನ್ನತ ವಸ್ತುವೊಂದಿದ್ದರೆ ಅದು ತಂದೆ.

ಯಕ್ಷ – ಸರಿಯಾಗಿ ಹೇಳಿದೆ. ಈಗ ಹೇಳು, ಗಾಳಿಗಿಂತ ವೇಗವಾದದ್ದು ಯಾವುದು?

ಧರ್ಮರಾಜ – ಯಕ್ಷ, ಗಾಳಿಯೇ ಅತ್ಯಂತ ವೇಗವಾದದ್ದು ಎಂದುಕೊಂಡರೆ, ಮನುಷ್ಯನ ಮನಸ್ಸು ಅದನ್ನೂ ಮೀರಿದ್ದು. ಅದು ಗಾಳಿಗಿಂತಲೂ ವೇಗವಾದದ್ದು.

ಯಕ್ಷ – ಭಲೇ ರಾಜ! ಭಲೇ! ಗಾಳಿಗಿಂತಲೂ ವೇಗವಾದ ಮನಸ್ಸನ್ನು ಹೊಂದಿದ ಆ ಮನುಷ್ಯನನ್ನು ಅತಿಯಾಗಿ ಕಾಡುವುದು ಯಾವುದು?

ಧರ್ಮರಾಜ – (ಸ್ವಲ್ಪ ಚಿಂತಿಸಿ) ಮಹಾತ್ಮನೇ ಮನುಷ್ಯನನ್ನು ಅತಿಯಾಗಿ ಕಾಡುವುದು ಚಿಂತೆ.

ಯಕ್ಷ – ಒಪ್ಪಿದೆ ಧರ್ಮರಾಜ ಒಪ್ಪಿದೆ. ಸ್ವರ್ಗಕ್ಕಾಗಿ ಮನುಷ್ಯ ಆಸೆ ಪಡುತ್ತಾನೆ. ಆದರೆ ಅವನಿಗೆ ಸ್ವರ್ಗ ಸಿಗುವುದು ಯಾವುದರಿಂದ?

ಧರ್ಮರಾಜ – ಸ್ವರ್ಗವೇ? . . ಯಕ್ಷ, ಸತ್ಯ ಮಾರ್ಗದಿಂದ ಸ್ವರ್ಗ ಸಿಗುವುದಲ್ಲದೆ ಬೇರೆ ಏನೂ ದಾರಿಯಿಲ್ಲ.

ಯಕ್ಷ – ಸರಿಯಾಗಿ ಹೇಳಿದೆ ರಾಜ, ಸರಿಯಾಗಿ ಹೇಳಿದೆ. ಈಗ ಹೇಳು, ಧನಗಳಲ್ಲಿ ಅತ್ಯಂತ ಉತ್ತಮ ಧನ ಯಾವುದು?

ಧರ್ಮರಾಜ – ಉತ್ತಮವಾದ ಪ್ರಶ್ನೆ ಕೇಳಿದೆ ನೀನು. ವಿದ್ಯಾಧನವೇ ಎಲ್ಲಾ ಧನಗಳಿಗಿಂತ ಉತ್ತಮವಾದುದು. ಸರ್ವಶ್ರೇಷ್ಠವಾದ ಧನ.

ಯಕ್ಷ – ಬಹಳ ಸಂತೋಷ. ಧರ್ಮರಾಜ, ನೀನು ಗಮನಿಸಿರುವೆಯಾ, ಮನುಷ್ಯನಿಗೆ ಲಾಭವೇ ಮುಖ್ಯ. ಜೀವನದಲ್ಲಿ ಉತ್ತಮವಾದ ಲಾಭವೇನಾದರೂ ಇದ್ದರೆ, ಅದು ಯಾವುದು?

ಧರ್ಮರಾಜ – ಗಮನಿಸಿದ್ದೇನೆ, ಮಹಾತ್ಮ, ಜೀವನದಲ್ಲಿ ಉತ್ತಮವಾದ ಲಾಭವೆಂದರೆ ಅದು ಆರೋಗ್ಯ ಭಾಗ್ಯ.

ಯಕ್ಷ – ಭಲೇ! ಧರ್ಮರಾಜ ಸರಿಯಾಗಿ ಉತ್ತರಿಸಿದೆ. ಈಗ ಹೇಳು. ಯಾವುದನ್ನು ಬಿಟ್ಟರೆ ವ್ಯಕ್ತಿ ಜನರಿಗೆ ಪ್ರಿಯನಾಗುವನು?

ಧರ್ಮರಾಜ – ಮಹಾತ್ಮನೇ ಕೇಳು. ವ್ಯಕ್ತಿ ಗರ್ವವನ್ನು ಬಿಟ್ಟರೆ ಜನರಿಗೆ ಪ್ರಿಯನಾಗುತ್ತಾನೆ.

ಯಕ್ಷ – ಒಪ್ಪಿದೆ ಧರ್ಮರಾಜ ನಿನ್ನ ಧರ್ಮಪ್ರಜ್ಞೆಯನ್ನು. ಎಲ್ಲಾ ಸುಖ ಭೋಗಗಳಿದ್ದೂ ಯಾವಾಗಲೂ ದುಃಖಿಯಾಗಿರುವವನು ಯಾರು?

ಧರ್ಮರಾಜ – ಕೇಳು ಯಕ್ಷ, ಪರರ ಏಳಿಗೆಯನ್ನು ಸೈರಿಸಲಾರದವನೇ ಯಾವಾಗಲೂ ದುಃಖಿ. (ಯಕ್ಷ ಇನ್ನೂ ಅನೇಕ ಪ್ರಶ್ನೆಗಳನ್ನು ಕೇಳುತ್ತಾನೆ. ಅದಕ್ಕೆಲ್ಲಾ ತಾಳ್ಮೆಯಿಂದ ಧರ್ಮರಾಜ ಉತ್ತರ ಕೊಡುತ್ತಾನೆ. ಯಕ್ಷ ತೃಪ್ತನಾಗುವನು.)

ಯಕ್ಷ – ಭಲೇ ಧರ್ಮರಾಜ, ಭಲೇ, ನೀನು ಹೆಸರಿಗೆ ತಕ್ಕಂತೆ ಧರ್ಮರಾಜನೇ ಸರಿ. ಮೆಚ್ಚಿದೆ ನಿನ್ನ ಬುದ್ಧಿವಂತಿಕೆಯನ್ನು. ನಿನ್ನ ಉತ್ತರಗಳನ್ನು ಕೇಳಿ ಬಹಳ ಸಂತೋಷವಾಗಿದೆ. ನಿನ್ನ ನಾಲ್ವರು

©KTBS Not to be republished

ಸಹೋದರರಲ್ಲಿ ಯಾರಾದರು ಒಬ್ಬರನ್ನು ಬದುಕಿಸುವೆ. ಹೇಳು, ಯಾರನ್ನು ಬದುಕಿಸಲಿ?

ಧರ್ಮರಾಜ – (ಯಕ್ಷನಿಗೆ ಕೈ ಮುಗಿದು) ಧನ್ಯನಾದೆ. ನಾಲ್ವರಲ್ಲಿ ಒಬ್ಬನನ್ನು ಬದುಕಿಸುವುದಾದರೆ, ನನ್ನ ತಮ್ಮ ನಕುಲನನ್ನು ಬದುಕಿಸು.

ಯಕ್ಷ – (ಆಶ್ಚರ್ಯದಿಂದ) ಇದೇನು ಧರ್ಮರಾಜ, ಹೀಗೆ ಹೇಳುತ್ತಿರುವೆ? ಅವಸರ ಪಡಬೇಡ. ಸ್ವಲ್ಪ ಯೋಚಿಸು. ವೀರರಾದ ಭೀಮ, ಅರ್ಜುನರು ನಿನಗೆ ಪ್ರಿಯರಲ್ಲವೇ? ಅವರನ್ನು ಬಿಟ್ಟು ನಕುಲನನ್ನು ಬದುಕಿಸಲು ಹೇಳುತ್ತಿರುವಿಯಲ್ಲಾ! ಮತ್ತೊಮ್ಮೆ ಯೋಚಿಸು.

ಧರ್ಮರಾಜ – ಪೂಜ್ಯನೇ, ನಾನು ಚೆನ್ನಾಗಿ ಯೋಚಿಸಿದ್ದೇನೆ. ನನಗೆ ಇಬ್ಬರು ತಾಯಂದಿರು. ಕುಂತಿ ಮತ್ತು ಮಾದ್ರಿ. ಕುಂತಿಯ ಮಕ್ಕಳಲ್ಲಿ ನಾನು ಜೀವಂತವಾಗಿರುವೆ. ಈಗ ಮಾತೆ ಮಾದ್ರಿಯ ಮಕ್ಕಳಲ್ಲಿ ಒಬ್ಬನಾದ ನಕುಲನನ್ನು ಬದುಕಿಸಿಕೊಳ್ಳುವುದು ನ್ಯಾಯವಲ್ಲವೇ? ನೀನೇ ಹೇಳು.

ಯಕ್ಷ – ಧರ್ಮರಾಜ, ಮೆಚ್ಚಿದೆ ನಿನ್ನ ನ್ಯಾಯ ನಿಷ್ಠೆಯನ್ನು, ಸಹೋದರ ಪ್ರೀತಿಯನ್ನು. ನಕುಲನೊಬ್ಬನೇ ಏಕೆ? ನಿನ್ನ ಎಲ್ಲಾ ತಮ್ಮಂದಿರೂ ಬದುಕಲಿ. (ಯಕ್ಷನ ಕೃಪೆಯಿಂದ ಸತ್ತುಬಿದ್ದಿದ್ದ ನಾಲ್ವರೂ ನಿದ್ದೆಯಿಂದ ಎದ್ದವರಂತೆ ಎದ್ದು ಕುಳಿತು, ಆಶ್ಚರ್ಯದಿಂದ ಯಕ್ಷನನ್ನೂ ಧರ್ಮರಾಜನನ್ನೂ ನೋಡುವರು.)

ಧರ್ಮರಾಜ – ಕೃತಾರ್ಥನಾದೆ ದೇವ, ನಾನು ಕೃತಾರ್ಥನಾದೆ. ನೀನು ಸಾಮಾನ್ಯ ಯಕ್ಷನಲ್ಲ. ಯಾರೋ ದೇವತೆಯೇ ಆಗಿರಬೇಕು. ದಯವಿಟ್ಟು ನಿನ್ನ ನಿಜರೂಪವನ್ನು ತೋರಿಸು.

ಯಕ್ಷ – ಹೌದು ಧರ್ಮರಾಜ, ನಾನು ಯಕ್ಷನಲ್ಲ. ನಿನ್ನ ತಂದೆ ಯಮಧರ್ಮ. ನಿನ್ನನ್ನು ಪರೀಕ್ಷಿಸಲು ಬಂದಿದ್ದೆ. ನಿನ್ನ ಧರ್ಮಪ್ರಜ್ಞೆ, ನ್ಯಾಯನಿಷ್ಠೆ, ಸೋದರ ಪ್ರೇಮದಿಂದ ಸಂತುಷ್ಟನಾಗಿದ್ದೇನೆ. (ಸಹೋದರರೆಲ್ಲರೂ ಯಕ್ಷನಿಗೆ ನಮಸ್ಕರಿಸುವರು)

ಧರ್ಮರಾಜ – ಧನ್ಯನಾದೆ ತಂದೆ, ಧನ್ಯನಾದೆ. ನಿನ್ನ ದರ್ಶನದಿಂದ ನನ್ನ ಜೀವನ ಪಾವನವಾಯಿತು.

ಯಕ್ಷ – ನಿಮಗೆಲ್ಲರಿಗೂ ಶುಭವಾಗಲಿ. ಜಯಶಾಲಿಗಳಾಗಿ, ಕೀರ್ತಿವಂತರಾಗಿ ಬಾಳಿ.

* * * * * *

## ಪದಗಳ ಅರ್ಥ

ಅಪ್ಪಣೆ–ಅನುಮತಿ, ಒಪ್ಪಿಗೆ;
ಅರಣಿ–ಯಜ್ಞಕ್ಕೆ ಬೆಂಕಿ ಹುಟ್ಟಿಸಲು ಬಳಸುವ ಮರದ ತುಂಡು;
ಇಚ್ಛೆ–ಇಷ್ಟ;
ಉನ್ನತ–ಶ್ರೇಷ್ಠ, ಮೇಲು ಮಟ್ಟದ;
ಏಳ್ಗೆ–ಅಭಿವೃದ್ಧಿ;
ಜೂಜು–ಪಣವಿಟ್ಟು ಆಡುವ ಆಟ;
ಧನ–ಹಣ;
ಧಿಕ್ಕರಿಸು–ತಿರಸ್ಕರಿಸು;
ಪ್ರಿಯ–ಇಷ್ಟವಾದ;
ಬಳಲು–ಆಯಾಸಗೊಳ್ಳು;
ಯಕ್ಷರು–ದೇವತೆಗಳಲ್ಲಿ ಒಂದು ವರ್ಗ;

©KTBS Not to be republished

ಕೃತಾರ್ಥ–ಧನ್ಯತೆಯ ಭಾವ;

ಗರ್ವ–ಅಹಂಕಾರ;

ಗೂಢಚಾರ–ಗುಟ್ಟಾಗಿ ಮಾಹಿತಿ ಸಂಗ್ರಹಿಸುವವ, ಬೇಹುಗಾರ;

ವನ–ಕಾಡು, ಅರಣ್ಯ, ಅಡವಿ, ಪೀಡಿಸು;

ವನವಾಸ–ಕಾಡಿನಲ್ಲಿ ವಾಸಿಸುವುದು;

ಸರೋವರ–ನೀರಿನ ತಾಣ;

ಸೈರಿಸು–ಸಹಿಸು.

## ಅಭ್ಯಾಸ

**ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಪಾಂಡವರು ವನವಾಸಕ್ಕೆ ಬರಲು ಕಾರಣವೇನು?

೨. ನಕುಲನು ಸರೋವರಕ್ಕೆ ಏಕೆ ಹೋದನು?

೩. ಗಾಳಿಗಿಂತ ವೇಗವಾದುದು ಯಾವುದು?

೪. 'ಯಕ್ಷ ಪ್ರಶ್ನೆ'ಯಲ್ಲಿ ಹೇಳಿರುವಂತೆ ಎಲ್ಲಕ್ಕಿಂತ ಉತ್ತಮವಾದ ಧನ ಯಾವುದು?

೫. ಧರ್ಮರಾಜನಿಗೆ ಪ್ರಶ್ನೆಗಳನ್ನು ಕೇಳಿದ ಯಕ್ಷ ಯಾರು?

೬. ಧರ್ಮರಾಜ ತನ್ನ ಸಹೋದರರಲ್ಲಿ ಯಾರನ್ನು ಬದುಕಿಸಲು ಕೇಳಿದನು?

**ಆ) ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಪಾಂಡವರು ಜಿಂಕೆಯನ್ನು ಬೆನ್ನಟ್ಟಿದ್ದು ಏಕೆ?

೨. ಧರ್ಮರಾಜನ ತಮ್ಮಂದಿರೆಲ್ಲ ಸಾಯಲು ಕಾರಣವೇನು?

೩. ಸ್ವರ್ಗ ಮತ್ತು ಲಾಭದ ಬಗೆಗೆ ಧರ್ಮರಾಜನ ಉತ್ತರವೇನು?

೪. ಯಕ್ಷನು ಏಕೆ ಸಂತುಷ್ಟನಾದನು?

**ಇ) ಕೆಳಗಿನ ನುಡಿಗಳ ಸಂದರ್ಭವನ್ನು ಸ್ವಾರಸ್ಯ ಸಹಿತ ವಿವರಿಸಿರಿ.**

೧. 'ಅಯ್ಯೋ ವಿಧಿಯೇ, ಇದೇನು ಅನ್ಯಾಯವಾಯಿತು?'

೨. 'ಮೊದಲು ನೀರು ಕುಡಿದು ಸಾಯುವೆಯೋ, ಇಲ್ಲಾ ನನ್ನ ಪ್ರಶ್ನೆಗೆ ಉತ್ತರ ಹೇಳಿ ಬದುಕುವೆಯೋ?'

೩. 'ಮನುಷ್ಯನನ್ನು ಅತಿಯಾಗಿ ಕಾಡುವುದೇ ಚಿಂತೆ'.

೪. 'ಪರರ ಏಳಿಗೆಯನ್ನು ಸೈರಿಸಲಾರದವನೇ ದುಃಖಿ'.

೫. 'ನನಗೆ ಇಬ್ಬರು ತಾಯಂದಿರು'.

©KTBS Not to be republished

## ಭಾಷಾಭ್ಯಾಸ

**ಅ) ಕೆಳಗಿನ ಪದಗಳನ್ನು ಬಿಡಿಸಿ ಬರೆದು, ಸಂಧಿಯ ಹೆಸರು ತಿಳಿಸಿರಿ.**

೧. ಇದೇನು ೨. ಅಲ್ಲಿಂದಿಲ್ಲಿಗೆ ೩. ಮಾತನ್ನು ೪. ರೂಪದಲ್ಲಿದ್ದ ೫. ಮಹಾತ್ಮ.

**ಆ) ಕೆಳಗೆ ಕೊಟ್ಟಿರುವ ಪದಗಳಿಗೆ ತತ್ಸಮ ತದ್ಭವಗಳನ್ನು ಬರೆಯಿರಿ.**

೧. ಧರ್ಮ ೨. ಸ್ವರ್ಗ ೩. ವಿಧಿ ೪. ಸಂತೋಷ ೫. ವಿಷ ೬. ಧ್ವನಿ ೭. ಭೂಮಿ ೮. ಆಕಾಶ.

**ಇ) ಕೆಳಗೆ ಕೊಟ್ಟಿರುವ ಪಟ್ಟಿಯಲ್ಲಿನ ಪದಗಳನ್ನು ಜೋಡಿಸಿ ಅರ್ಥಪೂರ್ಣ ವಾಕ್ಯಗಳನ್ನು ರಚಿಸಿರಿ.**

**ಮಾದರಿ:** ಫಾತಿಮಾ ಪುಸ್ತಕವನ್ನು ಕೊಂಡಳು.

| ಕರ್ತೃ | ಕರ್ಮ | ಕ್ರಿಯಾಪದ |
|---|---|---|
| ಫಾತಿಮಾ | ನೀರನ್ನು | ತಿಂದರು |
| ಹುಡುಗರು | ಪುಸ್ತಕವನ್ನು | ಹಿಡಿಯಿತು |
| ಮಹೇಶ | ಇಲಿಯನ್ನು | ಕೊಂಡಳು |
| ಬೆಕ್ಕು | ಹಣ್ಣುಗಳನ್ನು | ತಂದನು |

## ಭಾಷಾ ಚಟುವಟಿಕೆ

ಅ) ಯಕ್ಷ ಪ್ರಶ್ನೆಯ ಪ್ರಸಂಗವನ್ನು ವೇಷಭೂಷಣಗಳೊಂದಿಗೆ ತರಗತಿಯಲ್ಲಿ ಅಭಿನಯಿಸಿರಿ.

ಆ) ಮಹಾಭಾರತದ ಕತೆಯನ್ನು ಓದಿ ತಿಳಿಯಿರಿ.

**ಇ) ಕೆಳಗಿನ ಕಥಾಭಾಗವನ್ನು ಸಂಭಾಷಣೆಯ ರೂಪದಲ್ಲಿ (ನಾಟಕ ರೂಪ) ಬರೆಯಿರಿ.**

ಒಮ್ಮೆ ಮನುಷ್ಯನೊಬ್ಬ ಮೈ ತುಂಬಾ ಕಂಬಳಿ ಹೊದ್ದುಕೊಂಡು ಹೊರಟಿದ್ದನು. ಅವನನ್ನು ನೋಡಿದ ಮಾರುತ ಸೂರ್ಯನ ಬಳಿಗೆ ಬಂದು, ನೀನು ಬೆಳಕು, ಶಾಖ ಕೊಡುವ ದೇವರು. ನಾನು ಗಾಳಿ ಕೊಡುವೆ. ನಮ್ಮಿಬ್ಬರಲ್ಲಿ ಯಾರು ಬಲಶಾಲಿಗಳೆಂದು ಇವತ್ತು ತಿಳಿಯೋಣ ಎಂದು ಹೇಳಿದನು. ಅದಕ್ಕೆ ಸೂರ್ಯ ಅದನ್ನು ಹೇಗೆ ನಿರ್ಧರಿಸುವುದು ಎಂದನು. ಅದಕ್ಕೆ ಮಾರುತ, ಅದು ಹೇಗೆಂದರೆ, ಯಾರು ಆ ಮನುಷ್ಯ ಹೊದ್ದುಕೊಂಡ ಕಂಬಳಿಯನ್ನು ಬೀಳಿಸುತ್ತಾರೋ ಅವರೇ ಬಲಶಾಲಿಗಳು ಎಂದನು. ಸೂರ್ಯ ಒಪ್ಪಿಗೆ ಸೂಚಿಸಿದನು.

©KTBS Not to be republished

ಮಾರುತ ಮನುಷ್ಯನ ಸಮೀಪಕ್ಕೆ ಬಂದು ಜೋರಾಗಿ ಗಾಳಿ ಬೀಸ ತೊಡಗಿದನು. ಗಾಳಿಯಿಂದ ಚಳಿ ಹೆಚ್ಚಾಗಿ ಮನುಷ್ಯ ಬಿಗಿಯಾಗಿ ಕಂಬಳಿ ಹೊದ್ದುಕೊಂಡನು. ಮಾರುತ ಮಾಡಿದ ಪ್ರಯತ್ನ ಫಲಿಸಲಿಲ್ಲ. ಸೋತು ಕುಳಿತನು. ನಂತರ ಸೂರ್ಯನ ಸರದಿ. ಸೂರ್ಯ ತನ್ನ ಕಿರಣಗಳನ್ನು ಪ್ರಖರವಾಗಿ ಹರಡಿದನು. ಬಿಸಿಲು ಹೆಚ್ಚಾಗತೊಡಗಿತು. ಸೆಖೆ ತಾಳಲಾರದೆ ಮನುಷ್ಯ ತನ್ನ ಕಂಬಳಿ ತೆಗೆದು ಕೆಳಕ್ಕೆ ಹಾಕಿದನು. ಇದನ್ನು ನೋಡಿ ಮಾರುತ ಸೂರ್ಯನ ಬಳಿ ಬಂದು ನಾನು ಸೋತೆ, ನೀನು ನಿಜಕ್ಕೂ ನನಗಿಂತ ಬಲಶಾಲಿ, ನೀನೇ ಗೆದ್ದೆ ಎಂದನು. ಆಗ ಸೂರ್ಯ ಇಲ್ಲ ಯಾರೂ ಹೆಚ್ಚೂ ಇಲ್ಲ ಅಥವಾ ಕಡಿಮೆಯೂ ಇಲ್ಲ. ಅವರವರ ಕೆಲಸ ಅವರಿಗೆ ಮುಖ್ಯ ಎಂದನು.

## ವ್ಯಾಕರಣ

## ಕರ್ತೃ, ಕರ್ಮ, ಕ್ರಿಯಾ ಪದಗಳು

### ಭಾಗ 'ಅ'

ಕರ್ತೃಪದ, ಕರ್ಮಪದ, ಕ್ರಿಯಾಪದ ಹಾಗೂ ಅವುಗಳ ವಿಶೇಷಣಗಳಿಂದ ಕ್ರಮವಾಗಿ ಬರೆದ ಪದಸಮೂಹವೇ ವಾಕ್ಯವೆನಿಸುವುದು. ಅನೇಕ ಪದಗಳನ್ನು ಪರಸ್ಪರ ಸಂಬಂಧವುಂಟಾಗುವಂತೆ ಜೋಡಿಸುವುದೇ ವಾಕ್ಯರಚನೆ ಎನಿಸುವುದು.

**ಕೆಳಗಿನ ವಾಕ್ಯಗಳನ್ನು ಗಮನಿಸಿ**

೧. ನನಗೆ ಹೂವುಗಳೆಂದರೆ ಬಹಳ ಇಷ್ಟ

೨. ಆ ಬೊಂಬೆಯ ಪುಸ್ತಕವನ್ನು ಕೊಡು

೩. ನಾಳೆ ಅವರು ಯಾವ ಊರಿಗೆ ಹೋಗುತ್ತಿರುವರು

**ಮೇಲಿನ ಪದ ಸಮೂಹಗಳನ್ನು ಓದಿದಾಗ ಅವು ಅರ್ಥವಾಗುತ್ತವೆ. ಮುಂದಿನ ಪದ ಸಮೂಹಗಳನ್ನು ಗಮನಿಸಿರಿ.**

೧. ಇಷ್ಟ ಹೂವು ಬಹಳ ಎಂದರೆ ನನಗೆ.

೨. ಕೊಡು ಪುಸ್ತಕವನ್ನು ಬೊಂಬೆಯ ಆ.

೩. ಯಾವ ಅವರು ಊರಿಗೆ ಹೋಗುತ್ತಿರುವರು ನಾಳೆ?

ಇಲ್ಲಿರುವ ಪದಗಳು ಅವೇ ಆದರೂ ಅರ್ಥವಾಗುವುದಿಲ್ಲ. ಆದುದರಿಂದ ಅರ್ಥಪೂರ್ಣವಾಗಿ ಜೋಡಿಸಲಾದ ಪದಗಳ ಗುಂಪನ್ನು ವಾಕ್ಯ ಎನ್ನುತ್ತೇವೆ. ವಾಕ್ಯಗಳಲ್ಲಿ ಕರ್ತೃ, ಕರ್ಮ, ಕ್ರಿಯಾ ಪದಗಳು ಇರುತ್ತವೆ.

©KTBS Not to be republished

**ಇಲ್ಲಿರುವ ವಾಕ್ಯಗಳನ್ನು ಗಮನಿಸಿರಿ.**

೧. ಕರೀಮನು ಜಾರ್ಜ್‌ನನ್ನು ನೋಡಿದನು.

೨. ತಂದೆ ಹಣ್ಣುಗಳನ್ನು ತಂದರು.

೩. ಸುಹಾನ ಚಿತ್ರವನ್ನು ಬರೆದಳು.

೪. ಮಕ್ಕಳು ಪುಸ್ತಕಗಳನ್ನು ಜೋಡಿಸುತ್ತಿರುವರು.

ಈ ವಾಕ್ಯಗಳಲ್ಲಿ ನೋಡಿದನು, ತಂದರು, ಬರೆದನು, ಜೋಡಿಸುತ್ತಿರುವರು ಇವುಗಳು ಕ್ರಿಯೆಯನ್ನು ಸೂಚಿಸುವ ಪದಗಳಾದ್ದರಿಂದ ಕ್ರಿಯಾ ಪದಗಳು. ಈ ಕ್ರಿಯೆಯನ್ನು ಮಾಡುತ್ತಿರುವವರನ್ನು ಸೂಚಿಸುವ ಪದಗಳು ಅಂದರೆ ಹನುಮಂತ, ತಂದೆ, ಸುರೇಶ, ಮಕ್ಕಳು ಇವು ಕರ್ತೃ ಪದಗಳು. ಏನನ್ನು ಮಾಡುತ್ತಾರೆ ಎಂದು ಸೂಚಿಸುವ ಪದಗಳು ಅಂದರೆ ಜಾರ್ಜ್‌ನನ್ನು, ಹಣ್ಣುಗಳನ್ನು, ಚಿತ್ರವನ್ನು, ಪುಸ್ತಕಗಳನ್ನು ಇವು ಕರ್ಮ ಪದಗಳು.

### ತತ್ಸಮ – ತದ್ಭವ

**ಕೆಳಗಿನ ವಾಕ್ಯಗಳನ್ನು ನೋಡಿ, ಕೆಳಗೆ ಗೆರೆ ಎಳೆದ ಪದಗಳ ವಿಶೇಷತೆ ಗಮನಿಸಿರಿ.**

೧. <u>ಆಕಾಶದಲ್ಲಿ</u> ಬಣ್ಣಬಣ್ಣದ ಗಾಳಿಪಟಗಳು ಹಾರಾಡುತ್ತಿದ್ದವು.

<u>ಆಗಸದಲ್ಲಿ</u> ಬಣ್ಣಬಣ್ಣದ ಗಾಳಿಪಟಗಳು ಹಾರಾಡುತ್ತಿದ್ದವು.

೨. ಗೀತಾಳ <u>ಧ್ವನಿ</u> ತುಂಬಾ ಇಂಪಾಗಿದೆ.

ಗೀತಾಳ <u>ದನಿ</u> ತುಂಬಾ ಇಂಪಾಗಿದೆ.

ಮೊದಲನೆಯ ಉದಾಹರಣೆಯಲ್ಲಿ 'ಆಕಾಶ' ಎಂದು ಒಮ್ಮೆ, 'ಆಗಸ' ಎಂದು ಮತ್ತೊಮ್ಮೆ ಬಳಸಲಾಗಿದೆ. ಹಾಗೆಯೇ ಎರಡನೆಯ ಉದಾಹರಣೆಯಲ್ಲಿ 'ಧ್ವನಿ' ಎಂದು ಒಮ್ಮೆ, 'ದನಿ' ಎಂದು ಮತ್ತೊಮ್ಮೆ ಉಪಯೋಗಿಸಲಾಗಿದೆ. ಆಕಾಶ, ಧ್ವನಿ ಎಂಬ ಪದಗಳು ಸಂಸ್ಕೃತ ಮೂಲದವು. ಸಂಸ್ಕೃತದಲ್ಲಿ ಇರುವಂತೆಯೇ ಕನ್ನಡದಲ್ಲಿ ಬಳಸಿದರೆ ಅದನ್ನು ತತ್ಸಮ ಎಂದರೆ ಮೂಲ ಭಾಷೆಗೆ ಸಮ ಎಂದು ಗುರುತಿಸುತ್ತೇವೆ. ಆದರೆ ಎಲ್ಲ ಸಂದರ್ಭದಲ್ಲಿಯೂ ಹಾಗೆ ಮಾಡಲಾಗುವುದಿಲ್ಲ. ಆಗ ಕನ್ನಡದ ಜಾಯಮಾನಕ್ಕೆ ಹೊಂದುವಂತೆ ಅದನ್ನು ಮಾರ್ಪಾಡು ಮಾಡಿಕೊಂಡು ಉಪಯೋಗಿಸುತ್ತೇವೆ. ಆ ಪದವನ್ನು 'ತದ್ಭವ'– ಎಂದರೆ ಮೂಲ ಶಬ್ದದಿಂದ ಹುಟ್ಟಿದ್ದು ಎನ್ನುತ್ತೇವೆ. ಈ ಮೇಲಿನ ಉದಾಹರಣೆಯಲ್ಲಿ ಆಕಾಶ ಮತ್ತು ಧ್ವನಿ ತತ್ಸಮಗಳಾದರೆ, ಆಗಸ ಮತ್ತು ದನಿ ತದ್ಭವಗಳಾಗಿವೆ.

### ಭಾಗ 'ಆ'

**ಅ) ಕೆಳಗಿನ ಪದಗಳಲ್ಲಿ ತತ್ಸಮ–ತದ್ಭವಗಳನ್ನು ಗುರುತಿಸಿ ಬರೆಯಿರಿ.**

೧. ಶ್ರೀಮಂತ ೨. ಹರುಷ ೩. ಸಿರಿ ೪. ಬ್ರಹ್ಮ.

**ಆ) 'ಯಕ್ಷಪ್ರಶ್ನೆ' ಗದ್ಯಭಾಗದಲ್ಲಿ ಬಂದಿರುವ ತತ್ಸಮ, ತದ್ಭವಗಳನ್ನು ಪಟ್ಟಿ ಮಾಡಿರಿ.**

**ಕೋಪವನ್ನು ಸಹನೆಯಿಂದ ಗೆಲ್ಲಬೇಕು.**

* * * * *

©KTBS Not to be republished

# ೭. ನೀತಿ ಮಾತು

**– ಕನಕದಾಸ**

**ಪ್ರವೇಶ:** ದಾಸ ಸಾಹಿತ್ಯವು ಕನ್ನಡ ಸಾಹಿತ್ಯದ ತವನಿಧಿಯಂತೆ. ಹರಿದಾಸರ ಕೃತಿಗಳು ಕನ್ನಡ ಸಾಹಿತ್ಯದ ಆಸ್ತಿ. ಇವು ಗೇಯತೆಯಿಂದ ಕೂಡಿದ್ದು ನೀತಿ ಬೋಧಕಗಳಾಗಿವೆ. 'ಸಜ್ಜನರ ಸಂಗ ಹೆಜ್ಜೇನು ಸವಿದಂತೆ' ಎಂಬ ಮಾತನ್ನು ನಾವು ಕೇಳಿದ್ದೇವೆ. ಒಳ್ಳೆಯವರ ಸ್ನೇಹ ಮತ್ತು ಜ್ಞಾನಿಗಳ ಸಂಗ ಉತ್ತಮವಾದುದು. ವ್ಯಕ್ತಿ ಹೇಗೆ ಜೀವನ ನಡೆಸಬೇಕೆಂಬುದನ್ನು ಕನಕದಾಸರು ಇಲ್ಲಿ ಸರಳವಾಗಿ ಹೇಳಿದ್ದಾರೆ.

ಅಜ್ಞಾನಿಗಳ ಕೂಡೆ ಅಧಿಕ ಸ್ನೇಹಕ್ಕಿಂತ
ಸುಜ್ಞಾನಿಗಳ ಕೂಡ ಜಗಳವೇ ಲೇಸು ॥ ಪ ॥

ಉಂಬುಡುವುದಕ್ಕಿಲ್ಲದ ಅರಸನೋಲಗಕ್ಕಿಂತ
ತುಂಬಿದೂರೊಳಗೆ ತಿರಿದುಂಬುವುದೇ ಲೇಸು
ಹಂಬಲಿಸಿ ಹಾಳ್ಹರಟೆ ಹೊಡೆಯುವುದಕ್ಕಿಂತ ಹರಿ
ಯೆಂಬ ದಾಸರ ಕೂಡೆ ಸಂಭಾಷಣೆಯೆ ಲೇಸು॥

ಒಡನೆ ಹಂಗಿಸುವನೋಗರವನುಂಬುವುದಕ್ಕಿಂತ
ಕುಡಿನೀರು ಕುಡಿದುಕೊಂಡಿರುವುದೇ ಲೇಸು
ಬಿಡದೆ ಬಾಂಧವರೊಡನೆ ಕಡಿದಾಡುವುದಕ್ಕಿಂತ
ಅಡವಿಯೊಳಗಜ್ಞಾತ ವಾಸವೇ ಲೇಸು॥

ಮಸೆಯುತಿಹ ಮತ್ಸರದ ನೆರೆಯೊಳಗಿರುವುದಕ್ಕಿಂತ
ಹಸನಿಲ್ಲದ ಹಾಳುಗುಡಿಯೆ ಲೇಸು
ಬಿಸಜಾಕ್ಷ ಕಾಗಿನೆಲೆಯಾದಿ ಕೇಶವರಾಯ
ವಸುಮತಿಯೊಳು ನಿನ್ನ ದಾಸತ್ವವೇ ಲೇಸು॥

## ಕೃತಿಕಾರರ ಪರಿಚಯ



ಹಾವೇರಿ ಜಿಲ್ಲೆಯ ಬಂಕಾಪುರದ ಹತ್ತಿರದಲ್ಲಿರುವ ಬಾಡ ಗ್ರಾಮದಲ್ಲಿ ಕನಕದಾಸರು ಜನಿಸಿದರು. ಇವರ ಕಾಲ ಸುಮಾರು ೧೫–೧೬ನೇ ಶತಮಾನ. ಆರಂಭದಲ್ಲಿ ದಂಡನಾಯಕರಾಗಿದ್ದ ಇವರು ಜೀವನದಲ್ಲಿ ವೈರಾಗ್ಯ ಬಂದು ಎಲ್ಲವನ್ನೂ ಬಿಟ್ಟು ವ್ಯಾಸರಾಯರ ಶಿಷ್ಯರಾದರು. ಕನಕದಾಸರು ಪುರಂದರದಾಸರ ಸಮಕಾಲೀನರು. ಅನೇಕ ಕೀರ್ತನೆಗಳನ್ನು ರಚಿಸಿದ್ದಾರೆ. 'ರಾಮಧಾನ್ಯಚರಿತೆ', 'ನಳಚರಿತ್ರೆ', 'ಮೋಹನ ತರಂಗಿಣಿ', 'ಹರಿಭಕ್ತಿಸಾರ' ಮೊದಲಾದ ಕಾವ್ಯಗಳನ್ನು ಬರೆದಿದ್ದಾರೆ. ಇವರ ಅಂಕಿತನಾಮ ಕಾಗಿನೆಲೆ ಆದಿಕೇಶವ. ಕನಕದಾಸರು ಮತ್ತು ಪುರಂದರದಾಸರನ್ನು ಕರ್ನಾಟಕ ಕೀರ್ತನ ಸಾಹಿತ್ಯದ ಅಶ್ವಿನಿ ದೇವತೆಗಳೆಂದು ಬಣ್ಣಿಸಲಾಗಿದೆ.

©KTBS Not to be republished

## ಪದಗಳ ಅರ್ಥ

ಅಜ್ಞಾತವಾಸ–ಬೇರೆಯವರಿಗೆ ಗೊತ್ತಾಗದಂತೆ ರಹಸ್ಯವಾಗಿ ವಾಸವಾಗಿರುವುದು.
ಅಜ್ಞಾನಿ–ಜ್ಞಾನವಿಲ್ಲದವ, ತಿಳುವಳಿಕೆ ಇಲ್ಲದವ, ದಡ್ಡ;
ಅಡವಿ–ಅರಣ್ಯ, ಕಾಡು;
ಅಧಿಕ–ಹೆಚ್ಚು;
ಅರಸ–ರಾಜ;
ಉಂಬು–ಊಟ ಮಾಡು;
ಓಗರ–ಅನ್ನ;
ಓಲಗ–ಸಭೆ;
ಕಡಿದಾಡು–ಜಗಳವಾಡು;
ಗುಡಿ–ದೇವಸ್ಥಾನ;
ತಿರಿದು–ಭಿಕ್ಷೆ ಬೇಡಿ;
ದಾಸತ್ವ–ಸೇವಕತನ;
ನೆರೆ–ಪಕ್ಕದಲ್ಲಿರುವ;
ಬಿಸಜಾಕ್ಷ–ವಿಷ್ಣು (ಬಿಸಜ–ಕಮಲ, ಅಕ್ಷ–ಕಣ್ಣು, ಕಮಲದಂತೆ ಕಣ್ಣುಳ್ಳವನು ಯಾವನೋ ಅವನೇ);
ಮತ್ಸರ–ಹೊಟ್ಟೆಕಿಚ್ಚು, ದ್ವೇಷ;
ಮಸೆಯುವುದು–ದ್ವೇಷ ಸಾಧಿಸುವುದು;
ಲೇಸು–ಒಳ್ಳೆಯದು;
ವಸುಮತಿ–ಭೂಮಿ;
ಸುಜ್ಞಾನಿ–ಉತ್ತಮ ಜ್ಞಾನಿ, ತಿಳಿದವ;
ಹಂಬಲಿಸಿ–ಆಸೆಪಟ್ಟು;
ಹಸನಿಲ್ಲದ–ಅನುಕೂಲವಿಲ್ಲದ;
ಹಾಳರಟೆ–ಕೆಲಸಕ್ಕೆ ಬಾರದ ಮಾತುಗಳನ್ನು ಆಡುತ್ತಾ ಇರುವುದು.

## ಅಭ್ಯಾಸ

**ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. 'ನೀತಿ ಮಾತು' ಪದ್ಯದಲ್ಲಿ ಹೇಳಿರುವಂತೆ ಯಾರೊಡನೆ ಮಾಡುವ ಸ್ನೇಹ ಒಳ್ಳೆಯದಲ್ಲ?
೨. ಅರಸನೋಲಗಕ್ಕಿಂತ ಉತ್ತಮವಾದುದು ಯಾವುದೆಂದು ಕನಕದಾಸರು ಹೇಳಿದ್ದಾರೆ?
೩. ಕನಕದಾಸರು ಹೇಳಿರುವಂತೆ ಹಾಳು ಹರಟೆಗಿಂತಲೂ ಮೇಲಾದುದು ಯಾವುದು?
೪. ಮತ್ಸರದ ನೆರೆಗಿಂತ ಎಲ್ಲಿದ್ದರೆ ಒಳ್ಳೆಯದು ಎಂದು 'ನೀತಿ ಮಾತು' ಪದ್ಯದಲ್ಲಿ ಹೇಳಿದೆ?

**ಆ) ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಐದು–ಆರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

೧. ಹಂಗಿಸುವ ಮತ್ತು ಕಡಿದಾಡುವ ಬಾಂಧವರ ಬಗೆಗೆ ಕನಕದಾಸರ ಅಭಿಪ್ರಾಯವೇನು?
೨. ಬಿಸಜಾಕ್ಷನ ದಾಸತ್ವವನ್ನು ದಾಸರು ಏಕೆ ಬಯಸಿದ್ದಾರೆ?

©KTBS Not to be republished

**ಇ) ಕೆಳಗಿನ ನುಡಿಗಳ ಸಂದರ್ಭವನ್ನು ಸ್ವಾರಸ್ಯ ಸಹಿತ ವಿವರಿಸಿರಿ.**

೧. "ಹರಿಯೆಂಬ ದಾಸರ ಕೂಡೆ ಸಂಭಾಷಣೆಯೆ ಲೇಸು"

೨. "ಕುಡಿನೀರು ಕುಡಿದುಕೊಂಡಿರುವುದೇ ಲೇಸು"

**ಈ) ಕೆಳಗಿನ ಖಾಲಿ ಇರುವ ಸ್ಥಳಗಳನ್ನು ಪದ್ಯಭಾಗವನ್ನಾಧರಿಸಿ ಸೂಕ್ತ ಪದಗಳಿಂದ ಭರ್ತಿ ಮಾಡಿ.**

೧. ತುಂಬಿದೂರೊಳಗೆ ಲೇಸಾಗಿರುವುದು __________.

೨. ಹರಿ ಎಂಬ ದಾಸರ ಕೂಡೆ ಲೇಸಾಗಿರುವುದು____________

೩. ಒಡನೆ ಹಂಗಿಸುವನೋಗರವನುಂಬುವುದಕ್ಕಿಂತ__________ಕುಡಿದುಕೊಂಡಿರುವುದೇ ಲೇಸು.

೪. ವಸುಮತಿಯೊಳು ಲೇಸಾಗಿರುವುದು____________

## ಭಾಷಾಭ್ಯಾಸ

**ಅ) ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.**

ಸ್ನೇಹ, ಅರಸ, ನೀರು, ವಸುಮತಿ.

**ಆ) ಮೊದಲೆರಡು ಪದಗಳಿರುವ ಸಂಬಂಧವನ್ನು ಗಮನಿಸಿ, ಮೂರನೆಯ ಪದಕ್ಕೆ ಸೂಕ್ತಪದವನ್ನು ಬರೆಯಿರಿ.**

೧. ಜ್ಞಾನ : ಅಜ್ಞಾನ :: ನ್ಯಾಯ : ______

೨. ಬಿಸಜಾಕ್ಷ : ವಿಷ್ಣು :: ಹಣೆಗಣ್ಣ : ______

೩. ಹಣ ಇರುವವ : ಹಣವಂತ :: ಬುದ್ಧಿ ಇರುವವ : _________

೪. ಗೆಳೆಯ : ಗೆಳೆತನ :: ಹಗೆ : _________

## ಭಾಷಾ ಚಟುವಟಿಕೆ

ಅ) ಕನಕದಾಸರ 'ನೀತಿಮಾತು' ಕೀರ್ತನೆಯನ್ನು ಕಂಠಪಾಠ ಮಾಡಿ.

ಆ) 'ದುಷ್ಟರ ಕಂಡರೆ ದೂರವಿರು' – ಈ ಮಾತಿನ ಭಾವವನ್ನು ನಾಲ್ಕೈದು ವಾಕ್ಯಗಳಲ್ಲಿ ವಿಸ್ತರಿಸಿ ಬರೆಯಿರಿ.

ಇ) ಹಾಳು ಹರಟೆಯಿಂದ ಆಗುವ ತೊಂದರೆಗಳ ಬಗೆಗೆ ನಿಮ್ಮ ಅಭಿಪ್ರಾಯಗಳನ್ನು ತರಗತಿಯಲ್ಲಿ ಹಂಚಿಕೊಳ್ಳಿ.

© KTBS Not to be republished

ಈ) ಸರ್ವಜ್ಞನ ಕೆಳಗಿನ ವಚನವನ್ನು ಅರ್ಥಮಾಡಿಕೊಂಡು ಗಟ್ಟಿಯಾಗಿ ಹೇಳಿ.

ಸಜ್ಜನರ ಸಂಗವದು ಹೆಜ್ಜೇನು ಸವಿದಂತೆ
ದುರ್ಜನರ ಸಂಗದೊಡನಾಟ । ಬಚ್ಚಲಿನ
ರೊಚ್ಚಿನಂತಿಹುದು । ಸರ್ವಜ್ಞ॥

## ವ್ಯಾಕರಣ–ಭಾಗ 'ಅ'

**ವಿಭಕ್ತಿ ಪ್ರತ್ಯಯಗಳು**

೧. ನೀನು ಮನೆಯಿಂದ ಯಾವಾಗ ಹೊರಟೆ?

೨. ನಾನು ನಿಮ್ಮ ಮನೆಗೆ ಬರುತ್ತೇನೆ.

೩. ಅರೆ! ಅವರ ಮನೆಯ ಬಾಗಿಲಿಗೆ ಬೀಗ ಹಾಕಿದೆ.

೪. ರಜನಿಯ ಮನೆಯಲ್ಲಿ ಹಬ್ಬದ ಸಂಭ್ರಮ.

ಮೇಲಿನ ವಾಕ್ಯಗಳಲ್ಲಿ ಬಂದಿರುವ ಮನೆಯಿಂದ, ಮನೆಗೆ, ಮನೆಯ, ಮನೆಯಲ್ಲಿ ಎಂಬ ಪದಗಳಲ್ಲಿ 'ಮನೆ' ಎಂಬುದು ಎಲ್ಲದರಲ್ಲೂ ಇದೆ. 'ಮನೆ'– ಎಂಬುದಕ್ಕೆ ಸ್ವತಂತ್ರವಾದ ಅರ್ಥವಿದೆ. ಇದನ್ನು ಪ್ರಕೃತಿ ಎನ್ನುವರು. ಸ್ವತಂತ್ರವಾದ ಅರ್ಥವಿಲ್ಲದೆ ಪ್ರಕೃತಿಗಳ ಮುಂದೆ ಸೇರಿ ಬೇರೆ ಬೇರೆ ಅರ್ಥವನ್ನುಂಟು ಮಾಡುವ ಉ, ಅನ್ನು, ಇಂದ, ಗೆ, ಕ್ಕೆ, ದೆಸೆಯಿಂದ, ಅ, ಅಲ್ಲಿ, ಏ, ಇರಾ, ಈ, ಆ– ಇತ್ಯಾದಿಗಳಿಗೆ ವಿಭಕ್ತಿ ಪ್ರತ್ಯಯಗಳೆಂದು ಕರೆಯುತ್ತಾರೆ. ವಿಭಕ್ತಿ ಪ್ರತ್ಯಯಗಳು ಕೊಡುವ ಅರ್ಥವೇ ಕಾರಕಾರ್ಥ.

**'ದಾಸರು' ಪದಕ್ಕೆ ವಿಭಕ್ತಿ ಪ್ರತ್ಯಯಗಳನ್ನು ಸೇರಿಸಿದ ಕೆಳಗಿನ ಉದಾಹರಣೆ ಗಮನಿಸಿರಿ.**

| ವಿಭಕ್ತಿ | ಪ್ರತ್ಯಯ | ಉದಾಹರಣೆ |
|---|---|---|
| ಪ್ರಥಮಾ | ಉ | ದಾಸರು |
| ದ್ವಿತೀಯಾ | ಅನ್ನು | ದಾಸರನ್ನು |
| ತೃತೀಯಾ | ಇಂದ | ದಾಸರಿಂದ |
| ಚತುರ್ಥೀ | ಗೆ, ಇಗೆ, ಕೆ. ಅಕ್ಕೆ | ದಾಸರಿಗೆ |
| ಪಂಚಮೀ | ಇಂದ ( ದೆಸೆಯಿಂದ ) | ದಾಸರ ದೆಸೆಯಿಂದ |
| ಷಷ್ಠೀ | ಅ | ದಾಸರ |
| ಸಪ್ತಮೀ | ಅಲ್ಲಿ | ದಾಸರಲ್ಲಿ |

## ಭಾಗ 'ಆ'

**ಅ) ಕೆಳಗಿನ ಪ್ರಕೃತಿಗಳಿಗೆ ವಿಭಕ್ತಿ ಪ್ರತ್ಯಯಗಳನ್ನು ಸೇರಿಸಿ ಬರೆಯಿರಿ.**

ಅಜ್ಞಾನಿ , ಅಡವಿ.

**ಆ) ನಿಮ್ಮ ನಿಮ್ಮ ಹೆಸರುಗಳಿಗೆ ವಿಭಕ್ತಿ ಪ್ರತ್ಯಯಗಳನ್ನು ಸೇರಿಸಿ ಬರೆಯಿರಿ.**

**ಸಗಣಿಯವನೊಡನೆ ಸರಸಕ್ಕಿಂತ ಗಂಧದವನೊಡನೆ ಗುದ್ದಾಟವೇ ಲೇಸು**

* * * * *

©KTBS Not to be republished

# ೮. ನಾನು ಕನ್ನಡ ಕವಿಯಾದೆ

**– ಕುವೆಂಪು**

**ಪ್ರವೇಶ:** ವ್ಯಕ್ತಿಯ ಜೀವನದಲ್ಲಿ ನಡೆಯುವ ಸಾಮಾನ್ಯವೆಂದು ತೋರುವ ಒಂದು ಘಟನೆ, ನಂತರ ಅತ್ಯಂತ ಪರಿಣಾಮವನ್ನು ಬೀರಬಹುದು. ಈ ಪರಿಣಾಮ ಕೇವಲ ಆ ವ್ಯಕ್ತಿಯ ಜೀವನದ ಮೇಲೆ ಮಾತ್ರವಲ್ಲ, ಇಡೀ ನಾಡಿನ ಜೀವನದ ಮೇಲೆ ಬೀರಬಹುದು.



೧೯೨೪ನೆ ಜುಲೈ ೨ನೇ ತಾರೀಖು ಬುಧವಾರದ ದಿನ ನನ್ನ ಜೀವನದಲ್ಲಿ – ವಿಶೇಷವಾಗಿ ಸಾಹಿತ್ಯ ಸಂಬಂಧವಾದ ಜೀವನದಲ್ಲಿ – ಒಂದು ಸ್ಮರಣೀಯವಾದ ದಿನ. ಮಹಾರಾಜ ಹೈಸ್ಕೂಲಿನ ಇತಿಹಾಸದ ಅಧ್ಯಾಪಕರಾಗಿದ್ದ ಎಂ. ಎಚ್. ಕೃಷ್ಣ ಅಯ್ಯಂಗಾರ್ಯರನ್ನು ಅವರ ಆಹ್ವಾನದ ಮೇರೆಗೆ ಹೋಗಿ ಕಂಡೆ. ಅನೇಕ ಪ್ರೋತ್ಸಾಹದ ಮಾತುಕತೆ ನಡೆದ ಮೇಲೆ, ಅವರು ವಿಶ್ವವಿದ್ಯಾನಿಲಯದಲ್ಲಿ ವಿಶೇಷ ಉಪನ್ಯಾಸಗಳನ್ನು ಕೊಡಲು ಬಂದಿದ್ದ ಐರಿಷ್ ಕವಿ ಜೇಮ್ಸ್ ಎಚ್. ಕಸಿನ್ಸ್ ಅವರ ವಿಚಾರ ತಿಳಿಸಿ, ಅವರನ್ನು ಕಂಡು ಅವರಿಗೆ ನನ್ನ ಕವನಗಳನ್ನು ತೋರುವಂತೆ ಹೇಳಿದರು.

ಶ್ರೀಯುತ ಕಸಿನ್ಸ್ ಅವರು ಇಳಿದುಕೊಂಡಿದ್ದ ಗೌರ್ನಮೆಂಟ್ ಗೆಸ್ಟ್ ಹೌಸ್‌ಗೆ ಹೋದೆವು ನಾನೂ ನನ್ನೊಬ್ಬ ಸ್ನೇಹಿತರು. ಸ್ಥಳ ಏಕಾಂತವಾಗಿತ್ತು. ಉದ್ಯಾನ ಸೌಂದರ್ಯದ ಮಧ್ಯೆ ಗ್ರಾಮೀಣ ಮನಸ್ಸಿಗೆ ಗಾಬರಿ ಹುಟ್ಟಿಸುವ ಮಟ್ಟಿಗೆ ಭವ್ಯವಾಗಿತ್ತು ಆ ಕಟ್ಟಡ, ಅದರ ಶಿಸ್ತು. ಒಬ್ಬ ಅನುಚರ ನೌಕರ ಬಂದು ನಮ್ಮನ್ನು ಹೊರಗೆ ಇದ್ದ ಸೋಫಾದ ಮೇಲೆ ಕೂರಿಸಿ ನನ್ನ ಹೆಸರು ಬರೆದುಕೊಟ್ಟ ಚೀಟಿಯನ್ನು ತೆಗೆದುಕೊಂಡು ಒಳಗೆ ಹೋದನು. ಬಹಳ ಹೊತ್ತು ಅವನು ಹೊರಗೆ ಬರಲಿಲ್ಲ. ನಾವಿಬ್ಬರೂ ಸಣ್ಣ ದನಿಯಲ್ಲಿ ಮಾತಾಡಿಕೊಳ್ಳುತ್ತಾ ಕಾದೆವು.

ಬಹಳ ಹೊತ್ತಿನ ಮೇಲೆ ಅನುಚರ ಬಂದು ನನ್ನನ್ನು ಒಳಗೆ ಕರೆದೊಯ್ದು ಕಸಿನ್ಸ್ ಅವರು ಕುಳಿತಿದ್ದ ಸ್ಥಳ ನಿರ್ದೇಶನ ಮಾಡಿ ಹೊರಗೆ ಹೋದ. ನಾನು ಮುಂಬಂದು ಕಸಿನ್ಸ್ ಅವರ ಸಮೀಪದಲ್ಲಿಯೇ ಮತ್ತೊಂದು ಸೋಫಾದ ಮೇಲೆ ಕುಳಿತೆ. ನಮಸ್ಕಾರಾದಿಗಳ ಅನಂತರ, ನಾನು ಏತಕ್ಕೆ ಬಂದೆ, ಯಾರ ಸಲಹೆಯ ಮೇರೆಗೆ ಎಂಬುದನ್ನು ಹೇಳಿ ನನ್ನ ಕೈಲಿದ್ದ ಹಸ್ತಪ್ರತಿಯನ್ನು ಅವರಿಗೆ ಕೊಟ್ಟೆ. ಅವರು ಸ್ವಲ್ಪ ಹೊತ್ತು ಹಾಳೆಗಳನ್ನು

©KTBS Not to be republished

ಮಗುಚಿ ಮಗುಚಿ ನೋಡಿದರು. ಮತ್ತೆ ತಲೆಯೆತ್ತಿ ನನ್ನನ್ನು ಆಪಾದಮಸ್ತಕ ನೋಡಿದರು. ನಾನು ಸ್ವದೇಶೀ ಚಳುವಳಿಯಲ್ಲಿ ಅಂಗಿ ಟೋಪಿಗಳನ್ನು ಬೆಂಕಿಗೆ ಎಸೆದಂದಿ ನಿಂದ ಖಾದಿ ಬಟ್ಟೆಯನ್ನೇ ಉಪಯೋಗಿಸುತ್ತಿದ್ದೆ; ಖಾದಿ ಟೋಪಿ, ಖಾದಿ ಷರಟು, ಖಾದಿ ಪಂಚೆ.

ಕಸಿನ್ಸ್ ಸ್ವಲ್ಪ ಅಸಮಾಧಾನದ ಧ್ವನಿಯಿಂದಲೇ ಮಾತಾಡಿದರು. “ಏನಿದೆಲ್ಲ ಕಗ್ಗ? ನಿಮ್ಮ ಮೈಮೇಲೆ ನೋಡಿದರೆ ತಲೆಯಿಂದ ಕಾಲಿನವರೆಗೂ ಸ್ವದೇಶೀ ವಸ್ತ್ರಗಳೇ ಕಾಣುತ್ತವೆ. ಇದು ಮಾತ್ರ ಸ್ವದೇಶಿಯಲ್ಲ. ನಿಮ್ಮ ಭಾಷೆಯಲ್ಲಿ ಏನಾದರೂ ಬರೆದಿದ್ದೀರಾ?”

ಅವರ ಧ್ವನಿಗೂ ಭಂಗಿಗೂ ನನಗಾಗಲೇ ಮುನಿಸು ಬರತೊಡಗಿತ್ತು. ನನ್ನ ಇಂಗ್ಲಿಷ್ ಕವನಗಳನ್ನು ನೋಡಿ ಇತರ ನನ್ನ ಭಾರತೀಯ ಮಿತ್ರರು, ಅಧ್ಯಾಪಕರೂ ಶ್ಲಾಘಿಸಿದ್ದಂತೆ ಅವರೂ ಅವುಗಳನ್ನು ಮೆಚ್ಚಿ ಹೊಗಳುತ್ತಾರೆ ಎಂದು ಆಸೆಪಟ್ಟಿದ್ದ ನನಗೆ ತುಂಬಾ ತೇಜೋವಧೆಯಾದಂತಾಗಿ, ನಿರಾಶೆಯಾಯಿತು. ನಾನು ಕನ್ನಡದಲ್ಲಿ ಆಗಲೆ ‘ಅಮಲನ ಕಥೆ’ಯನ್ನೂ ಮತ್ತೂ ಇತರ ಒಂದೆರಡು ಕವನ ಬರೆಯುವ ಪ್ರಯತ್ನವನ್ನೂ ಮಾಡಿದ್ದೆನಾದರೂ ಅವರ ಪ್ರಶ್ನೆಗೆ ಮಲೆತವನಂತೆ ಉತ್ತರಿಸಿದೆ– “ಇಲ್ಲ, ಕನ್ನಡದಲ್ಲಿ ಇಂಗ್ಲಿಷಿನಲ್ಲಿ ಸಾಧ್ಯವಾಗುವಂತೆ, ಉದಾತ್ತ ಭಾವಗಳನ್ನು, ಉನ್ನತ ಆಲೋಚನೆಗಳನ್ನು ಹೇಳಲು ಸಾಧ್ಯವಾಗುವುದಿಲ್ಲ. ಆ ಭಾಷೆಯ ಮಟ್ಟ ಬಹಳ ಕೀಳು. ಅಲ್ಲದೆ ಅದರಲ್ಲಿರುವ ಛಂದಸ್ಸೂ ಹಳೆಯ ಕಂದಾಚಾರದ ಛಂದಸ್ಸು, ವೃತ್ತ, ಕಂದ ಇತ್ಯಾದಿ. ಇಂಗ್ಲಿಷಿನಲ್ಲಿರುವ ಛಂದೋವೈವಿಧ್ಯ ಇಲ್ಲವೇ ಇಲ್ಲ.” ಈಗ ನನಗೆ ಅತ್ಯಂತ ಅವಿವೇಕವಾಗಿಯೂ, ಹಾಸ್ಯಾಸ್ಪದವಾಗಿಯೂ, ಧೂರ್ತವಾಗಿಯೂ ತೋರುವ ನನ್ನ ಆ ಉತ್ತರವನ್ನು ಆಲಿಸಿ ಪರಿಣತ ಮನಸ್ಸಿನವರೂ, ಅನುಭವಶಾಲಿಗಳೂ ಆಗಿದ್ದ ಅವರು ಸೌಮ್ಯ– ಸಾಂತ್ವನಕರ ಧ್ವನಿಯಿಂದ ಹೇಳಿದರು.– “ಹಾಗಲ್ಲ, ಯಾವ ಭಾಷೆಯೂ ತನಗೆ ತಾನೇ ಅಸಮರ್ಥವಲ್ಲ. ಸಮರ್ಥನೊಬ್ಬನು ಬರುವ ತನಕ ಮಾತ್ರ ಅದು ಅಸಮರ್ಥವೆಂಬಂತೆ ತೋರಬಹುದು. ಸಮರ್ಥನು ಬಂದೊಡನೆ ಅವನ ಕೈಯಲ್ಲಿ ಅದು ಎಂತಹ ಅದ್ಭುತವನ್ನಾದರೂ ಸಾಧಿಸಬಲ್ಲುದು. ಈಗ ನೋಡಿ, ಬಂಗಾಳಿ ಭಾಷೆ– ನೀವು ನಿಮ್ಮ ಭಾಷೆಯನ್ನು ಕುರಿತು ಹೇಳಿದಂತೆಯೇ ಅದೂ ಇತ್ತು. ರವೀಂದ್ರನಾಥ ಠಾಕೂರರು ಬಂದರು. ಹೊಸ ಹೊಸ ರೀತಿಯಲ್ಲಿ ಬರೆದರು. ಹೊಸ ಛಂದಸ್ಸುಗಳನ್ನು ಕಂಡುಹಿಡಿದರು. ಅವರಿಗೆ ನೋಬಲ್ ಬಹುಮಾನವೂ ಬಂದಿತು! ಹಾಗೆಯೆ ನೀವು ಹೊಸ ಹೊಸ ಛಂದಸ್ಸುಗಳನ್ನು ಕಂಡುಹಿಡಿದು ಹೊಸ ಹೊಸ ಪದಗಳನ್ನು, ಪದಪ್ರಯೋಗಗಳನ್ನು ಸಾಧಿಸಿ, ಹೊಸ ರೀತಿಯ ಸಾಹಿತ್ಯ ಸೃಷ್ಟಿ ಮಾಡಬೇಕು. ನೀವು ಸೃಷ್ಟಿಸುವ ಸಾಹಿತ್ಯ ಶ್ರೇಷ್ಠವೆಂದು ತೋರಿಬಂದರೆ ನಾವು ಅದನ್ನು ಇಂಗ್ಲಿಷಿಗೆ ಭಾಷಾಂತರಿಸಿಕೊಳ್ಳುತ್ತೇವೆ. ರವೀಂದ್ರರ ಸಾಹಿತ್ಯ ಇಂಗ್ಲಿಷಿಗೆ ಭಾಷಾಂತರವಾಗಿರುವಂತೆ. ನೀವು ಇಂಗ್ಲಿಷಿನಲ್ಲಿ ಸೃಜನ ಸಾಹಿತ್ಯ ಸೃಷ್ಟಿ ಮಾಡಲಾರಿರಿ. ಅದು ನಿಮಗೆ ಪರಭಾಷೆ, ಹುಟ್ಟಿನೊಡನೆ ಬಂದ ಭಾಷೆಯಲ್ಲಿ ಮಾತ್ರ ಉತ್ತಮ ಸೃಜನಶೀಲ ಸಾಹಿತ್ಯ ಸೃಷ್ಟಿಯಾಗಬಲ್ಲದು. ಅದರಲ್ಲಿಯೂ ಕವಿತೆಯಲ್ಲಂತೂ, ಉತ್ತಮ ಸೃಜನ ಸಾಹಿತ್ಯ ಯಾರಿಗೂ ಪರಭಾಷೆಯಲ್ಲಿ ಸಾಧ್ಯವಲ್ಲ. ಅದು ನಿಮಗೆ ಗೊತ್ತಾಗುವುದೂ ಇಲ್ಲ, ಅದನ್ನು ಓದುವ ನಮಗೆ ಗೊತ್ತಾಗುತ್ತದೆ. ಅದೆಂತಹ ನಗೆಪಾಟಲ ಸೃಷ್ಟಿ ಎಂಬುದು.

ಇನ್ನೂ ಕೆಲವು ವಿವೇಕದ ಮಾತುಗಳನ್ನಾಡಿ ಹಸ್ತಪ್ರತಿಯನ್ನು ನನಗೆ ವಾಪಸ್ಸು ಕೊಟ್ಟು ಬೀಳ್ಕೊಂಡರು. ನಾನು ಖಿನ್ನನಾಗಿ ಅತೃಪ್ತ ಮತ್ತು ಕುಪಿತಚಿತ್ತ ಭಂಗಿಯಲ್ಲಿ ಹೊರಗೆ ಬಂದೆ.


ಹೊರಗಡೆ ಕುಳಿತಿದ್ದ ಮಿತ್ರರಿಗೆ, ನನಗಾದ ತೇಜೋವಧೆಯೆಂದು ನಾನು ತಿಳಿದುಕೊಂಡಿದ್ದ ಸಂಗತಿಯನ್ನು ಹೊರಗೆಡಹದೆ ಮುಚ್ಚಿಕೊಂಡೆ. ಕಸಿನ್ಸ್ ಅವರು ಸ್ವದೇಶಿ ಚಳುವಳಿಗಾರರಾಗಿರುವುದರಿಂದ ನನ್ನ ಸ್ವದೇಶಿ ಭಾಷೆಯಾದ ಕನ್ನಡದಲ್ಲಿಯೇ ನಾನು ಬರೆದರೆ ಉತ್ತಮ ಮತ್ತು ದೇಶಭಕ್ತಿದ್ಯೋತಕ ಎಂದು ಬೋಧಿಸಿದರೆಂದು ವ್ಯಂಗ್ಯವಾಗಿ ಟೀಕಿಸಿದೆ.

©KTBS Not to be republished

ಆದರೆ ಕಸಿನ್ಸ್ ಅವರ ಹಿತವಚನ ಮೇಲೆ ಮೇಲಕ್ಕೆ ತಿರಸ್ಕೃತವಾದರೂ ಸುದೈವದಿಂದ ನನ್ನ ಅಂತಃಪ್ರಜ್ಞೆ ಅದನ್ನು ಒಪ್ಪಿಕೊಂಡಿತ್ತೆಂದು ತೋರುತ್ತದೆ. ಕನ್ನಡದ ವಾಗ್ದೇವಿಯ ಕೃಪೆಯೂ ಆ ಸುಸಂಧಿಯನ್ನು ಉಪಯೋಗಿಸಿಕೊಂಡು ತನ್ನ ಕಂದನನ್ನು ತನ್ನ ಹಾಲೆದೆಗೆ ಎಳೆದುಕೊಂಡಳು!

ಹಿಂತಿರುಗಿ ಬರುವಾಗಲೆ ದಾರಿಯಲ್ಲಿ ಏನೋ ಒಂದು ಕನ್ನಡ ಕವಿತೆಯನ್ನು ರಚಿಸುತ್ತಾ ಗುನುಗುತ್ತಾ ಬಂದೆ. ನನ್ನ ಸಹವಾಸಿ ಮಿತ್ರರೊಬ್ಬರು ಅದನ್ನು ರಾಗವಾಗಿ ಹಾಡಿದಾಗ ನನಗೆ ಉಂಟಾದ ಹಿಗ್ಗನ್ನು ಏನೆಂದು ಹೇಳಲಿ? ಅವರ ರಾಗದ ಮಾಧುರ್ಯವನ್ನು ನನ್ನ ಕವಿತಾ ಸಾಮರ್ಥ್ಯಕ್ಕೆ ಅಧ್ಯಾರೋಪ ಮಾಡಿ ನನ್ನ ಬೆನ್ನನ್ನು ನಾನೇ ತಟ್ಟಿಕೊಂಡೆ. ಅಂದಿನಿಂದ ಕನ್ನಡದಲ್ಲಿ ರಚಿಸುವ ಮನಸ್ಸು ಮಾಡಿದೆ. ಆದರೆ ಇಂಗ್ಲಿಷ್ ಕವನ ರಚನೆಯನ್ನು ಬಿಡಲಿಲ್ಲ. ಎರಡೂ ಭಾಷೆಯಲ್ಲಿ ಸವ್ಯಸಾಚಿಯಾಗುತ್ತೇನೆಂದು ಭಾವಿಸಿದೆ. ಆದರೆ ಕ್ರಮೇಣ ೧೯೨೭–೨೮ರ ಹೊತ್ತಿಗೆ ಇಂಗ್ಲಿಷ್ ರಚನೆ ಸಂಪೂರ್ಣವಾಗಿ ನಿಂತುದನ್ನು ನನ್ನ ದಿನಚರಿ ಹೇಳುತ್ತದೆ. ಅಂದರೆ ಮೊದಲನೆ ವರ್ಷದ ಬಿ.ಎ. ತರಗತಿಯಲ್ಲಿ ಸ್ವಲ್ಪ ಸ್ವಲ್ಪವಾಗಿಯೂ, ಎರಡನೆಯ ವರ್ಷದ ಬಿ.ಎ.ತರಗತಿಯಲ್ಲಿ ಅತ್ಯಲ್ಪವಾಗಿಯೂ ನನ್ನ ಇಂಗ್ಲಿಷ್ ಕವನ ರಚನೆ ಮುಂದುವರಿದಿದೆ. ಕನ್ನಡದ ರುಚಿ ಮತ್ತು ಅಭಿರುಚಿ ಹೆಚ್ಚಾದಂತೆಲ್ಲಾ ಇಂಗ್ಲಿಷ್ ತಿರೋಹಿತವಾಗಿದೆ.

## ಕೃತಿಕಾರರ ಪರಿಚಯ



೨೯ ಡಿಸೆಂಬರ್ ೧೯೦೪ರಲ್ಲಿ ಹುಟ್ಟಿದ ಕುವೆಂಪು ಅವರು ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳಿಯವರು. ಶ್ರೀಯುತರು ಮೈಸೂರು ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ, ಪ್ರಿನ್ಸಿಪಾಲರಾಗಿ ಹಾಗೂ ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ ಸೇವೆ ಸಲ್ಲಿಸಿದ್ದಾರೆ.

'ಬೊಮ್ಮನಹಳ್ಳಿಯ ಕಿಂದರಿಜೋಗಿ', 'ಪಕ್ಷಿಕಾಶಿ', 'ಮಲೆಗಳಲ್ಲಿ ಮದುಮಗಳು', 'ಕಾನೂರು ಹೆಗ್ಗಡಿತಿ', 'ಬೆರಳ್‌ಗೆ ಕೊರಳ್', 'ಜಲಗಾರ', 'ಶೂದ್ರ ತಪಸ್ವಿ', 'ನೆನಪಿನ ದೋಣಿಯಲ್ಲಿ', 'ಅಮಲನ ಕಥೆ', 'ಶ್ರೀರಾಮಾಯಣ ದರ್ಶನಂ' ಇವು ಇವರ ಮುಖ್ಯ ಕೃತಿಗಳು. ಕುವೆಂಪು ಮಹಾಕಾವ್ಯದವರೆಗೆ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿ ವೈವಿಧ್ಯಮಯ ಕೃತಿಗಳನ್ನು ರಚಿಸಿದ್ದಾರೆ.

ಇವರ ಮೇರುಕೃತಿ 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ ಜ್ಞಾನಪೀಠ ಪ್ರಶಸ್ತಿ ಲಭಿಸಿತು. ಅಲ್ಲದೆ ಇವರಿಗೆ ರಾಷ್ಟ್ರಕವಿ, ಪಂಪ ಪ್ರಶಸ್ತಿ, ಪದ್ಮಭೂಷಣ ಪ್ರಶಸ್ತಿ, ಕರ್ನಾಟಕ ರತ್ನ ಪ್ರಶಸ್ತಿ, ಮೈಸೂರು, ಬೆಂಗಳೂರು, ಕರ್ನಾಟಕ, ಗುಲ್ಬರ್ಗ ವಿಶ್ವವಿದ್ಯಾನಿಲಯಗಳ ಗೌರವ ಡಾಕ್ಟರೇಟ್ ಪ್ರಶಸ್ತಿಗಳು ಲಭಿಸಿವೆ. ಕುವೆಂಪು ೯.೧೧.೧೯೯೪ರಲ್ಲಿ ನಿಧನರಾದರು.

ಪ್ರಸ್ತುತ 'ನಾನು ಕನ್ನಡ ಕವಿಯಾದೆ' ಗದ್ಯಭಾಗವನ್ನು ಕುವೆಂಪುರವರ 'ನೆನಪಿನ ದೋಣಿಯಲ್ಲಿ' ಎಂಬ ಆತ್ಮಕಥೆಯಿಂದ ಆರಿಸಿಕೊಳ್ಳಲಾಗಿದೆ.

©KTBS Not to be republished

## ಪದಗಳ ಅರ್ಥ

ಅನುಚರ–ಹಿಂಬಾಲಕ;

ಅಧ್ಯಾರೋಪ–ಬಿಟ್ಟು ಹೋಗಿರುವ ಮಾತನ್ನು ಊಹಿಸಿ ಸೇರಿಸಿಕೊಳ್ಳುವುದು;

ಆಪಾದಮಸ್ತಕ–ಕಾಲಿನಿಂದ ತಲೆಯವರೆಗೆ

ಉದಾತ್ತ–ಶ್ರೇಷ್ಠವಾದ;

ಏಕಾಂತ– ಒಂಟಿಯಾದ, ರಹಸ್ಯ;

ಕಂದಾಚಾರ–ಗೊಡ್ಡು ಸಂಪ್ರದಾಯ;

ಕಗ್ಗ–ಕೆಲಸಕ್ಕೆ ಬಾರದ;

ಕುಪಿತ–ಕೋಪಗೊಂಡ;

ಖಿನ್ನ–ಬಳಲಿದ;

ಗುನುಗು–ಸಣ್ಣ ಧ್ವನಿ, ತನ್ನಷ್ಟಕ್ಕೆ ತಾನೆ ಹಾಡಿಕೊಳ್ಳುವುದು

ಛಂದಸ್ಸು–ಪದ್ಯರಚನಾಶಾಸ್ತ್ರ;

ತಿರೋಹಿತ–ಮರೆಯಾಗು;

ತೇಜೋವಧೆ–ಅವಮಾನ;

ಸೃಜನಶೀಲ–ಹೊಸದನ್ನು ಸೃಷ್ಟಿಸುವ.

ದ್ಯೋತಕ–ಗುರುತು;

ಧೂರ್ತ–ಮೋಸಗಾರ;

ನಿರಾಶೆ–ಆಶಾಭಂಗ;

ಮಲೆತವ– ಉದ್ಧಟತನದಿಂದ ಕೂಡಿದವ;

ವಾಗ್ದೇವಿ– ಸರಸ್ವತಿ;

ಶ್ಲಾಘಿಸು–ಹೊಗಳು;

ಸವ್ಯಸಾಚಿ–ಎರಡು ಕೆಲಸವನ್ನು ಒಟ್ಟಿಗೆ ಮಾಡಬಲ್ಲವನು, ನಿಪುಣ;

ಸಾಂತ್ವನ– ಸಮಾಧಾನ;

ಸುದೈವ–ಅದೃಷ್ಟ;

ಸುಸಂಧಿ–ಒಳ್ಳೆಯ ಅವಕಾಶ.

## ಟಿಪ್ಪಣಿ

**ಜೇಮ್ಸ್ ಎಚ್. ಕಸಿನ್ಸ್**–ಐರ್ಲೆಂಡ್ ದೇಶದ ಕವಿ. ಕನ್ನಡದಲ್ಲಿ ಕಾವ್ಯ ರಚಿಸುವಂತೆ ಕುವೆಂಪು ಅವರನ್ನು ಪ್ರೇರೇಪಿಸಿದರು.

**ಸ್ವದೇಶಿ ಚಳವಳಿ**–ಸ್ವಾತಂತ್ರ್ಯ ಹೋರಾಟ ಸಂದರ್ಭದಲ್ಲಿ ವಿದೇಶಿ ವಸ್ತುಗಳನ್ನು ತಿರಸ್ಕರಿಸುವ ಸಲುವಾಗಿ ಗಾಂಧೀಜಿಯವರು ಪ್ರಾರಂಭಿಸಿದ ಚಳವಳಿ.

**ರವೀಂದ್ರನಾಥ ಠಾಕೂರರು**–ನೋಬೆಲ್ ಪ್ರಶಸ್ತಿ ವಿಜೇತ ಬಂಗಾಳಿ ಲೇಖಕರು.

**ನೊಬೆಲ್ ಬಹುಮಾನ**–ಜಾಗತಿಕ ಮಟ್ಟದ ಒಂದು ಪ್ರಶಸ್ತಿ.

**ಸ್ಥಳ ನಿರ್ದೇಶನ**–ಜಾಗ ತೋರಿಸುವುದು.

## ಅಭ್ಯಾಸ

**ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಕವನಗಳನ್ನು ಕಸಿನ್ಸ್‌ರವರಿಗೆ ತೋರಿಸುವಂತೆ ಕುವೆಂಪುರವರಿಗೆ ಯಾರು ತಿಳಿಸಿದರು?

೨. ಜೇಮ್ಸ್ ಕಸಿನ್ಸ್ ಮೈಸೂರಿಗೆ ಏಕೆ ಬಂದಿದ್ದರು?

©KTBS Not to be republished

೩. ಕಸಿನ್ಸ್‌ರವರನ್ನು ಭೇಟಿ ಮಾಡಲು ಹೋದಾಗ ಕುವೆಂಪುರವರ ವೇಷಭೂಷಣ ಹೇಗಿತ್ತು?

೪. ಕಸಿನ್ಸ್‌ರವರು ಅಸಮಾಧಾನದ ಧ್ವನಿಯಲ್ಲಿ ಕುವೆಂಪುರವರಿಗೆ ಏನೆಂದು ಹೇಳಿದರು?

೫. ಕುವೆಂಪು ಅವರ ಯಾವುದಾದರೂ ಎರಡು ಕೃತಿಗಳನ್ನು ಹೆಸರಿಸಿರಿ.

೬. ರವೀಂದ್ರನಾಥರಿಗೆ ನೋಬೆಲ್ ಬಹುಮಾನ ಏಕೆ ದೊರಕಿತು?

**ಆ) ಪ್ರತಿಯೊಂದು ಪ್ರಶ್ನೆಗೂ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಕುವೆಂಪುರವರು ಕಸಿನ್ಸ್‌ರವರ ಪ್ರಶ್ನೆಗೆ ಮಲೆತವನಂತೆ ನೀಡಿದ ಉತ್ತರವೇನು?

೨. ಕುವೆಂಪುರವರು ಕನ್ನಡದಲ್ಲಿ ಬರೆಯಲು ಕಾರಣವಾದ ಸಂದರ್ಭವನ್ನು ತಿಳಿಸಿ.

೩. ಜೇಮ್ಸ್‌ಕಸಿನ್ಸ್‌ರವರು ಕುವೆಂಪುರವರಿಗೆ ಹೇಳಿದ ವಿವೇಕದ ಮಾತುಗಳಾವುವು?

**ಇ) ಕೆಳಗಿನ ನುಡಿಗಳ ಸಂದರ್ಭವನ್ನು ಸ್ವಾರಸ್ಯ ಸಹಿತ ವಿವರಿಸಿರಿ.**

೧. 'ನಿಮ್ಮ ಭಾಷೆಯಲ್ಲಿ ಏನಾದರೂ ಬರೆದಿದ್ದೀರಾ?'

೨. 'ನೀವು ಇಂಗ್ಲೀಷಿನಲ್ಲಿ ಸೃಜನ ಸಾಹಿತ್ಯ ಸೃಷ್ಟಿ ಮಾಡಲಾರಿರಿ.'

೩. 'ಅಂದಿನಿಂದ ಕನ್ನಡದಲ್ಲಿ ರಚಿಸುವ ಮನಸ್ಸು ಮಾಡಿದೆ.'

## ಭಾಷಾಭ್ಯಾಸ

**ಅ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.**

ಸಮಾಧಾನ, ಸಾಧ್ಯ, ಹಳೆಯ, ವಿವೇಕ, ಅಸಮರ್ಥ, ಹಿಗ್ಗು, ತಿರಸ್ಕಾರ.

**ಆ) ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.**

ಮಿತ್ರ, ಸಮಯ, ಸಮೀಪ, ಧ್ವನಿ, ಕಂದ.

**ಇ) ಕೆಳಗಿನ ಪದಗಳನ್ನು ಬಳಸಿಕೊಂಡು ಸ್ವಂತ ವಾಕ್ಯ ಮಾಡಿರಿ.**

ಚಳವಳಿ, ಸ್ವದೇಶಿ, ನಿರಾಶೆ, ಗುನುಗು.

**ಈ) ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿ ಹೆಸರಿಸಿ.**

ಸಲಹೆಯಿತ್ತರು, ತಲೆಯೆತ್ತು, ಬೆನನ್ನು, ಚೀಟಿಯನ್ನು, ಹಿಗ್ಗನ್ನು, ಕೈಯಲ್ಲಿ.

**ಉ) ಕೆಳಗಿನ ಪದಗಳನ್ನು ಬಿಡಿಸಿ ಬರೆಯಿರಿ.**

ವಾಗ್ದೇವಿ, ಅತ್ಯಲ್ಪ, ಅತ್ಯಂತ, ಹಾಸ್ಯಾಸ್ಪದ.

©KTBS Not to be republished

ಊ) ಮೊದಲೆರಡು ಪದಗಳಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ.

೧. ಕುವೆಂಪು : ಕನ್ನಡದ ಕವಿ :: ಜೇಮ್ಸ್ ಕಸಿನ್ಸ್ : ___________

೨. ತೃಪ್ತಿ : ಅತೃಪ್ತಿ :: ಸಮಾಧಾನ : ___________

೩. ಕಾಲಕ್ಕೆ : ಚತುರ್ಥೀ ವಿಭಕ್ತಿ :: ಪ್ರಯತ್ನವನ್ನು : ___________

೪. ಸಂತೆ : ಸಂಸ್ಥೆ :: ಜಾತ್ರೆ : ___________

೫. ಊರನ್ನು : ಲೋಪಸಂಧಿ :: ಮಳೆಗಾಲ : ___________

**ಭಾಷಾ ಚಟುವಟಿಕೆ**

೧. ಕುವೆಂಪುರವರ 'ನೆನಪಿನ ದೋಣಿಯಲ್ಲಿ' ಆತ್ಮಕಥೆಯನ್ನು ಓದಿರಿ.

೨. ಪ್ರಸಿದ್ಧ ವ್ಯಕ್ತಿಗಳ ಆತ್ಮಕಥೆಗಳ ಹೆಸರುಗಳನ್ನು ಸಂಗ್ರಹಿಸಿರಿ.

೩. ಪ್ರತಿದಿನ ನಿಮ್ಮ ಕಾರ್ಯಚಟುವಟಿಕೆಗಳ ದಿನಚರಿ ಬರೆಯುವುದನ್ನು ಅಭ್ಯಾಸ ಮಾಡಿ.

## ವ್ಯಾಕರಣ

## ಭಾಗ 'ಅ'

## ಲಿಂಗ

ಮಾತನಾಡುವಾಗ ಕೆಲವು ಶಬ್ದಗಳನ್ನು ಕೇಳಿದಾಗ ನಮ್ಮ ಮನಸ್ಸಿಗೆ 'ಗಂಡಸು' ಎಂಬರ್ಥ ಹೊಳೆಯುವುದು. ಕೆಲವು ಶಬ್ದಗಳನ್ನು ಕೇಳಿದಾಗ ಮನಸ್ಸಿಗೆ 'ಹೆಂಗಸು' ಎಂಬ ಅರ್ಥ ಹೊಳೆಯುವುದು. ಮತ್ತೆ ಕೆಲವು ಶಬ್ದಗಳನ್ನು ಕೇಳಿದಾಗ ಹೆಂಗಸು ಮತ್ತು ಗಂಡು ಎರಡೂ ಅಲ್ಲದ ಬೇರೆ ಎಂಬ ಅರ್ಥವು ಹೊಳೆಯುವುದು. ಇದನ್ನು ಆಧಾರವಾಗಿರಿಸಿಕೊಂಡು ವ್ಯಾಕರಣದಲ್ಲಿ ಮುಖ್ಯವಾಗಿ ಮೂರು ಬಗೆಯ ಲಿಂಗಗಳನ್ನು ಗುರುತಿಸುತ್ತೇವೆ. ಅವೇ ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗಗಳು.

**ಪುಲ್ಲಿಂಗ:** ಯಾವ ಶಬ್ದ ಪ್ರಯೋಗ ಮಾಡಿದಾಗ ಮನುಷ್ಯ ವಾಚಕದಲ್ಲಿ 'ಗಂಡಸು' ಎಂಬರ್ಥವು ಮನಸ್ಸಿಗೆ ಹೊಳೆಯುವುದೋ ಅದು ಪುಲ್ಲಿಂಗ ಎನಿಸುವುದು.

**ಉದಾಹರಣೆಗೆ:–** ದೊಡ್ಡವನು, ಮುದುಕ, ಹುಡುಗ, ಅರಸು, ಮಂತ್ರಿ, ಜಟ್ಟಿ, ಶಕ್ತಿವಂತ, ತಂದೆ, ಮಾವ, ಸಹೋದರ, ಅಣ್ಣ, ತಮ್ಮ, ಚಿಕ್ಕಪ್ಪ, ಸಚಿವ, ಮದುಮಗ, ಸಂತ, ದಾಸ, ಕವಿ–ಇತ್ಯಾದಿ.

**ಸ್ತ್ರೀಲಿಂಗ:** ಯಾವ ಶಬ್ದ ಪ್ರಯೋಗ ಮಾಡಿದಾಗ ನಮ್ಮ ಭಾವನೆಗೆ ಮನುಷ್ಯ ವಾಚಕದಲ್ಲಿ 'ಹೆಂಗಸು' ಎಂಬ ಅರ್ಥವು ಹೊಳೆಯುವುದೋ ಅದು ಸ್ತ್ರೀಲಿಂಗ ಎನಿಸುವುದು.

**ಉದಾಹರಣೆಗೆ:–** ದೊಡ್ಡವಳು, ಮುದುಕಿ, ಅತ್ತೆ, ಚಿಕ್ಕಮ್ಮ, ದೊಡ್ಡಮ್ಮ, ಹೆಂಡತಿ, ತಂಗಿ, ಸಹೋದರಿ, ರಾಣಿ, ತಾಯಿ, ಅಜ್ಜಿ, ವಿದುಷಿ, ಚಲುವೆ, ಒಳ್ಳೆಯವಳು, ಮಗಳು –ಇತ್ಯಾದಿ.

©KTBS Not to be republished

**ನಪುಂಸಕಲಿಂಗ:** ಯಾವ ಶಬ್ದವನ್ನು ಪ್ರಯೋಗ ಮಾಡಿದಾಗ ಗಂಡಸು ಅಥವಾ ಹೆಂಗಸು ಎಂಬ ಅರ್ಥ ಸ್ಪಷ್ಟವಾಗಿ ಮನಸ್ಸಿಗೆ ಹೊಳೆಯುವುದಿಲ್ಲವೋ ಅದು ನಪುಂಸಕಲಿಂಗ ಎನಿಸುವುದು. ಕನ್ನಡದಲ್ಲಿ ಎಲ್ಲಾ ಪ್ರಾಣಿಗಳನ್ನು ನಪುಂಸಕಲಿಂಗಗಳೆಂದೇ ಪರಿಗಣಿಸಲಾಗುವುದು.

**ಉದಾಹರಣೆಗೆ:–** ಮನೆ, ನೆಲ, ಬೆಂಕಿ, ಗದ್ದೆ, ಕತ್ತೆ, ಕೋಣ, ಎತ್ತು, ನರಿ, ನಾಯಿ, ಕಟ್ಟಿಗೆ, ಕಲ್ಲು, ಇಟ್ಟಿಗೆ, ಮಳೆ, ಮೋಡ, ಜಲ, ಹೊಳೆ, ಹಳ್ಳ, ಪುಸ್ತಕ – ಇತ್ಯಾದಿಗಳು.

**ಗಮನಿಸಿ:** ಎಲ್ಲಾ ಪ್ರಾಣಿಗಳು (ಹೆಣ್ಣಿರಲಿ, ಗಂಡಿರಲಿ) ಕನ್ನಡ ವ್ಯಾಕರಣದಲ್ಲಿ ನಪುಂಸಕಲಿಂಗಗಳೇ ಆಗುತ್ತವೆ.

ಹಸು ಹಾಲನ್ನು ಕೊಡುತ್ತದೆ.

ಕತ್ತೆ ಒದೆಯುತ್ತದೆ.

ಎತ್ತು ಉಳುಮೆಯನ್ನು ಮಾಡುತ್ತದೆ.

## ವಚನಗಳು

'ವಚನ' ಎಂದರೆ ಸಂಖ್ಯೆ. ವಸ್ತುಗಳನ್ನು ಒಂದು ಅಥವಾ ಇನ್ನೂ ಹೆಚ್ಚಾಗಿ ಲೆಕ್ಕ ಹೇಳುವುದುಂಟು. ಅಂಥ ಸಮಯದಲ್ಲಿ ವಸ್ತು ಅಥವಾ ವ್ಯಕ್ತಿ ಒಂದಾಗಿದ್ದರೆ ಅಂಥದನ್ನು 'ಏಕವಚನ' ಎನ್ನುತ್ತೇವೆ. ಎರಡು ಅಥವಾ ಅದಕ್ಕಿಂತ ಹೆಚ್ಚಾಗಿದ್ದರೆ 'ಬಹುವಚನ' ಎನ್ನುತ್ತೇವೆ.

ಒಂದು ವಸ್ತು ಎಂದು ಹೇಳುವ ಶಬ್ದಗಳೆಲ್ಲ ಏಕವಚನಗಳು. ಒಂದಕ್ಕಿಂತ ಹೆಚ್ಚಾದ ವಸ್ತುಗಳೆಂದು ತಿಳಿಸುವ ಶಬ್ದಕ್ಕೆ ಬಹುವಚನ ಎನ್ನುತ್ತೇವೆ.

**ಉದಾಹರಣೆಗೆ:–**

| **ಏಕವಚನ** | **ಬಹುವಚನ** |
|---|---|
| ಅರಸು | ಅರಸರು (ಅರಸು+ಅರು) |
| ಅರಸಿ | ಅರಸಿಯರು (ಅರಸಿ+ಅರು) |
| ನೀನು | ನೀವು (ನೀನು+ವು) |
| ನಾನು | ನಾವು (ನಾನು+ವು) |
| ಮರ | ಮರಗಳು (ಮರ+ಗಳು) |
| ಮನೆ | ಮನೆಗಳು (ಮನೆ+ಗಳು) |
| ಅಣ್ಣ | ಅಣ್ಣಂದಿರು (ಅಣ್ಣ+ಅಂದಿರು) |
| ತಾಯಿ | ತಾಯಿಯರು (ತಾಯಿ+ಅರು) |

© KTBS Not to be republished

ಗಮನಿಸಿ: ಕನ್ನಡದಲ್ಲಿ ಏಕವಚನ ಬಳಸಬೇಕಾದ ಕೆಲವು ಸಂದರ್ಭದಲ್ಲಿ ಗೌರವಪೂರ್ವಕವಾಗಿ ಬಹುವಚನ ಬಳಸುವ ಪದ್ಧತಿ ಇದೆ.

ಉದಾ: 'ಗುರು ಬಂದನು' ಅನ್ನದೆ 'ಗುರುಗಳು ಬಂದರು' ಎಂದು ಬಳಸಲಾಗುತ್ತದೆ.

### ಭಾಗ 'ಆ'

ಅ. 'ನಾನು ಕನ್ನಡ ಕವಿಯಾದೆ' ಪಾಠದಲ್ಲಿ ಬಂದಿರುವ ಐದು ಏಕವಚನ ಮತ್ತು ಐದು ಬಹುವಚನ ಪದಗಳನ್ನು ಬರೆಯಿರಿ.

ಆ. ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗಗಳಿಗೆ ಎರಡೆರೆಡು ಉದಾಹರಣೆಯನ್ನು ಬರೆಯಿರಿ.

**ಎಲ್ಲಾದರು ಇರು ಎಂತಾದರು ಇರು ಎಂದೆಂದಿಗು ನೀ ಕನ್ನಡವಾಗಿರು**

* * * * *

©KTBS Not to be republished

# ೯. ಒಂದು ರಾತ್ರಿ

– ಎಸ್.ವಿ. ಪರಮೇಶ್ವರಭಟ್ಟ

**ಪ್ರವೇಶ :** ಕನ್ನಡ ಸಾಹಿತ್ಯದಲ್ಲಿ ಭಾವಗೀತೆ ಒಂದು ಆಧುನಿಕ ಪ್ರಕಾರವಾಗಿದೆ. ಕವಿ ಕಲ್ಪನಾ ಲೋಕದಲ್ಲಿ ವಿಹರಿಸಿದಾಗ ವರ್ಣನೆ ಸಾಕಾರಗೊಳ್ಳುತ್ತದೆ. 'ಒಂದು ರಾತ್ರಿ' ಪದ್ಯದಲ್ಲಿ ಪ್ರಕೃತಿಯ ಸುಂದರ ದೃಶ್ಯವನ್ನು ಕವಿ ವರ್ಣಿಸಿರುವ ರೀತಿ ಮಹತ್ವದ್ದಾಗಿದೆ. ಮೋಡವನ್ನೇ ತೊಟ್ಟಿಲಾಗಿ ಕಲ್ಪಿಸಿಕೊಂಡ ಕವಿ ಅದಕ್ಕೆ ಪೂರಕವಾಗಿ ಇರುಳಿನ ನಿಸರ್ಗದ ಸಾಮರಸ್ಯವನ್ನು ಬೆಸೆದಿದ್ದಾರೆ. ಗಾಳಿಯೇ ಜೋಗುಳ ಹಾಡುತ್ತಾ ಹೊಸ ಹುಟ್ಟಿಗಾಗಿ ಹಂಬಲಿಸುವುದನ್ನು ತಮ್ಮದೇ ಶೈಲಿಯಲ್ಲಿ ಪ್ರಸ್ತುತಪಡಿಸಿದ್ದಾರೆ. ಈ ಕವನದಲ್ಲಿ ರಾತ್ರಿಯ ಕಲ್ಪನೆ ಸುಂದರವಾಗಿ ಮೂಡಿ ಬಂದಿದೆ.



ತಿಳಿಮುಗಿಲ ತೊಟ್ಟಿಲಲಿ
ಮಲಗಿದ್ದ ಚಂದಿರನ
ಗಾಳಿ ಜೋಗುಳ ಹಾಡಿ
ತೂಗುತ್ತಿತ್ತು ॥೧॥

ಗರಿಮುದುರಿ ಮಲಗಿದ್ದ
ಹಕ್ಕಿಗೂಡುಗಳಲ್ಲಿ
ಇರುಳು ಹೊಂಗನಸೂಡಿ
ಸಾಗುತ್ತಿತ್ತು ॥೨॥

ಮುಗುಳಿರುವ ಹೊದರಿನಲಿ
ನರುಗಂಪಿನುದರದಲಿ
ಜೇನುಗನಸಿನ ಹಾಡು
ಕೇಳುತ್ತಿತ್ತು ॥೩॥


©KTBS Not to be republished

ತುಂಬುನೀರಿನ ಹೊಳೆಯೊ
ಳಂಬಿಗನ ಕಿರುದೋಣಿ
ಪ್ರಸ್ಥಾನ ಗೀತೆಯನು
ಹೇಳುತ್ತಿತ್ತು ॥೪॥

ಬರುವ ಮುಂದಿನ ದಿನದ
ನವನವೋದಯಕಾಗಿ
ಪ್ರಕೃತಿ ತಪವಿರುವಂತೆ
ತೋರುತ್ತಿತ್ತು ॥೫॥

ಶಾಂತರೀತಿಯೊಳಿರುಳು
ಮೆಲ್ಲಮೆಲ್ಲನೆ ಉರುಳಿ
ನಾಳಿನ ಶುಭೋದಯವ
ಸಾರುತ್ತಿತ್ತು ॥೬॥

**ಕೃತಿಕಾರರ ಪರಿಚಯ**



೧೯೧೪ರ ಫೆಬ್ರವರಿ ೦೮ರಲ್ಲಿ ಹುಟ್ಟಿದ ಎಸ್.ವಿ. ಪರಮೇಶ್ವರಭಟ್ಟರು ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿಯವರು. ಮೈಸೂರು ಮತ್ತು ಮಂಗಳೂರು ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿರುವ ಇವರನ್ನು ಕನ್ನಡದ ಶ್ರೇಷ್ಠ ಕವಿ, ಅನುವಾದಕ, ಸಾಹಿತ್ಯ ಪರಿಚಾರಕರೆಂದು ಗುರುತಿಸಲಾಗಿದೆ. 'ಅಮರಶತಕ', 'ಇಂದ್ರಚಾಪ', 'ರಾಗಿಣಿ', 'ಸುರಹೊನ್ನೆ', 'ಉಪ್ಪುಕಡಲು', 'ಗಗನಚುಕ್ಕಿ', ಇವರ ಮುಖ್ಯ ಕೃತಿಗಳಾಗಿವೆ. ಉತ್ತಮ ವಿಮರ್ಶಕರೂ ಸರಸ ವಾಗ್ಮಿಗಳೂ ಆಗಿದ್ದ ಇವರು ಸಂಸ್ಕೃತ ಸಾಹಿತ್ಯದಲ್ಲಿ ಪ್ರಸಿದ್ಧವಾಗಿರುವ ಭರ್ತೃಹರಿಯ ಶತಕತ್ರಯ, ಜಯದೇವನ ಗೀತಗೋವಿಂದ, ಹಾಲನ ಗಾಥಾಸಪ್ತಶತಿ, ಭಾಸನ ಹಾಗೂ ಕಾಳಿದಾಸನ ಕೃತಿಗಳನ್ನು ಕನ್ನಡಕ್ಕೆ ತಂದಿದ್ದಾರೆ. ರಾಜ್ಯ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ, ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಸದಸ್ಯತ್ವ ಇವರಿಗೆ ಲಭಿಸಿದೆ.

'ಒಂದು ರಾತ್ರಿ' ಕವನವನ್ನು ಪರಮೇಶ್ವರಭಟ್ಟರ 'ರಾಗಿಣಿ' ಸಂಕಲನದಿಂದ ಆರಿಸಿಕೊಳ್ಳಲಾಗಿದೆ.

**ಪದಗಳ ಅರ್ಥ**

ಅಂಬಿಗ–ದೋಣಿ ನಡೆಸುವವ;

ಇರುಳು–ರಾತ್ರಿ;

ಉದರ–ಹೊಟ್ಟೆ;

ಊಡು–ತಿನ್ನಿಸು, ನೀಡು, ಕುಡಿಸು, ಊಟಮಾಡಿಸು;

ತಪ–ತಪಸ್ಸು, ಆಲೋಚನೆ;

ನರುಗಂಪು–ಪರಿಮಳ;

ಮುಗಿಲು–ಮೋಡ;

ಮುಗುಳು–ಮೊಗ್ಗು;

ಹೊದರು–ಪೊದರು.

©KTBS Not to be republished

## ಟಿಪ್ಪಣಿ

ಜೋಗುಳ–ಮಕ್ಕಳನ್ನು ಮಲಗಿಸುವಾಗ ಹಾಡುವ ಹಾಡು, ಲಾಲಿ ಹಾಡು.

ಪ್ರಸ್ಥಾನಗೀತೆ–ಸಂಚಾರದ ಸಂದರ್ಭದಲ್ಲಿ ಹಾಡುವ ಹಾಡು.

ನವೋದಯ–ಹೊಸ ಹುಟ್ಟು, ಹೊಸಗನ್ನಡ ಸಾಹಿತ್ಯದ ಒಂದು ಪ್ರಕಾರ.

ಶುಭೋದಯ–ಶುಭ ಮುಂಜಾನೆ.

## ಅಭ್ಯಾಸ

**ಅ) ಕೆಳಗೆ ಕೊಟ್ಟಿರುವ ಪ್ರತಿಯೊಂದು ಪ್ರಶ್ನೆಗೂ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಚಂದ್ರನು ಮಲಗಿರುವ ತೊಟ್ಟಿಲು ಯಾವುದು?

೨. ಗಾಳಿಯು ಜೋಗುಳ ಹಾಡಿ ಯಾರನ್ನು ತೂಗುತ್ತಿತ್ತು?

೩. ಎಸ್. ವಿ. ಪರಮೇಶ್ವರಭಟ್ಟರು ಕಂಡ ರಾತ್ರಿ ಹೇಗೆ ಸಾಗುತ್ತಿತ್ತು?

೪. ಜೇನುಗನಸಿನ ಹಾಡು ಎಲ್ಲಿ ಕೇಳುತ್ತಿತ್ತೆಂದು ಕವಿ ಪರಮೇಶ್ವರಭಟ್ಟರು ಹೇಳಿದ್ದಾರೆ?

೫. 'ಒಂದು ರಾತ್ರಿ' ಕವನದಲ್ಲಿ ಹೇಳಿರುವಂತೆ ಪ್ರಸ್ಥಾನ ಗೀತೆಯನ್ನು ಹಾಡುತ್ತಿದ್ದವರು ಯಾರು?

೬. ಪ್ರಕೃತಿಯು ಕವಿ ಪರಮೇಶ್ವರಭಟ್ಟರಿಗೆ ಯಾವ ರೀತಿಯಲ್ಲಿ ಕಂಡಿತು?

೭. 'ಒಂದು ರಾತ್ರಿ'ಯಲ್ಲಿ ಕವಿಕಂಡ ಇರುಳು ಏನನ್ನು ಸಾರುತ್ತಿತ್ತು?

**ಆ) ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. 'ಒಂದು ರಾತ್ರಿ' ಕವನದಲ್ಲಿ ಇರುಳಿನ ಸೊಬಗನ್ನು ಹೇಗೆ ವರ್ಣಿಸಿದ್ದಾರೆ?

೨. ಕವಿಯು ಹೊಸ ಹುಟ್ಟಿಗಾಗಿ ಹಂಬಲಿಸುತ್ತಿರುವುದು 'ಒಂದು ರಾತ್ರಿ' ಕವನದಲ್ಲಿ ಹೇಗೆ ವ್ಯಕ್ತವಾಗಿದೆ?

**ಇ) ಕೆಳಗಿನ ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಕವಿ ಪರಮೇಶ್ವರಭಟ್ಟರು ಇರುಳಿನ ನಿಸರ್ಗದ ಸಾಮರಸ್ಯವನ್ನು ಕವನದ ಮೂಲಕ ಹೇಗೆ ಕಟ್ಟಿಕೊಟ್ಟಿದ್ದಾರೆ? ನಿಮ್ಮ ಮಾತುಗಳಲ್ಲಿ ಬರೆಯಿರಿ.

©KTBS Not to be republished

ಈ) ಕೆಳಗಿನ ವಾಕ್ಯಗಳಿಗೆ ಕೆಳಗೆ ನಾಲ್ಕು ಆಯ್ಕೆಗಳನ್ನು ಕೊಟ್ಟಿದೆ. ಸೂಕ್ತವಾದ ಪದಗಳಿಂದ ಬಿಟ್ಟಿರುವ ಸ್ಥಳವನ್ನು ತುಂಬಿರಿ.

೧. ಚಂದಿರನನ್ನು ಜೋಗುಳ ಹಾಡಿ ತೂಗುತ್ತಿದ್ದುದು---------

ಅ) ಮಕ್ಕಳು ಆ) ತಾಯಿ ಇ) ಹೆಂಗಳೆಯರು ಈ) ಗಾಳಿ

೨. ಗರಿಮುದುರಿ ಮಲಗಿದ್ದ ಹಕ್ಕಿಗೂಡಿನಲ್ಲಿ ಇರುಳು ಊಡಿದುದು --------

ಅ) ಹೊಂಗನಸು ಆ) ಕತ್ತಲು ಇ) ಬೆಳಕು ಈ) ಸವಿಗಾನ

೩. ಅಂಬಿಗನ ಕಿರುದೋಣಿ ಹೇಳುತ್ತಿದ್ದ ಗೀತೆ--------

ಅ) ಮಧುರ ಆ) ಪ್ರಸ್ಥಾನ ಇ) ಜನಪದ ಈ) ಅಮರ

೪. ನವನವೋದಯಕೆ ತಪವಿರುವಂತೆ ತೋರುತ್ತಿದ್ದುದು--------

ಅ) ನಾಡು ಆ) ಕಾಡು ಇ) ಪ್ರಕೃತಿ ಈ) ಇರುಳು

೫. ನಾಳಿನ ಶುಭೋದಯವ ಸಾರುತ್ತಾ ಮೆಲ್ಲ ಮೆಲ್ಲನೆ ಉರುಳುತ್ತಿದ್ದುದು----------

ಅ) ಇರುಳು ಆ) ಚಂದ್ರ ಇ) ಗಾಳಿ ಈ) ಕಿರು ದೋಣಿ

ಉ) 'ಅ' ಪಟ್ಟಿಯಲ್ಲಿನ ಪದಗಳನ್ನು 'ಆ' ಪಟ್ಟಿಯಲ್ಲಿರುವ ಪದಗಳಿಗೆ ಸರಿಯಾಗಿ ಹೊಂದಿಸಿ ಬರೆಯಿರಿ.

| 'ಅ' | 'ಆ' |
|---|---|
| ೧. ಚಂದ್ರನಿಗೆ | ಅ) ಪ್ರಸ್ಥಾನ ಗೀತೆ |
| ೨. ಹಕ್ಕಿಗೂಡಿಗೆ | ಆ) ಶುಭೋದಯ |
| ೩. ಕಿರುದೋಣಿ ಹೇಳಿದ್ದು | ಇ) ಹೊಂಗನಸು |
| ೪. ಪ್ರಕೃತಿ ತೋರುತ್ತಿದ್ದುದು | ಈ) ಗಾಳಿಯ ಜೋಗುಳ |
| | ಉ) ತಪವಿರುವಂತೆ |

## ಭಾಷಾಭ್ಯಾಸ

ಅ) ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ತಿಳಿಸಿರಿ.

ಜೇನುಗನಸು, ನವೋದಯ, ಶುಭೋದಯ.

ಆ) ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.

ಚಂದ್ರ, ಗಾಳಿ, ಹಕ್ಕಿ, ಪ್ರಕೃತಿ, ನೀರು.

ಇ) ಕೆಳಗಿನ ಪದಗಳಿಗೆ ನಾನಾರ್ಥವನ್ನು ಬರೆಯಿರಿ.

ಹೊಳೆ, ನವ, ಸಾರು.

©KTBS Not to be republished

## ಭಾಷಾ ಚಟುವಟಿಕೆ

**ಅ) ಕೆಳಗಿನ ಪದಗಳನ್ನು ಓದಿಕೊಂಡು ಬರೆಯಿರಿ.**

ತಿಳಿಮುಗಿಲ ತೊಟ್ಟಿಲು, ಗರಿಮುದುರಿ ಮಲಗು,
ಮುಗುಳಿರುವ ಹೊದರು, ತುಂಬು ನೀರಿನ ಹೊಳೆ

ಆ) 'ಒಂದು ರಾತ್ರಿ' ಪದ್ಯದ ೫ ಮತ್ತು ೬ ನೆಯ ನುಡಿಗಳನ್ನು ಕಂಠಪಾಠ ಮಾಡಿರಿ.

ಇ) ಬೆಳದಿಂಗಳ ಊಟವನ್ನು ಮಾಡಿ ಅನುಭವವನ್ನು ನಿಮ್ಮ ಸಹಪಾಠಿಗಳ ಜೊತೆ ಹಂಚಿಕೊಳ್ಳಿರಿ.

ಈ) ನಿಸರ್ಗ ವರ್ಣನೆಯ ಗೀತೆಗಳನ್ನು ಸಂಗ್ರಹಿಸಿ ಓದಿರಿ.

ಉ) ತುಂಬು ನೀರಿನ ಹೊಳೆಯಲಿ ಅಂಬಿಗನ ಕಿರುದೋಣಿ ಸಾಗುತ್ತಿರುವ ಚಿತ್ರ ಆಧರಿಸಿ ಐದು ವಾಕ್ಯ ಬರೆಯಿರಿ.



## ವ್ಯಾಕರಣ
### ಭಾಗ 'ಅ'

**ದ್ವಿರುಕ್ತಿ :**

ಅವು **ದೊಡ್ಡದೊಡ್ಡ** ಗ್ರಂಥಗಳು.

ಅವರು **ಓಡಿಓಡಿ** ದಣಿದರು.

**ಈಗೀಗ** ಅವರಿಗೆ ವ್ಯಾಪಾರ ಆಗುತ್ತಿದೆ.

**ಬೇಗಬೇಗ** ನಡೆಯಿರಿ.

ಮೇಲಿನ ಉದಾಹರಣೆಗಳಲ್ಲಿ ಅಡಿಗೆರೆ ಎಳೆದಿರುವ ಪದಗಳೆಲ್ಲವನ್ನೂ ಎರಡೆರಡು ಬಾರಿ ಪ್ರಯೋಗಿಸಲಾಗಿದೆ. ಹೀಗೆ ಒಂದು ಶಬ್ದವನ್ನು ಎರಡೆರಡು ಬಾರಿ ಉಚ್ಚರಿಸುವುದನ್ನು ದ್ವಿರುಕ್ತಿ ಎನ್ನುತ್ತಾರೆ. ದ್ವಿರುಕ್ತಿಗಳ ಪ್ರಯೋಗದಿಂದ ಕೇಳುವ ಪದ ಮನಸ್ಸಿನ ಮೇಲೆ ಪರಿಣಾಮವುಂಟಾಗುತ್ತದೆ. ಭಾವನೆಗಳ ಅಭಿವ್ಯಕ್ತಿಗೆ ಪುಷ್ಟಿ ದೊರೆಯುತ್ತದೆ.

ನಿಲ್ಲುನಿಲ್ಲು, ಹೆಚ್ಚುಹೆಚ್ಚು, ಬನ್ನಿಬನ್ನಿ, ಬೇಡಬೇಡ, ಓಡುಓಡು, ಬೇಗಬೇಗ, ನಡೆನಡೆ.

ಇತ್ಯಾದಿಗಳು ದ್ವಿರುಕ್ತಿಗಳಿಗೆ ಉದಾಹರಣೆಗಳಾಗಿರುತ್ತವೆ.

© KTBS Not to be republished

**ಅನುಕರಣಾವ್ಯಯ**

**ಕೆಳಗಿನ ವಾಕ್ಯಗಳಲ್ಲಿ ಗೆರೆ ಎಳೆದ ಪದಗಳನ್ನು ಗಮನಿಸಿ.**

೧. ನದಿ ಜುಳು ಜುಳು ಹರಿಯುತ್ತಿತ್ತು .

೨. ಮಳೆ ಧೋ ಧೋ ಎಂದು ಸುರಿಯುತ್ತಿತ್ತು .

೩. ಗಾಳಿ ರೊಯ್ಯನೆ ಬೀಸುತ್ತಿತ್ತು.

ಮೇಲಿನ ಅಡಿಗೆರೆಯೆಳೆದ ಪದಗಳಿಗೆ ವಿಶೇಷವಾದ ಅರ್ಥವೇನೂ ಇಲ್ಲ. ನಾಮಪದ, ಕ್ರಿಯಾಪದಗಳಂತೆ ಲಿಂಗ, ವಚನ, ವಿಭಕ್ತಿಗಳಿಂದ ರೂಪ ಭೇದವನ್ನು ಹೊಂದದೆ ಏಕರೂಪವಾಗಿರುವ ಇವುಗಳನ್ನು 'ಅವ್ಯಯ' ಎನ್ನುತ್ತಾರೆ.

ನಾವು ಕೆಲವು ಧ್ವನಿಗಳನ್ನು ಕೇಳಿದಾಗ ಆ ಧ್ವನಿಗಳನ್ನು ಅನುಕರಿಸಿ ಹೇಳುವಾಗ ಉಂಟಾಗುವ ಶಬ್ದಗಳನ್ನು ಅನುಕರಣಾವ್ಯಯಗಳು ಎನ್ನುತ್ತಾರೆ.

**ಭಾಗ 'ಆ'**

**ಕಂಸದಲ್ಲಿ ಕೊಟ್ಟಿರುವ ಅನುಕರಣಾವ್ಯಯಗಳಿಂದ ಸರಿಯಾದುದನ್ನು ಆರಿಸಿಕೊಂಡು ಖಾಲಿ ಬಿಟ್ಟ ಜಾಗವನ್ನು ಭರ್ತಿ ಮಾಡಿ.**

[ಧಗಧಗ, ಸರಸರ, ಢಣಢಣ, ಫಳಫಳ]

೧. ಗಂಟೆ ______ ಬಾರಿಸಿತು.

೨. ಬೆಂಕಿ ______ ಉರಿಯುತ್ತಿತ್ತು.

೩. ಸರವು ______ ಹೊಳೆಯುತ್ತಿತ್ತು.

೪. ಹಾವು ______ ಹರಿಯುತ್ತದೆ.

*****

©KTBS Not to be republished

# ೧೦. ಬುದ್ಧನ ಸನ್ನಿಧಿಯಲ್ಲಿ ದಿವ್ಯ ಮೌನ

**– ಡಾ. ರಾಜಶೇಖರ ಹತಗುಂದಿ**

**ಪ್ರವೇಶ :** 'ಕೆಲವನ್ನು ನೋಡಿ ತಿಳಿ', 'ಕೆಲವನ್ನು ಮಾಡಿ ತಿಳಿ', 'ಕೆಲವನ್ನು ಕೇಳಿ ತಿಳಿ' ಎಂಬುದು ಲೋಕಾನುಭವದ ಮಾತು. ವ್ಯಕ್ತಿ ತನ್ನ ಅನುಭವ ಮತ್ತು ಜ್ಞಾನ ಪಡೆಯುವುದಕ್ಕೆ ಇವು ಮುಖ್ಯ ಮಾರ್ಗಗಳು. ಈ ಮಾರ್ಗಗಳಲ್ಲಿ ಹೆಚ್ಚು ಪರಿಣಾಮಕಾರಿಯಾದುದು ನೋಡಿ ಕಲಿಯುವುದು. ಇದಕ್ಕೆ ಪೂರಕವಾದುದು ಪ್ರವಾಸ. ಪ್ರವಾಸ ಲೋಕದ ಬಗ್ಗೆ ನಮ್ಮ ತಿಳುವಳಿಕೆಯನ್ನು ಹೆಚ್ಚಿಸುವ ಒಂದು ಚಟುವಟಿಕೆಯಾಗಿದೆ. 'ದೇಶ ಸುತ್ತು ಕೋಶ ಓದು' ಎಂಬ ಗಾದೆಯಂತೆ ಇದು ವ್ಯಕ್ತಿಯ ಜ್ಞಾನವಿಕಾಸಕ್ಕೆ ಪೂರಕವಾಗಿದೆ. ಇದರಿಂದ ನಮ್ಮ ದೇಶದ ವೈವಿಧ್ಯಮಯ ಸಂಸ್ಕೃತಿ ಪರಿಚಯವಾಗುತ್ತದೆ. ಇದು ಪ್ರಸ್ತುತ ಪ್ರವಾಸ ಲೇಖನದಿಂದ ಅರಿವಾಗುತ್ತದೆ.

ಬಿಹಾರ ಪ್ರವಾಸದಲ್ಲಿ ನಾವು ಅಗತ್ಯವಾಗಿ ನೋಡಬೇಕೆಂದಿದ್ದುದು ಬೋಧಗಯಾ. ವಿಶ್ವಕ್ಕೆ ಶಾಂತಿ ಮಂತ್ರವನ್ನು ಬೋಧಿಸಿದ ಗೌತಮ ಬುದ್ಧನನ್ನು ನಾನು ತಿಳಿದುಕೊಂಡಿದ್ದು ಪಿ. ಲಂಕೇಶರ 'ಮೋಕ್ಷ ಹುಡುಕುತ್ತಾ ಪ್ರೀತಿಯ ಬಂಧದಲ್ಲಿ' ಎಂಬ ಲೇಖನದಿಂದ. ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್ ನಮ್ಮ ಚಿಂತನೆಯ ಭಾಗವಾಗಿದ್ದು ನಂತರದ ಓದು, ಚರ್ಚೆಯಿಂದ. ಗೌತಮ ಬುದ್ಧನಿಗೆ ಜ್ಞಾನೋದಯವಾದ ಸ್ಥಳವೆಂದಾಗಲಿ, ಬೋಧಿವೃಕ್ಷ ಪವಿತ್ರವಾದ ಮರ ಎಂದಾಗಲಿ ನಾನು ಬೋಧಗಯಾವನ್ನು ಇಷ್ಟಪಟ್ಟಿರಲಿಲ್ಲ. ಬಸವಣ್ಣನ ವೀರಶೈವ ಧರ್ಮ ಹನ್ನೆರಡನೇ ಶತಮಾನದಲ್ಲಿ ಅತ್ಯಂತ ಪ್ರಗತಿಪರ ಎನಿಸಿದ್ದು, ಇಪ್ಪತ್ತನೇ ಶತಮಾನದ ಹೊತ್ತಿಗೆ ಜಾತಿಯಾಗಿ ಪರಿವರ್ತಿತವಾಗಿದ್ದು ನಾವು ಕಣ್ಣಾರೆ ಕಂಡ ಸತ್ಯವಾದ್ದರಿಂದ, ಬೌದ್ಧಧರ್ಮಕ್ಕೂ ಇದೇ ಗತಿ ಬಂದಿರಬಹುದೇ ಎಂಬ ಪ್ರಶ್ನೆ ತಲೆಯಲ್ಲಿ ಸುಳಿದಾಡುತ್ತಲೇ ಇತ್ತು. ರಾಜಗಿರಿಯ ಲಾಡ್ಜ್ ನಿಂದ ಹೊರಬರುವಾಗ ನನ್ನ ತಲೆಯಲ್ಲಿ ಬುದ್ಧನ ಚಿಂತನೆ, ಬೌದ್ಧ ಧರ್ಮ ಭಾರತದಲ್ಲೇ ನೆಲೆ ಕಳೆದುಕೊಂಡದ್ದು ಇತ್ಯಾದಿ ಸಂಗತಿಗಳು ಬಂದು ಹೋದವು.

ಬಸ್ಸು ಗಯಾದಲ್ಲಿ ಇಳಿಸಿದಾಗ ಬುದ್ಧನ ಗುಡಿ ಮತ್ತು ಬೋಧಿ ವೃಕ್ಷವಿರುವ ಸ್ಥಳಕ್ಕೆ ನಡೆದುಕೊಂಡು ಹೋಗಬಹುದೆಂದು ಭಾವಿಸಿದ್ದೆವು. ಆದರೆ ಆಟೋರಿಕ್ಷಾದವರಿಗೆ ವಿಚಾರಿಸಿದಾಗ, ಬೋಧಗಯಾ ಒಂದೇ ಎಂದು ತಿಳಿದಿದ್ದು ಸುಳ್ಳಾಗಿತ್ತು. ಮಗಧ ವಿಶ್ವವಿದ್ಯಾನಿಲಯ ಕೂಡ ಗಯಾದಿಂದ ಬಹಳಷ್ಟು ದೂರದಲ್ಲಿದೆ ಎಂದು ತಿಳಿದಾಗ 'ಮೊದಲು ಬೋಧಗಯಾಕ್ಕೆ ಹೋಗಿ ನಂತರ ಮಗಧ ವಿಶ್ವವಿದ್ಯಾನಿಲಯಗೆ ಹೋದರಾಯಿತು' ಎಂದು ಮ್ಯಾಕ್ಸಿಕ್ಯಾಬ್ ಹತ್ತಿದೆವು. ಮ್ಯಾಕ್ಸಿಕ್ಯಾಬ್ ಗಯಾ ಪಟ್ಟಣ ದಾಟಬೇಕಾದರೆ ಅರ್ಧ ತಾಸು ಸಮಯ ತೆಗೆದುಕೊಂಡಿತು. ನಾವು ಅಂದುಕೊಂಡಂತೆ ಗಯಾ ಸುಂದರ ಹಾಗೂ ಬೆಳವಣಿಗೆ ಹೊಂದಿದ ನಗರವಾಗಿರಲಿಲ್ಲ. ಹಳೆಯ ಮನೆಗಳು, ಇಕ್ಕಟ್ಟಾದ ಬೀದಿಗಳು, ಕಚ್ಚಾ ರಸ್ತೆಗಳು, ಅತಿಯಾದ ವಾಹನಗಳ ಓಡಾಟ, ದೊಡ್ಡ ಹಳ್ಳಿಯೊಂದು ಪಟ್ಟಣವಾಗಿ ಪರಿವರ್ತನೆಗೊಳ್ಳುತ್ತಿರುವಂತಿತ್ತು ಗಯಾದ ಸ್ಥಿತಿ.

ಪಾಟ್ನಾ, ರಾಂಚಿಯಲ್ಲಿ ಕಂಡ ಹಾದಿಬದಿಯ ಹೋಟೆಲ್ಗಳು ಇಲ್ಲೂ ವಿಪರೀತವಾಗಿದ್ದವು. ನಾವು ಕೂತ ಮ್ಯಾಕ್ಸಿಕ್ಯಾಬ್ ಸುಮಾರು ೨೫ ಕಿ. ಮೀ. ದೂರ ಕ್ರಮಿಸಲು ಒಂದೂವರೆ ಗಂಟೆಯಷ್ಟು ಸಮಯ ತೆಗೆದುಕೊಂಡಿತ್ತು. ಬೋಧಗಯಾದಲ್ಲಿ ಇಳಿದಾಗ ಸಮಯ ೯.೩೦ ಗಂಟೆ. ರಾಜಗಿರಿಯಲ್ಲೇ ಸ್ನಾನ ಇತ್ಯಾದಿ ಮುಗಿಸಿಕೊಂಡು ಬಂದಿದ್ದರಿಂದ ಬೋಧಗಯಾದಲ್ಲಿ ಇಳಿದ ಕೂಡಲೇ ನಾವು ಹುಡುಕಿದ್ದು ಹೋಟೆಲ್. ಹೋಟೆಲ್ ಏನೋ ಸಿಕ್ಕಿತು. ಆದರೆ ನಮಗೆ ಬೇಕಾದ ಇಡ್ಲಿ, ದೋಸೆ, ಉಪ್ಪಿಟ್ಟು ಎಲ್ಲಿ ಸಿಗಬೇಕು? ಎಣ್ಣೆ ಹಚ್ಚದೆ

©KTBS Not to be republished

ಸುಟ್ಟ ಚಪಾತಿ, ಎಂತಹುದೋ ಒಂದು ಪಲ್ಯ ಹೊಟ್ಟೆ ಸೇರಿದಾಗ ಬುದ್ಧನ ದರ್ಶನಕ್ಕೆ ಕೈಕಾಲು ಸಜ್ಜುಗೊಂಡವು.

ನಾವು ನಡೆಯುತ್ತಿರುವ ರಸ್ತೆಯ ಹತ್ತಿರದಲ್ಲೇ ದೊಡ್ಡದೊಂದು ನದಿ ಇರುವುದು ಗೋಚರಿಸಿತು. ಆದರೆ ನದಿಯಲ್ಲಿ ಒಂದು ಹನಿ ನೀರಿರಲಿಲ್ಲ. ಬಿಸಿಲಿಗೆ ನದಿಯಲ್ಲಿನ ಉಸುಕು ಮಿಣಿಮಿಣಿ ಮಿಂಚುತ್ತಿತ್ತು. ನದಿಯ ಹೆಸರೇನೆಂದು ವಿಚಾರಿಸಿದಾಗ 'ಫಲ್ಗು' ಎಂದು ಉತ್ತರ ಸಿಕ್ಕಿತು.

ಒಂದಷ್ಟು ಹೆಜ್ಜೆ ಹಾಕಿದ ಮೇಲೆ ಹಾದಿ ಬದಿಯ ಅಂಗಡಿಯಲ್ಲಿ ಬುದ್ಧನ ಗುಡಿಗೆ ಹೋಗುವ ಹಾದಿ ಯಾವುದೆಂದು ಕೇಳಿದೆವು. ಆತ ಗುಡಿಯೊಂದರ ಶಿಖರದೆಡೆಗೆ ಕೈಮಾಡಿ, "ಅದೇ ಬುದ್ಧನ ಮುಖ್ಯ ಗುಡಿ. ಅದರ ಪಕ್ಕದಲ್ಲೇ ಬೋಧಿವೃಕ್ಷ ಇದೆ. ನಿಮಗೆ ನೋಡಬೇಕೆನಿಸಿದರೆ ಇನ್ನಷ್ಟು ಮುಂದೆ ಹೋಗಿ. ಅಲ್ಲಿ ಜಪಾನ್, ಚೀನಾ, ಟಿಬೆಟ್ ಟೆಂಪಲ್ಗಳು ಇವೆ" ಎಂದ. ನಾಕೆಂಟು ಹೆಜ್ಜೆ ಮುಂದೆ ಹೋಗಿರಬೇಕು, ವಿಶಾಲ ಪ್ರಾಂಗಣವಿರುವ ಸ್ಥಳದಲ್ಲಿ ದೊಡ್ಡದೊಂದು ಗುಡಿ ಮುಗಿಲು ಮುಟ್ಟಿಸುತ್ತ ನಿಂತಿತ್ತು. ಜನಜಂಗುಳಿ ಕಡಿಮೆ ಇತ್ತು. ಪ್ರವೇಶ ಫೀ ಇರಲಿಲ್ಲ. ನಾವು ಹಣ ಕೊಟ್ಟದ್ದು ಚಪ್ಪಲಿ ಕಾಯುವವರಿಗೆ ಮಾತ್ರ. ಸ್ಟೆಪ್ ಇಳಿದು ಬುದ್ಧನ ಗುಡಿಯ ಎದುರು ನಿಂತಾಗ ದಿವ್ಯ ಮೌನ. ಪೂಜಾರಿಗಳ ಹಾವಳಿಯಿಲ್ಲ. ಮಂತ್ರಘೋಷಣೆ ಇಲ್ಲ, ನಮಗೋ ಸೋಜಿಗ; "ಬುದ್ಧನಿಗೆ ಇಲ್ಲಿ ಭಕ್ತರೇ ಇಲ್ಲವೇ" ಎಂಬ ಆತಂಕ.



ಗುಡಿಯ ಮುಖ್ಯದ್ವಾರ ದಾಟಿ ಒಳಗೆ ಹೋದಾಗ ಬೌದ್ಧ ಭಿಕ್ಷುವಾದರೂ ಇದ್ದಾರೆಯೇ ಎಂದು ಸುತ್ತ ಕಣ್ಣಾಡಿಸಿದೆ. ಯಾರೂ ಇರಲಿಲ್ಲ. ನಾನೂ ನನ್ನ ಮಿತ್ರ ಖಾನಾಪುರೆಯವರೂ ಒಂದು ಕ್ಷಣ ಬುದ್ಧನ ಮೂರ್ತಿಯೆದುರು ಮೌನವಾಗಿ ನಿಂತೆವು. ಬುದ್ಧನ ಸನ್ನಿಧಿಯಲ್ಲಿ ನಾವು ಭಕ್ತರಂತೆ ಭಾವುಕರಾಗದಿದ್ದರೂ, ಬುದ್ಧನ ಧ್ಯಾನಸ್ಥ ಸ್ಥಿತಿ, ಸುತ್ತಲಿನ ಮೌನ, ನಮ್ಮೊಳಗೆ ಅನಿರ್ವಚನೀಯ ಆನಂದ ತುಂಬಿತ್ತು. ರಾಜತ್ವವನ್ನು ದಾಟಿ ಹೋದ, ಬದುಕಿನ ಕ್ಷಣಭಂಗುರತೆಯನ್ನು ಮನಗಂಡ ಬುದ್ಧನ ಬದುಕು, ವ್ಯಕ್ತಿತ್ವ ನನ್ನ ಮನದೊಳಗೆ ಮತ್ತೆ ಮತ್ತೆ ಸುಳಿದು ಹೋಯಿತು. ಅಧಿಕಾರಕ್ಕಾಗಿ ಏನೆಲ್ಲಾ ಮಾಡುವುದು ಅನಿವಾರ್ಯವೆಂದು ಸಮರ್ಥಿಸಿಕೊಳ್ಳುವ ಬಿಹಾರ ರಾಜಕಾರಣಿಗಳಿಗೆ ಬುದ್ಧನ ವ್ಯಕ್ತಿತ್ವ, ಬೋಧನೆ ತಿಳಿದಂತಿಲ್ಲ ಎನಿಸಿತು. ಗುಡಿಯಿಂದ ಹೊರಬಂದು, ಗುಡಿಯ ಪ್ರಾಂಗಣದಲ್ಲಿ ಒಂದಷ್ಟು ಹೊತ್ತು ಸುತ್ತಾಡಿ ಪಕ್ಕದಲ್ಲೇ ಇರಲು ಬೋಧಿವೃಕ್ಷದ ಬಳಿ ಹೋದೆವು. ಅಲ್ಲೂ ಪೂಜಾರಿಯಿಲ್ಲ. ಜನ ಜಂಗುಳಿಯಲ್ಲಿ, ಮುಪ್ಪು ಎದುರಿಸುತ್ತಿರುವ ಬೋಧಿವೃಕ್ಷದ ಟೊಂಗೆಗಳಗೆ ಆಸರೆಯಾಗಿ

©KTBS Not to be republished

ಕಂಬಗಳನ್ನು ನಿಲ್ಲಿಸಿದ್ದರು. ಬೋಧಿ ವೃಕ್ಷ ಬುದ್ಧನ ಬದುಕಿಗೆ, ಚಿಂತನೆಗೆ ಅಥವಾ ಆತ ಕಂಡ ಕನಸಿಗೆ ಸಾಕ್ಷಿಯಾಗಿ ನಿಂತಂತಿತ್ತು. ಬೋಧಿವೃಕ್ಷಕ್ಕೆ ಅಭಿಮುಖವಾಗಿರುವ ಸ್ಟೆಪ್ಸ್‌ಗಳನ್ನು ಹತ್ತಿ ಮೇಲೆ ಸುತ್ತಾಡಿದೆವು. ಒಬ್ಬ ಬೌದ್ಧ ಭಿಕ್ಷು ಜಪಮಣಿ ಎಣಿಸುತ್ತಾ ಧ್ಯಾನದಲ್ಲಿ ಕೂತಿದ್ದ. ಬುದ್ಧನ ಗುಡಿಯಿಂದ ನಾಕೆಂಟು ಹೆಜ್ಜೆ ದೂರದಲ್ಲಿ ಸುಜಾತ ಪೂಲ್. ಬುದ್ಧನಿಗೆ ಪಾಯಸ ತರುವ ಮುಂಚೆ ಸುಜಾತ ಈ ಪೂಲಿನಲ್ಲಿ ಸ್ನಾನ ಮಾಡುತ್ತಿದ್ದಳಂತೆ. ಬುದ್ಧನ ಗುಡಿ ಹಾಗೂ ಅದರ ಸುತ್ತಮುತ್ತ ತಿರುಗಾಡಿ ಹೊರ ಬಂದಾಗ, ಬುದ್ಧನ ಮೂರ್ತಿ ಮಾರುವ ಹುಡುಗರು ಎದುರಾದರು.

ಅಲ್ಲಿಯವರೆಗೂ ನಾವು ಏನನ್ನೂ ಖರೀದಿಸಿರಲಿಲ್ಲ. ರೇಡಿಯಂನಲ್ಲಿ ಮಾಡಿದ ಬುದ್ಧನ ಮೂರ್ತಿಯೊಂದನ್ನು ಖರೀದಿಸಿದೆ. ಹುಡುಗರು ಕೈಯಲ್ಲಿ ಇನ್ನೂ ಏನೇನೋ ಇದ್ದವು. ಬಿಸಿಲು ಬಲಿಯತೊಡಗಿದ್ದರಿಂದ ಇನ್ನೂ ನೋಡುವುದು ಬಹಳ ಇದೆ ಎಂದು ಮುಂದೆ ಸಾಗಿದೆವು. ದುಬಾರಿ ಖರ್ಚಿನಲ್ಲಿ ನಿರ್ಮಿಸಿದ ಟಿಬೆಟ್, ಚೈನಾ, ಜಪಾನ್ ಬೌದ್ಧ ಮಂದಿರಗಳು ನೋಡಲು ಆಕರ್ಷಕವಾಗಿದ್ದವಾದರೂ ಅವುಗಳ ಥಳಕು ಬಳಕು, ಪ್ರದರ್ಶನ ಚಪಲ ಇತ್ಯಾದಿ ನಮಗೆ ಹಿಡಿಸಲಿಲ್ಲ. "ಅರಮನೆಯನ್ನೇ ಕಾಲಕಸಕ್ಕಿಂತ ಕಡೆಯಾಗಿ ಕಂಡು ಹೊರ ಹೋದವನಿಗೆ ಅರಮನೆಯಂತಹ ಗುಡಿ ಬೇಕೆ?" ಎಂದು ಕೇಳಿಕೊಂಡೆ. ಚೀನಾ, ಜಪಾನ್, ಮಲೇಶಿಯಾಗಳಿಂದ ಹರಿದು ಬರುವ ಯಥೇಚ್ಛ ಹಣ ಬುದ್ಧನನ್ನು 'ಲಗ್ಸುರಿ' ದೇವರನ್ನಾಗಿಸಲು ಯತ್ನಿಸುತ್ತಿರುವುದು, ಎಲ್ಲಕ್ಕಿಂತಲೂ ಮಿಗಿಲಾಗಿ ತಮ್ಮ ಹಣದ ಸಾಮರ್ಥ್ಯವನ್ನು ಮಾರ್ಬಲ್ ಸ್ಟೋನಿನಲ್ಲಿ ಗುಡಿ ಕಟ್ಟಿಸಿ ಪ್ರದರ್ಶಿಸುತ್ತಿರುವುದು ಕಂಡು ಬುದ್ಧ ಕೂಡ ನಕ್ಕಿರಬೇಕು ಎನಿಸಿತು.

ಬೋಧಗಯಾದಲ್ಲಿ ನಮಗೆ ವಿಶೇಷವೆನಿಸಿದ್ದು, ಮೂಲ ಬೌದ್ಧ ಮಂದಿರದಲ್ಲಿಯ ದಿವ್ಯಮೌನ ಹಾಗೂ ಪೂಜಾರಿ, ಏಜೆಂಟರ ಹಾವಳಿ ಇಲ್ಲದೆ ಇರುವುದು. ಉಳಿದಂತೆ ಬೋಧಗಯಾ ಕೂಡ ಮೂಲಭೂತ ಸೌಕರ್ಯ ಪಡೆಯದ ಎಲ್ಲ ಪಟ್ಟಣಗಳ ಹಾಗೆ ಇದೂ ಒಂದು ಪಟ್ಟಣ. ರಿಕ್ಷಾವಾಲಗಳ ಬಸವಳಿದ ಮುಖ, ಅವರ ದೈನೇಸ್ಥಿತಿ, ಹಾದಿಬದಿಯ ಹೋಟೆಲ್‌ನವರ ಪೈಪೋಟಿ, ಗಿರಾಕಿಗಳನ್ನು ತಮ್ಮೆಡೆಗೆ ಸೆಳೆಯಲು ಅವರು ಅಂಗಲಾಚಿ ಬೇಡಿಕೊಳ್ಳುವ ಪರಿ, ಪಾಟ್ನಾದಿಂದ ಬೋಧಗಯಾದವರೆಗೆ ಎಲ್ಲವೂ ಒಂದೇ ತರಹ, ಬೋಧಗಯಾದಲ್ಲಿಯ ಯಾವೊಬ್ಬ ಲೇಖಕನ ವಿಳಾಸವೂ ನಮ್ಮಲ್ಲಿ ಇಲ್ಲದ ಕಾರಣ ನೇರ ಮಗಧ ವಿಶ್ವವಿದ್ಯಾಲಯದ ಹಾದಿ ಹುಡುಕತೊಡಗಿದೆವು.

**ಕೃತಿಕಾರರ ಪರಿಚಯ:**



ಡಾ. ರಾಜಶೇಖರ ಹತಗುಂದಿಯವರು ಕಲಬುರ್ಗಿ ಜಿಲ್ಲೆಯ ಹತಗುಂದಿಯಲ್ಲಿ ೨೬-೧೧-೧೯೬೬ರಂದು ಜನಿಸಿದರು. ಪತ್ರಿಕಾ ರಂಗದಲ್ಲಿ ಸೇವೆ ಸಲ್ಲಿಸುತ್ತಿರುವ ಇವರು 'ಬುದ್ಧನ ನಾಡಿನಲ್ಲಿ' (ಪ್ರವಾಸ ಕಥನ) 'ಕಾಳ ಬೆಳುದಿಂಗಳ ಸಿರಿ' (ಕಥಾ ಸಂಕಲನ) 'ಬಯಲ ಹುಡಿ' ಮತ್ತು 'ಎಡಹೊತ್ತಿನ ಪಯಣ' (ಅಂಕಣ ಬರಹ), ಮುಂತಾದ ಕೃತಿಗಳನ್ನು ಬರೆದಿದ್ದಾರೆ.

'ಬುದ್ಧನ ಸನ್ನಿಧಿಯಲ್ಲಿ ದಿವ್ಯ ಮೌನ' ಗದ್ಯಭಾಗವನ್ನು 'ಬುದ್ಧನ ನಾಡಿನಲ್ಲಿ' ಪ್ರವಾಸ ಕಥನದಿಂದ ಆರಿಸಿಕೊಳ್ಳಲಾಗಿದೆ.

©KTBS Not to be republished

### ಪದಗಳ ಅರ್ಥ

ಅನಿರ್ವಚನೀಯ–ವರ್ಣಿಸಲು ಶಕ್ಯವಲ್ಲದ, ವಿವರಿಸಲಾಗದ; ಯಥೇಚ್ಛ–ಅಧಿಕ, ಹೆಚ್ಚಾದ;
ತಾಸು– ಒಂದು ಗಂಟೆಯ ಅವಧಿ, ಸಮಯ; ಭಂಗುರತೆ–ಕ್ಷಣಿಕವಾದ, ಚಂಚಲವಾದ;
ವಾರಸುದಾರ–ಪಿತ್ರಾರ್ಜಿತ ಆಸ್ತಿಯ ಹಕ್ಕುದಾರ; ಸಜ್ಜು–ತಯಾರಿ, ಸಿದ್ಧತೆ;
ಭಾವುಕ–ಭಾವಜೀವಿ, ಭಾವನೆಗಳಿಗೆ ಒಳಗಾಗುವವ; ಸೋಜಿಗ–ಆಶ್ಚರ್ಯ, ವಿಸ್ಮಯ.

### ಅಭ್ಯಾಸ

**ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

೧. ಲೇಖಕರು ಗೌತಮ ಬುದ್ಧನನ್ನು ತಿಳಿದುಕೊಳ್ಳುವಂತೆ ಮಾಡಿದ ಲೇಖನ ಯಾವುದು?

೨. ಬೋಧಗಯಾದಲ್ಲಿ ಇರುವ ಪವಿತ್ರ ವೃಕ್ಷಯಾವುದು?

೩. ೧೨ನೇ ಶತಮಾನದಲ್ಲಿ ಅತ್ಯಂತ ಪ್ರಗತಿಪರ ಎನಿಸಿದ್ದ ಧರ್ಮ ಯಾವುದು?

೪. ಫಲ್ಗು ನದಿ ಹೇಗಿತ್ತು?

೫. ಲೇಖಕರು ಮಗಧ ವಿಶ್ವವಿದ್ಯಾಲಯದ ಹಾದಿಯನ್ನು ಹುಡುಕತೊಡಗಿದ್ದೇಕೆ?

**ಆ) ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎರಡು ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

೧. ಲೇಖಕರ ತಲೆಯಲ್ಲಿ ಸುಳಿದಾಡುತ್ತಲೇ ಇದ್ದ ಪ್ರಶ್ನೆ ಯಾವುದು?

೨. ಲೇಖಕರು ಅಂದುಕೊಂಡಿದ್ದಕ್ಕಿಂತ ಗಯಾದ ಸ್ಥಿತಿ ಹೇಗೆ ಭಿನ್ನವಾಗಿತ್ತು?

೩. ಬುದ್ಧನ ಸನ್ನಿಧಿಯಲ್ಲಿ ಲೇಖಕರ ಮನಸ್ಸಿನಲ್ಲಿ ಮೂಡಿದ ಭಾವನೆಗಳಾವುವು?

೪. ಬುದ್ಧನ ಗುಡಿಯಲ್ಲಿ ಲೇಖಕರಿಗೆ ಸೋಜಿಗವನ್ನುಂಟು ಮಾಡಿದ ಸಂಗತಿಗಳಾವುವು?

೫. ಬುದ್ಧ ಕೂಡ ನಕ್ಕಿರಬೇಕೆಂದು ಲೇಖಕರಿಗೆ ಅನ್ನಿಸಲು ಕಾರಣವೇನು?

೬. ಬೋಧಗಯಾದಲ್ಲಿ ಲೇಖಕರಿಗೆ ವಿಶೇಷವೆನಿಸಿದ್ದು ಯಾವುದು?

**ಇ) ಕೆಳಗಿನ ಬಿಟ್ಟ ಸ್ಥಳಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.**

೧. ಬುದ್ಧನಿಗೆ ಪಾಯಸ ತರುವ ಮುಂಚೆ ಸುಜಾತ ಸ್ನಾನ ಮಾಡುತ್ತಿದ್ದ ಕೊಳ --------

ಅ) ಬೋಧಿ ವೃಕ್ಷಪೂಲ್ ಕ) ಬೋಧಗಯಾ ಪೂಲ್

ಬ) ಸುಜಾತ ಪೂಲ್ ಡ) ಭಿಕ್ಷು ಪೂಲ್

©KTBS Not to be republished

೨. ದುಬಾರಿ ಖರ್ಚಿನ ಬೌದ್ಧ ಮಂದಿರಗಳನ್ನು ಕಟ್ಟಲು ಬಳಸಿರುವ ಕಲ್ಲು ---------

ಅ) ಗ್ರಾನೈಟ್ ಸ್ಟೋನ್ ಕ) ಮಾರ್ಬಲ್ ಸ್ಟೋನ್

ಬ) ಕಡಪಾ ಸ್ಟೋನ್ ಡ) ಲಿಗ್ನೈಟ್ ಸ್ಟೋನ್

೩. ಬೋಧಗಯಾ ಇರುವುದು ---------

ಅ) ಮಧ್ಯಪ್ರದೇಶದಲ್ಲಿ ಕ) ಉತ್ತರಪ್ರದೇಶದಲ್ಲಿ

ಬ) ಒರಿಸ್ಸಾದಲ್ಲಿ ಡ) ಬಿಹಾರಿನಲ್ಲಿ

೪. ಬುದ್ಧನ ಬದುಕು, ಚಿಂತನೆ ಹಾಗೂ ಕಂಡ ಕನಸಿಗೆ ಸಾಕ್ಷಿಯಾಗಿ ಗಯಾದಲ್ಲಿ ನಿಂತಂತಿರುವುದು ---------

ಅ) ಬೌದ್ಧ ದೇವಾಲಯ ಕ) ಬೌದ್ಧ ವಿಹಾರ

ಬ) ಬುದ್ಧನ ಅರಮನೆ ಡ) ಬೋಧಿವೃಕ್ಷ

**ಭಾಷಾಭ್ಯಾಸ**

**ಅ) ಕೆಳಗಿನ ಪದಗಳನ್ನು ಬಿಡಿಸಿ ಬರೆದು, ಸಂಧಿಯ ಹೆಸರನ್ನು ತಿಳಿಸಿರಿ.**

೧) ವಿಶ್ವವಿದ್ಯಾಲಯ ೨) ಕೈಯಲ್ಲಿ ೩) ಯಥೇಚ್ಛ ೪) ಜ್ಞಾನೋದಯ ೫) ಅತ್ಯಂತ.

**ಆ) ಕೆಳಗಿನ ವಾಕ್ಯಗಳಲ್ಲಿನ ಖಾಲಿಜಾಗವನ್ನು ಕೆಳಗೆ ಕೊಟ್ಟಿರುವ ದ್ವಿರುಕ್ತಿ ಮತ್ತು ನುಡಿಗಟ್ಟುಗಳಲ್ಲಿ ಸರಿಯಾದವುಗಳನ್ನು ಆರಿಸಿ ಭರ್ತಿ ಮಾಡಿರಿ.**

೧. ಶಾಲೆಯಿಂದ-----------ಮುಂದೆ ಹೋದರೆ ಆಟದ ಮೈದಾನ ಸಿಗುತ್ತದೆ.

೨. ಮನನವಾಗುವವರೆಗೂ ವಿದ್ಯಾರ್ಥಿಗಳು--------- ಓದುತ್ತಿರಬೇಕು.

೩. ಕತ್ತಲಿನಲ್ಲಿ ಮಿಂಚು ಹುಳುಗಳು----------ಮಿಂಚುತ್ತವೆ.

೪. ಪರೀಕ್ಷೆಯ ಕೊನೆಯಲ್ಲಿ ಎಲ್ಲಾ ಉತ್ತರಗಳನ್ನು ಒಮ್ಮೆ----------ಎಂದು ಶಿಕ್ಷಕರು ಶಿಷ್ಯನಿಗೆ ಹೇಳಿದರು.

೫. ಯೋಗಿಗಳು ಆಸ್ತಿ ಅಧಿಕಾರಗಳನ್ನು---------ಆಗಿ ಕಾಣುತ್ತಾರೆ.

೬. ಗುರುಗಳು ಮುಂದಿನ ತರಗತಿಯಲ್ಲಿ--------ಮಾಡಬೇಕೆಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

[ನಾಕೆಂಟು ಹೆಜ್ಜೆ, ಮತ್ತೆ ಮತ್ತೆ, ನೆಲೆ ಕಳೆದುಕೊ, ಮಿಣಿಮಿಣಿ, ಕಣ್ಣಾಡಿಸು, ಕಾಲಕಸಕ್ಕಿಂತ ಕಡೆ, ಏನೇನು.]

©KTBS Not to be republished

## ಭಾಷಾ ಚಟುವಟಿಕೆ


**ಅ) ನೀವು ಕೈಗೊಂಡ ಪ್ರವಾಸದ ಅನುಭವಗಳನ್ನು ಕುರಿತು, ನಿಮ್ಮ ಗೆಳೆಯ ಅಥವಾ ಗೆಳತಿಗೆ ಒಂದು ಪತ್ರ ಬರೆಯಿರಿ.**

ಅ) ನಿಮ್ಮ ಜಿಲ್ಲೆಯ ಯಾವುದಾದರೊಂದು ಪ್ರವಾಸಿ ತಾಣದ ಬಗೆಗೆ ಒಂದು ಪ್ರಬಂಧ ಬರೆಯಿರಿ.

ಬ) ಪ್ರವಾಸದಿಂದ ಆಗುವ ಪ್ರಯೋಜನಗಳ ಕುರಿತು, ನಿಮ್ಮ ತರಗತಿಯಲ್ಲಿ ಸ್ನೇಹಿತರ ಗುಂಪಿನಲ್ಲಿ ಚರ್ಚಿಸಿ.

ಕ) ಕರ್ನಾಟಕ ಪ್ರವಾಸೋದ್ಯಮ ಇಲಾಖೆಯ ಕಾರ್ಯಗಳನ್ನು ಕೇಳಿ ತಿಳಿಯಿರಿ.

ಡ) ಇಲ್ಲಿ ಕೊಟ್ಟಿರುವ ಸುಳಿವುಗಳನ್ನು ಗಮನಿಸಿ, ಪದಬಂಧವನ್ನು ಪೂರ್ತಿ ಮಾಡಿ.




**ಸುಳಿವುಗಳು**

**ಮೇಲಿನಿಂದ ಕೆಳಗೆ**

೧. ನೀರಿನಿಂದ ಸುತ್ತುವರಿದ ಭೂಭಾಗ (೨)

೩. ನೋಡುವ ಆತುರ (೩)

೫. ತಿಂಡಿ ಇಡುವ ಪುಟ್ಟ ಪೆಟ್ಟಿಗೆ (೨)

**ಎಡದಿಂದ ಬಲಕ್ಕೆ**

೨. ದೊಡ್ಡದಾದ ಬೆಟ್ಟ (೩)

೪. ಸಮುದ್ರವನ್ನು ಹೀಗೂ ಕರೆಯುವರು (೩)

## ವ್ಯಾಕರಣ

**ಪತ್ರಲೇಖನ**

ಪತ್ರ ವ್ಯವಹಾರವು ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿರುವ ಜನಪ್ರಿಯ ಸಂಪರ್ಕ ಸಾಧನವಾಗಿದೆ. ಪತ್ರಗಳನ್ನು ಸಾಮಾನ್ಯವಾಗಿ ಎರಡು ಬಗೆಗಳಾಗಿ ವಿಂಗಡಿಸಲಾಗುತ್ತದೆ.

೧) ವೈಯಕ್ತಿಕ ಪತ್ರ : ಖಾಸಗಿಪತ್ರ, ಯೋಗಕ್ಷೇಮ ಪತ್ರ ಅಥವಾ ಅನೌಪಚಾರಿಕ ಪತ್ರಗಳು.

೨) ವ್ಯಾವಹಾರಿಕ ಪತ್ರ : ಔಪಚಾರಿಕ ಪತ್ರಗಳು ಅಥವಾ ಮನವಿ ಪತ್ರಗಳು.

©KTBS Not to be republished

ಪತ್ರವನ್ನು ಬರೆಯುವಾಗ ಮುಖ್ಯ ವಿಳಾಸಗಳು(ಒಳವಿಳಾಸ, ಹೊರವಿಳಾಸ) ಸಂಬೋಧನೆ, ವಿಷಯ, ಒಡಲು ಮತ್ತು ಮುಕ್ತಾಯ ಈ ಐದು ಅಂಶಗಳನ್ನು ಗಮನಿಸಲೇಬೇಕು.

**ಪತ್ರದಲ್ಲಿ ಆರಂಭದ ಸಂಬೋಧನೆ/ಒಕ್ಕಣೆ**

೧) ಗುರುಗಳಿಗೆ – ಪೂಜ್ಯಗುರುಗಳೇ, ನಮಸ್ಕಾರಗಳು

೨) ತಂದೆಯವರಿಗೆ – ಪ್ರೀತಿಯ ತಂದೆಯರಿಗೆ, ನಮಸ್ಕಾರಗಳು

೩) ತಾಯಿಗೆ – ಪ್ರೀತಿಯ ತಾಯಿಯವರಿಗೆ, ನಮಸ್ಕಾರಗಳು

೪) ತಮ್ಮ/ತಂಗಿ – ಪ್ರೀತಿಯ ತಮ್ಮ/ತಂಗಿಗೆ, ಶುಭಾಶೀರ್ವಾದಗಳು

೫) ಅಕ್ಕ/ಅಣ್ಣ – ಪ್ರೀತಿಯ ಅಣ್ಣ/ಅಕ್ಕನವರಿಗೆ, ನಮಸ್ಕಾರಗಳು

೬) ಗೆಳೆಯ/ತಿ – ಪ್ರೀತಿಯ ಗೆಳೆಯ/ಗೆಳತಿ, ನಮಸ್ಕಾರಗಳು

೭) ಅಧಿಕಾರಿಗಳಿಗೆ – ಮಾನ್ಯರೆ

**ಮುಕ್ತಾಯದ ಗೌರವ ಸಂಬೋಧನೆ**

೧) ತಂದೆ, ತಾಯಿ, ಹಿರಿಯರಿಗೆ – ನಮ್ಮಸ್ಕಾರಗಳು ತಮ್ಮ ಪ್ರೀತಿಯ ಮಗ/ಮಗಳು

೨) ಕಿರಿಯರಿಗೆ – ಆಶೀರ್ವಾದಗಳು ತಮ್ಮ ಪ್ರೀತಿಯ.....

೩) ಗೆಳಯ/ತಿ – ವಂದನೆಗಳು, ನಿನ್ನ ಪ್ರೀತಿಯ ಗೆಳೆಯ/ಗೆಳತಿ

೪) ಅಧಿಕಾರಿಗಳಿಗೆ – ವಂದನೆಗಳು, ತಮ್ಮ ವಿಶ್ವಾಸಿ

೫) ಗುರುಗಳಿಗೆ – ನಮ್ಮಸ್ಕಾರಗಳು ತಮ್ಮ ವಿಧೇಯ ವಿದ್ಯಾರ್ಥಿ/ ವಿದ್ಯಾರ್ಥಿನಿ

**ದೇಶ ಸುತ್ತು – ಕೋಶ ಓದು**

©KTBS Not to be republished

## ಪತ್ರಗಳ ಮಾದರಿ

**(೧) ವೈಯಕ್ತಿಕ ಪತ್ರ**

### ತಂದೆಗೆ ಪತ್ರ

ಇವರಿಂದ, ದಿನಾಂಕ ------------

ಹೆಸರು____________________

ಮನೆ ನಂಬರ್ / ಮನೆ ಹೆಸರು ------

ಎರಡನೇ ಮುಖ್ಯ ರಸ್ತೆ

ಬಡಾವಣೆ ಹೆಸರು ------

ಊರಿನ ಹೆಸರು ------

ಪ್ರೀತಿಯ ತಂದೆಯವರಿಗೆ ನಿಮ್ಮ ಮಗ/ಮಗಳು ಮಾಡುವ ನಮಸ್ಕಾರಗಳು

------------------------------------------------------------

------------------------------------------------------------

------------------------------------------------------------

------------------------------------------------------------

------------------------------------------------------------

ಇತಿ ನಮಸ್ಕಾರಗಳು

ನಿಮ್ಮ ಪ್ರೀತಿಯ ಮಗಳು

ಸಹಿ/ ದಿನಾಂಕ

(ಹೆಸರು)

ಇವರಿಗೆ,

ಹೆಸರು ------

ಮನೆ ನಂಬರ್ / ಮನೆ ಹೆಸರು ----

ಎರಡನೇ ಮುಖ್ಯ ರಸ್ತೆ

ಬಡಾವಣೆ ಹೆಸರು ------

ಊರಿನ ಹೆಸರು-ಪಿನ್ ಕೋಡ್

©KTBS Not to be republished

## (೨) ವ್ಯಾವಹಾರಿಕ ಪತ್ರ

**ಇವರಿಂದ,** ದಿನಾಂಕ :

ಹೆಸರು ಸ್ಥಳ :

ತರಗತಿ ಮತ್ತು ವಿಭಾಗ
ಶಾಲೆಯ ಹೆಸರು ------
ಅಡ್ಡರಸ್ತೆ, ಮುಖ್ಯರಸ್ತೆ,
ಬಡಾವಣೆ ಹೆಸರು ------
ಊರಿನ ಹೆಸರು ------

**ಇವರಿಗೆ,**

ಮುಖ್ಯೋಪಾಧ್ಯಾಯರಿಗೆ
ಶಾಲೆಯ ಹೆಸರು ------
ಅಡ್ಡರಸ್ತೆ, ಮುಖ್ಯರಸ್ತೆ,
ಬಡಾವಣೆ ಹೆಸರು ------
ಊರಿನ ಹೆಸರು ------

ಪೂಜ್ಯ ಗುರುಗಳೇ,

ವಿಷಯ :

------------------------------------------------------------

------------------------------------------------------------

------------------------------------------------------------

------------------------------------------------------------

------------------------------------------------------------

------------------------------------------------------------

------------------------------------

ವಂದನೆಗಳೊಂದಿಗೆ,

ತಮ್ಮ ವಿಧೇಯ ವಿದ್ಯಾರ್ಥಿ/ ವಿದ್ಯಾರ್ಥಿನಿ,

ಸಹಿ

(ಹೆಸರು)

***


©KTBS Not to be republished

# ೧೧. ನಿರೀಕ್ಷೆ

**– ಡಿ. ಎಸ್. ವೀರಯ್ಯ**

**ಪ್ರವೇಶ :** ಸಮಾಜದಲ್ಲಿ ಮೇಲು–ಕೀಳು, ಬಡವ–ಬಲ್ಲಿದ ಎಂಬಂತಹ ಅಸಮಾನತೆಗಳು ಇಂದಿಗೂ ಕಂಡುಬರುತ್ತವೆ. ಇಂತಹ ಅಸಮಾನತೆಗಳನ್ನು ಹೋಗಲಾಡಿಸಲು ದಾರ್ಶನಿಕರು, ಶರಣರು, ಸಾಧುಗಳು ಮತ್ತು ಸಂತರು ನಿರಂತರವಾಗಿ ಶ್ರಮಿಸಿದ್ದಾರೆ. "ದಯವಿಲ್ಲದ ಧರ್ಮ ಅದಾವುದಯ್ಯ ದಯವೇ ಬೇಕು ಸಕಲ ಪ್ರಾಣಿಗಳಲ್ಲಿ"– ಎಂಬ ಬಸವಣ್ಣನವರ ಮಾತು ಅಕ್ಷರಶಃ ಸತ್ಯವಾಗಿದೆ. ಪ್ರೀತಿ, ಪ್ರೇಮ, ತಾಳ್ಮೆ, ಸಮಾನತೆ, ಇವುಗಳನ್ನು ಇಂದು ನಾವು ಅಳವಡಿಸಿಕೊಂಡಾಗಲೇ ಮಾನವೀಯತೆಯನ್ನು ಕಾಣಲು ಸಾಧ್ಯವಾಗುತ್ತದೆ. 'ನಿರೀಕ್ಷೆ' ಪದ್ಯದಲ್ಲಿ ಕವಿ ಪ್ರಚಲಿತ ಸಮಾಜದಲ್ಲಿ ಕಂಡುಬರುತ್ತಿರುವ ತಾರತಮ್ಯ ಹೋಗಲಾಡಿಸಲು ಸಮಾನತೆಯ ದಿನಗಳು ಎಂದು ಬರುವವೊ ಎಂದು ಪರಿಪರಿಯಾಗಿ ಹಂಬಲಿಸಿದ್ದಾರೆ.

ಪ್ರೀತಿಯ ಗುಣಿ ತೆಗೆದು
ಪ್ರೇಮದ ಪಾತಿಯ ಮಾಡಿ
ನೀತಿಯ ಬೀಜವ ಬಿತ್ತಿ
ವಾತ್ಸಲ್ಯದ ಫಲವ ಪಡೆವ
ದಿನಗಳೆಂದು ಬರುವವೋ ॥೧॥



ಹರಿವ ನೀರು ಇರುವ ನೆಲ
ಸುಳಿವ ಗಾಳಿ ಉಣ್ಣುವನ್ನ
ತೊಡುವ ಬಟ್ಟೆ ಸುಡುವ ಬೆಂಕಿ
ಎಲ್ಲರಿಗೂ ಒಂದೇ ಎಂಬ
ದಿನಗಳೆಂದು ಬರುವವೋ ॥೨॥

ದ್ವೇಷಾಸೂಯೆಗಳ ಬಂಡೆಯನ್ನು
ತಾಳ್ಮೆಯ ಸಿಡಿಮದ್ದು ಹಾಕಿ
ಸಿಡಿಸಿ ತೆಗೆದ ಸಹೋದರತೆಯ
ಸಸಿಗಳನ್ನು ಕಾಣುವಂಥ
ದಿನಗಳೆಂದು ಬರುವವೋ ॥೩॥


ಅಸಮಾನತೆಯ ಕಡಲಿನಲ್ಲಿ
ಸಮಾನತೆಯ ದೋಣಿ ಬಿಟ್ಟು
ತೇಲುತ ದಡ ಸೇರಿಕೊಂಡು
ಸಾರ್ಥಕತೆಯ ಪಡೆಯುವ
ದಿನಗಳೆಂದು ಬರುವವೋ ॥೪॥

©KTBS Not to be republished

ಜ್ಞಾನದ ಕಾರಂಜಿಯಲ್ಲಿ
ಅಜ್ಞಾನದ ಕೊಳೆಯ ತೊಳೆದು
ಜಾತಿಯ ವಿಷ ವೃಕ್ಷವನ್ನು
ಬೇರು ಸಹಿತ ಕಿತ್ತು ತೆಗೆವ
ದಿನಗಳೆಂದು ಬರುವವೋ ॥೫॥

ರಕ್ತ ಬೀಜಾಸುರರ ಸಂತೆಯಲ್ಲಿ
ಗೊಡ್ಡು ಮೌಢ್ಯಗಳ ನಾಶ ಮಾಡಿ
ಹಿಂಸೆಯ ರಕ್ತ ಅಳಿಸಿ
ಅಹಿಂಸೆಯ ಕಂದನೆತ್ತಿ ಮಾನವತೆಯ ಸಾರುವ
ದಿನಗಳೆಂದು ಬರುವವೋ ॥೬॥

**ಕೃತಿಕಾರರ ಪರಿಚಯ :**



ಕೋಲಾರದವರಾದ ಡಿ.ಎಸ್. ವೀರಯ್ಯ ಇವರು ೧೯೫೦ ಜನವರಿ ೨ರಂದು ಜನಿಸಿದರು. ಸಾಮಾಜಿಕ ಕಾರ್ಯಕರ್ತರಾಗಿ, ವಕೀಲರಾಗಿ, ಬರಹಗಾರರಾಗಿ, ಪತ್ರಕರ್ತರಾಗಿ, ರಾಜಕಾರಣಿಯಾಗಿ ಪ್ರಸಿದ್ಧರು. **'ಗೆರೆಗಳು'**, **'ಬೇರುಗಳು'** **'ಕೂಡಲುಸ್ವಾಮಿ'**, **'ದಲಿತ ಚಿಂತನೆ'** ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಸಮಾಜರತ್ನ, ಬುದ್ಧರತ್ನ, ಬೆಂಗಳೂರು ರತ್ನ, ಸರ್. ಎಂ. ವಿಶ್ವೇಶ್ವರಯ್ಯ ಪ್ರಶಸ್ತಿಗಳು ದೊರಕಿವೆ. **'ನಿರೀಕ್ಷೆ'** ಕವನವನ್ನು ಶ್ರೀಯುತರ **'ಬೇರುಗಳು'** ಎಂಬ ಕವನ ಸಂಕಲನದಿಂದ ಆರಿಸಲಾಗಿದೆ.

**ಪದಗಳ ಅರ್ಥ**

ಅಸುರ–ರಾಕ್ಷಸ;
ಅಳಿಸು–ನಾಶಪಡಿಸು;
ಉಣ್ಣು–ಊಟ ಮಾಡು;
ಕಂದ–ಮಗು;
ಕಾರಂಜಿ–ಚಿಲುಮೆ;
ಗುಣಿ–ತಗ್ಗು, ಗುಂಡಿ;
ಗೊಡ್ಡು–ನಿಷ್ಫಲ;
ತೊಡು–ಧರಿಸು;
ದಡ–ದಂಡೆ;
ಫಲ–ಲಾಭ, ಬೆಳೆ;
ಮೌಢ್ಯ–ತಿಳಿಗೇಡಿತನ, ದಡ್ಡತನ;
ವಾತ್ಸಲ್ಯ–ಪ್ರೀತಿ;
ವೃಕ್ಷ–ಮರ.

©KTBS Not to be republished

## ಟಿಪ್ಪಣಿ

**ಪಾತಿ –** ಗಿಡದ ಸುತ್ತಲೂ ನೀರು ಹರಿಸಲು ಮಾಡಿರುವ ಮಡಿ.

**ರಕ್ತಬೀಜಾಸುರ –** ಒಬ್ಬ ರಾಕ್ಷಸ. ಪರಮೇಶ್ವರನನ್ನು ತಪಸ್ಸಿನಿಂದ ಮೆಚ್ಚಿಸಿ, ತನ್ನ ದೇಹದಿಂದ ಬಿದ್ದ ಒಂದೊಂದು ತೊಟ್ಟು ರಕ್ತದಿಂದ ತನ್ನಷ್ಟೇ ಬಲಶಾಲಿಯಾದ ಒಬ್ಬ ರಾಕ್ಷಸ ಹುಟ್ಟುವಂತೆ ವರ ಪಡೆದವ.

**ಸಿಡಿಮದ್ದು –** ಬಂಡೆಗಳನ್ನು ಒಡೆಯಲು ಬಳಸುವ ಸ್ಫೋಟಕ ವಸ್ತು .

## ಅಭ್ಯಾಸ

**ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ವಾತ್ಸಲ್ಯದ ಫಲವನ್ನು ಹೇಗೆ ಪಡೆಯಬೇಕೆಂದು ಕವಿ ಬಯಸಿದ್ದಾರೆ?

೨. ದ್ವೇಷ ಅಸೂಯೆಗಳ ಬಂಡೆಯನ್ನು ಯಾವುದರಿಂದ ಸಡಿಲಿಸಬೇಕೆಂದು ಕವಿ ಹೇಳಿದ್ದಾರೆ?

೩. ಅಸಮಾನತೆಯ ಕಡಲಿನಲ್ಲಿ ಎಂತಹ ದೋಣಿ ಸಾಗಬೇಕಾಗಿದೆ?

೪. ಜ್ಞಾನದ ಕಾರಂಜಿಯಲ್ಲಿ ಯಾವ ಕೊಳೆ ತೊಳೆಯಬೇಕಾಗಿದೆ?

೫. ಗೊಡ್ಡು ಮೌಢ್ಯಗಳನ್ನು ಯಾವ ಸಂತೆಯಲ್ಲಿ ನಾಶಮಾಡಬೇಕೆಂದು ಕವಿ ಆಶಿಸಿದ್ದಾರೆ?

**ಆ) ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಕವಿ ಯಾವ ಯಾವ ಮೌಲ್ಯಗಳಿಂದ ಕೂಡಿದ ದಿನಗಳಿಗಾಗಿ ಕಾಯುತ್ತಿದ್ದಾರೆ?

೨. ಸೃಷ್ಟಿಯಲ್ಲಿ ಎಲ್ಲರಿಗೂ ಸಮಾನವಾಗಿರುವ ಅಂಶಗಳಾವುವು?

೩. ಸಾರ್ಥಕತೆಯನ್ನು ಪಡೆಯುವ ಬಗೆಯನ್ನು ಕವಿ ಹೇಗೆ ಹೇಳಿದ್ದಾರೆ?

೪. ಜಾತಿಯ ವಿಷವೃಕ್ಷ ತೆಗೆಯುವುದಕ್ಕೆ ಕವಿಯ ಸಲಹೆ ಏನು?

೫. 'ನಿರೀಕ್ಷೆ' ಪದ್ಯದ ನಾಲ್ಕನೆಯ ಮತ್ತು ಐದನೆಯ ನುಡಿಯ ಭಾವಾರ್ಥವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

೬. ಸೋದರತೆಯ ಸಸಿಯನ್ನು ಹೇಗೆ ಕಾಣಬೇಕೆಂದು ಕವಿ ಬಯಸಿದ್ದಾರೆ?

**ಇ) ಪದ್ಯದ ಸಾಲುಗಳನ್ನು ಪೂರ್ಣ ಮಾಡಿ ಬರೆಯಿರಿ.**

ಹರಿವ ನೀರು –––––––

–––––––––––––––

–––––––––––––––

–––––––––––––––

––––––––– ಬರುವವೋ

©KTBS Not to be republished

ದ್ವೇಷಾಸೂಯೆಗಳ ------

-----------------

-----------------

-----------------

------------ ಬರುವವೋ

## ಭಾಷಾಭ್ಯಾಸ

**ಅ. ಕೆಳಗಿನ ಪದಗಳ ಅರ್ಥವನ್ನು ನಿಘಂಟಿನ ಸಹಾಯದಿಂದ ಬರೆಯಿರಿ.**

ನೀತಿ, ದ್ವೇಷ, ಅಸೂಯೆ, ತಾಳ್ಮೆ, ತೇಲು.

**ಆ. ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.**

ಅಸಮಾನತೆ, ಅಜ್ಞಾನ, ಹಿಂಸೆ, ನೀತಿ.

**ಇ. ತತ್ಸಮ-ತದ್ಭವ ಬರೆಯಿರಿ.**

ಸಂತೆ, ದ್ವೇಷ, ರಕ್ತ, ವಿಷ.

## ಭಾಷಾ ಚಟುವಟಿಕೆ

**ಅ.** ಕೆಳಗಿನ ಪದಗಳ ಉಚ್ಚಾರಣೆಯನ್ನು ಗುರುಗಳಿಂದ ಕೇಳಿ ತಿಳಿದು ನೀವೂ ಉಚ್ಚರಿಸಿ, ಹಾಗೆಯೇ ತಪ್ಪಿಲ್ಲದಂತೆ ಬರೆಯಿರಿ.

ದ್ವೇಷಾಸೂಯೆ, ತಾಳ್ಮೆ, ಅಜ್ಞಾನ, ಮೌಢ್ಯ, ಉತ್ಸವ, ಪುಷ್ಪ, ವಾತ್ಸಲ್ಯ.

ಆ. ಸಮಾಜದಲ್ಲಿ ಕಂಡುಬರುವ ಮೇಲು-ಕೀಳು, ಬಡವ-ಬಲ್ಲಿದ ಎಂಬ ಅಸಮಾನತೆಯ ಕುರಿತು ಮಿತ್ರರ ಜೊತೆಗೆ ಅಭಿಪ್ರಾಯ ಹಂಚಿಕೊಳ್ಳಿರಿ.

ಇ. 'ನಿರೀಕ್ಷೆ' ಪದ್ಯದ ಮೊದಲ ಮತ್ತು ಕೊನೆಯ ನುಡಿಗಳನ್ನು ಕಂಠಪಾಠ ಮಾಡಿರಿ.

ಈ. ಸಮಾನತೆಯ ಸಂದೇಶ ಸಾರುವ ಬಸವಣ್ಣನವರ ವಚನಗಳನ್ನು ಸಂಗ್ರಹಿಸಿ ಓದಿರಿ.

*****

©KTBS Not to be republished

# ೧೨. ನನ್ನ ಟೋಪಿ

**– ಬಿ. ಜಿ. ಎಲ್. ಸ್ವಾಮಿ**

**ಪ್ರವೇಶ :** ಪ್ರಪಂಚದ ಯಾವ ಭಾಗಕ್ಕೆ ಹೋದರೂ ಮನುಷ್ಯನ ಸ್ವಭಾವ ಒಂದೇ. ಲೇಖಕರಾದ ಬಿ.ಜಿ.ಎಲ್. ಸ್ವಾಮಿಯವರು ಅಮೆರಿಕಾ ದೇಶಕ್ಕೆ ಭೇಟಿ ಕೊಟ್ಟಾಗ ತಮಗಾದ ಅನುಭವಗಳನ್ನು ಹಾಸ್ಯಪೂರ್ಣವಾಗಿ ತಿಳಿಸಿದ್ದಾರೆ. ಅವರ ಟೋಪಿಯ ಸ್ವಾರಸ್ಯಕರ ಪ್ರಸಂಗವಿದು.



©KTBS Not to be republished

ಮೊದಲನೆಯ ವರ್ಷದ ಹುಟ್ಟಿದ ಹಬ್ಬಕ್ಕೆ ತಲೆಗೊಂದು ಸೂರು; ಚೌಲಕ್ಕೆ ತಲೆಗೊಂದು ಸೂರು; ಮುಂಜಿಯಲ್ಲಿ ತಲೆಗೊಂದು ಸೂರು; ಕ್ಲಾಸಿಗೆ ಹೋಗುವಾಗ ತಲೆಗೊಂದು ಸೂರು; ಕಚೇರಿಗೆ ಹೋಗುವಾಗ ತಲೆಗೊಂದು ಸೂರು; ಮದುವೆಯಾಗುವಾಗ ತಲೆಗೊಂದು ಸೂರು; ಚಿಕ್ಕವರು ದೊಡ್ಡವರನ್ನು ನೋಡಲು ಹೋದಾಗ ತಲೆಗೊಂದು ಸೂರು; ದೊಡ್ಡವರು ಒಬ್ಬರನ್ನೊಬ್ಬರು ಕಾಣಲು ಹೋದಾಗ ತಲೆಗೊಂದು ಸೂರು; ಶುಭ ಕಾರ್ಯಗಳಲ್ಲಿ ಭಾಗವಹಿಸುವಾಗ ತಲೆಗೊಂದು ಸೂರು. ಹೀಗಾಗಿ ಹುಟ್ಟಿದಾರಭ್ಯ ನಮ್ಮ ಪಾಲಿಗೆ ತಲೆ ತೊಡುಗೆ ಅಂಟಿಕೊಂಡುಬಿಟ್ಟಿದೆ. ಸೂರಿನ ರೂಪ ತಲೆತಲಾಂತರದಿಂದಲೂ ಎಷ್ಟು ಮಾರ್ಪಾಟು ಹೊಂದಿದ್ದರೂ, ಸಂಪ್ರದಾಯ ಉಳಿದುಕೊಂಡೇ ಬಂದಿದೆ. ತಲೆ ತೊಡುಗೆಯ ನಂಟು ಹಿಂದೂ ಜನಾಂಗಕ್ಕೆ ಮಾತ್ರ ಸೇರಿದ್ದಲ್ಲ. ಪ್ರಪಂಚದ ನೂರಾರು ಸಂಸ್ಕೃತಿಗಳ ಚರಿತ್ರೆಯಲ್ಲೂ ಇದರ ಪ್ರಭಾವ ಕಂಡುಬಂದೇ ಬರುತ್ತದೆ. ಯಾವ ನಾಗರಿಕ ಜನಾಂಗವನ್ನು ನೋಡಿದರೂ ಅವರದೇ ಒಂದು ಮಾದರಿಯ ತಲೆ ತೊಡುಗೆ ಇದ್ದೇ ಇರುತ್ತದೆ. ಅದನ್ನು ಧರಿಸುವ ರೀತಿ ನೀತಿಗಳಿಗೆ ಅವರವರದೇ ಆದ ಸಂಪ್ರದಾಯಗಳೂ ಇವೆ.

ನಮ್ಮಲ್ಲಿ ಗುಡಿಗೆ ಹೋದೊಡನೆಯೇ ತಲೆಯ ಮೇಲಿನ ತೊಡುಗೆಯನ್ನು ತೆಗೆಯುವ ಪದ್ಧತಿ ಕೆಲವರಲ್ಲುಂಟು. ಅಮೆರಿಕನ್ನರು ಚರ್ಚಿಗೆ ಹೋದಾಗ ಗಂಡಸರು ಮಾತ್ರ ತೆಗೆಯುತ್ತಾರೆ. ಆದರೆ ಹೆಂಗಸರು ಹ್ಯಾಟು ಧರಿಸದೆ ಚರ್ಚಿಗೆ ಹೋಗಿ ಪ್ರಾರ್ಥನೆಯಲ್ಲಿ ಭಾಗವಹಿಸುವುದು ಅವಮರ್ಯಾದೆ. ನಮ್ಮಲ್ಲಿ ಹಿರಿಯರನ್ನು ಕಾಣಲು ಹೋದಾಗ– ಬೀದಿಯಲ್ಲೆಲ್ಲ ಬರಿತಲೆಯಲ್ಲಿ ಓಡಾಡಿದರೂ ಅವರೆದುರಿಗೆ ಹೋಗುವ ಮುನ್ನ ಕಿಸೆಯಲ್ಲಿ ಸೆಕ್ಕಿಕೊಂಡಿರುವ ಟೋಪಿಯನ್ನು ಧರಿಸಿಕೊಂಡು ನಮ್ರತೆಯಿಂದ ನಮಸ್ಕರಿಸಬೇಕು. ಇದು ನಮ್ಮ

ಸಂಪ್ರದಾಯಕ್ಕನುಗುಣವಾದ ಮರ್ಯಾದೆ. ಅವರಲ್ಲಿ, ಧರಿಸಿಕೊಂಡಿದ್ದ ಹ್ಯಾಟನ್ನು ದೊಡ್ಡವರ ಸನ್ನಿಧಾನದಲ್ಲಿ ತಲೆಯ ಮೇಲಿಂದ ತೆಗೆದು ಬಗ್ಗಿ ವಂದಿಸಬೇಕು. ಇದು ಅವರ ಸಂಪ್ರದಾಯಕ್ಕನುಗುಣವಾದ ಮರ್ಯಾದೆ. ಮನೆ, ಕಟ್ಟಡ ಮೊದಲಾದವುಗಳ ಒಳಕ್ಕೆ ಹೋದಾಗ ನಮ್ಮಲ್ಲಿ ತಲೆತೊಡುಗೆಯನ್ನೇನು ತೆಗೆಯಬೇಕಾಗಿಲ್ಲ. ಆದರೆ ಅವರಲ್ಲಿ ಈ ನಡತೆ ತುಂಬ ಅಪೇಕ್ಷಣೀಯ. ಮನೆಯೊಳಕ್ಕೆ ಪ್ರವೇಶಿಸಿದಾಗ ಹ್ಯಾಟನ್ನು ತೆಗೆಯುವುದು ನಾಗರಿಕ ಲಕ್ಷಣ.

ನನಗೆ ಹ್ಯಾಟು ಹಾಕಿಕೊಳ್ಳುವುದಕ್ಕೆ ತುಂಬ ಬೇಸರ. ತಲೆಯ ಮೇಲೆ ಭಾರವಾದ ಮಕ್ಕರಿಯೊಂದನ್ನು ಬೋರಲು ಹಾಕಿಕೊಂಡಂತೆ ಅನುಭವವಾಗುತ್ತದೆ. ಮಳೆಯಲ್ಲಿ ನೆನೆದರಂತೂ ಈ ಭಾರ ಇನ್ನೂ ಹೆಚ್ಚಾಗುತ್ತದೆ. ಹ್ಯಾಟನ್ನು ಜೋಪಾನವಾಗಿಟ್ಟುಕೊಳ್ಳುವುದಕ್ಕೆ ಇನ್ನಷ್ಟು ಶ್ರಮ. ನಾನು ಇಂಡಿಯಾ ಬಿಡುವುದಕ್ಕೆ ಮುಂಚೆಯೇ ಪರದೇಶಗಳಿಂದ ಹಿಂದಿರುಗಿದ್ದ ಗೆಳೆಯರು 'ಹ್ಯಾಟಿಲ್ಲದೆ ಪರದೇಶ ಪ್ರಯಾಣ ಮಾಡುವುದುಂಟೆ? ನಿನ್ನ ಸೂಟಿಗೊಂದು ಗಾಂಭೀರ್ಯ ಕೊಡುತ್ತದೆ. ಅದಿದ್ದೇ ಇರಬೇಕು' ಎಂದು ಮಾಡಿದ್ದ ಉಪದೇಶ; "ತಲೆಗೊಂದು ಸೂರಿಲ್ಲದೆ ಮನೆಯಿಂದ ಹೊರಕ್ಕೆ ತಲೆಯಿಡುವುದೇ ಅವಮರ್ಯಾದೆ; ಇನ್ನು ಹಾಗೆಯೇ ದೇಶದಿಂದ ಆಚೆ ಹೋಗುವುದು ಪೋಕರಿತನದ ಪರಮಾವಧಿ" ಎಂಬ ನನ್ನ ಮನೆಯವರ ವಾದ; ಈ ಎರಡೂ ದವಡೆಗಳ ಮಧ್ಯೆ ಸಿಕ್ಕಿಕೊಂಡ ನಾನು ಆರಿಸಿಕೊಂಡ ಟೋಪಿ ಕಾಶ್ಮೀರದ ಕಲೆಗಾರಿಕೆಯ ಶೈಲಿಯದು. ನಮ್ಮಲ್ಲನೇಕರ ತಲೆಯ ಮೇಲೆ ಸಾಮಾನ್ಯವಾಗಿ ಕುಳಿತಿರುವ ರಟ್ಟು ರಟ್ಟಾದ ಮಡಿಚುವ ತೆರದ್ದರಿಂದ ಇದರ ಮಾಟ ಬೇರೆಯದ್ದಲ್ಲ. ಆದರೆ ಇದಕ್ಕೆ ಉಪಯೋಗಿಸುವ ಬಟ್ಟೆ ಶಾಲು ತೆರೆದು ಅದರಮೇಲೆ ಕಸೂತಿಯಿದೆ– ಕಾಶ್ಮೀರದ ಶಾಲುಗಳ ಅಂಚಿನಲ್ಲಿರುವಂತೆ. ಇದ್ದದ್ದರಲ್ಲಿ ತಕ್ಕಮಟ್ಟಿಗೆ ಕಲಾಕುಶಲತೆಯ ಕಸೂತಿಯಿದ್ದ ಟೋಪಿಯನ್ನೇ ಆರಿಸಿಕೊಂಡೆ.

ಉತ್ತರ ಅಮೆರಿಕದ ಪೂರ್ವ ತೀರದಲ್ಲಿರುವ ಮುಖ್ಯ ಪಟ್ಟಣಗಳಲ್ಲಿ ಬಾಸ್ಟನ್ ಒಂದು. ಇದರಲ್ಲಿ ಕೇಂಬ್ರಿಡ್ಜ್ ಎಂಬುದೊಂದು ಹರವು. ಈ ಹರವಿನಲ್ಲಿಯೆ ಹಾರ್‌ವರ್ಡ್ ವಿದ್ಯಾಪೀಠ. ನಾನು ಕೆಲಸ ಮಾಡುತ್ತಿದ್ದುದು ಇಲ್ಲಿ. ಕಾಲೇಜಿನಿಂದ ನಾನು ವಾಸಿಸುತ್ತಿದ್ದ ಮನೆಗೆ ಹತ್ತು ನಿಮಿಷದ ನಡಿಗೆ. ನನ್ನ ಮನೆ ಎದುರು ಬಸ್ಸು ನಿಲ್ಲುವ ಜಾಗ. ಅದರ ಪಕ್ಕದಲ್ಲಿ ಶ್ರೀಮಂತರಿಗೆ ಸೇರಿದುದೆಂದು ಹೇಳಬಹುದಾದ ಮನೆ. ಪ್ರತಿದಿನ ಬೆಳಗ್ಗೆ ಹನ್ನೊಂದು ಗಂಟೆ ಸುಮಾರಿಗೆ ಮನೆ ಎದುರಿನ ಬಸ್‌ಸ್ಟಾಪಿಗೆ ಬಂದು, ಕಾಲೇಜು ಬಸ್ಸಿಗಾಗಿ ಕಾಯುತ್ತಿದ್ದೆ. ಅಷ್ಟು ಹೊತ್ತಿಗೆ ಸರಿಯಾಗಿ ಎದುರು ಮನೆಯಿಂದ ಅರವತ್ತು ವರ್ಷದ ಮುದುಕಿಯೊಬ್ಬಳೂ, ಇಪ್ಪತ್ತೈದು ವರ್ಷದ ಹುಡುಗಿಯೊಬ್ಬಳೂ ಹೊರಬಂದು ಬಸ್ಸಿಗಾಗಿ ಕಾಯುತ್ತಿದ್ದರು. ಈ ಕಾರ್ಯಕ್ರಮ ಮೂರು ನಾಲ್ಕು ತಿಂಗಳಿಂದಲೂ ತಪ್ಪದೆ ನಡೆದು ಬರುತ್ತಿದ್ದುದರಿಂದ ಅವರಿಬ್ಬರ ಮತ್ತು ನನ್ನ ಪರಸ್ಪರ ಮುಖ ಪರಿಚಯ ಸಾಕಾದಷ್ಟು ಬೆಳೆದಿತ್ತು. ಮತ್ತು ಹಾರ್‌ವರ್ಡ್ ವಿದ್ಯಾಪೀಠದಲ್ಲಿಯೇ ಅವರಿಗೂ ಕೆಲಸ. ಮುದುಕಿ ನನ್ನ ಲ್ಯಾಬೊರೆಟರಿಯ ಪಕ್ಕದಲ್ಲಿದ್ದ ಕಾಲೇಜು ಸಂಸ್ಥೆಯೊಂದರಲ್ಲಿ ಖಜಾಂಚಿ. ಮಗಳು ಅದೇ ವಿದ್ಯಾಪೀಠದ ಬೇರೊಂದು ಶಾಖೆಯಲ್ಲಿ ವಿದ್ಯಾರ್ಥಿನಿ. ಆ ದಿನ ನನ್ನ ಹಿರಿಯ ಗೆಳೆಯರೊಬ್ಬರ ಮನೆಯಲ್ಲಿ ಔತಣಕೂಟ. ಟೋಪಿ ಹಾಕಿಕೊಂಡು ಬಸ್ ಸ್ಟಾಪಿಗೆ ಬಂದೆ. ಯಥಾಪ್ರಕಾರ ಮುದುಕಿ ಹುಡುಗಿಯರ ಭೇಟಿಯಾಯ್ತು. ನನ್ನನ್ನು ನೋಡಿ ತಮ್ಮತಮ್ಮೊಳಗೆ ಗುಸುಗುಸು ಮಾತು ಪ್ರಾರಂಭಿಸಿದರು. ಮಧ್ಯೆ ಮಧ್ಯೆ ನನ್ನ ಟೋಪಿ ಕಡೆ ದೃಷ್ಟಿ ವಿಸ್ತರಿಸುತ್ತಿದ್ದರು. ಇದು ಸುಮಾರು ಹತ್ತು ನಿಮಿಷ ನಡೆಯಿತು. ಬಸ್ಸು ಬಂತು. ಅದರಲ್ಲಿ ಖಾಲಿಯಿದ್ದುದು ಎರಡು ಸೀಟು. ಇವರಿಬ್ಬರೂ ಹತ್ತಬಹುದಾಗಿತ್ತು. ಆದರೆ ಅವರು ಮಾತಿನಲ್ಲಿ ತಲ್ಲೀನರಾಗಿ ಕೈಬಾಯಿಗಳನ್ನು ತಿರುಗಿಸುತ್ತ ಹೊರ ಪ್ರಪಂಚದಿಂದ ವಿಮುಖರಾಗಿದ್ದರು. ನಾನು ನನ್ನ ಗೆಳೆಯನೊಬ್ಬನಿಗೆ ಕಾಯಬೇಕಾಗಿದ್ದುದರಿಂದ ಅಲ್ಲಿಯೆ ನಿಂತೆ. ಬಸ್ಸು ಹೊರಟುಹೋಯಿತು. ನಾವು ಮೂವರು ಉಳಿದೆವು.

©KTBS Not to be republished

ಮುದುಕಿ ಮೊದಲು ಒಂದು ಹೆಜ್ಜೆ ಮುಂದೆ ಬಂದಳು. ಅನಂತರ ಮಗಳು, ತಾಯಿಯ ಬಾಲದಂತೆ. ಇಬ್ಬರೂ ಗಂಟಲು ಸರಿಮಾಡಿಕೊಂಡು ಕೆಮ್ಮಿದರು. ಪ್ರಾರಂಭವಾಯಿತು.

"ಒಂದೆರಡು ನಿಮಿಷ ಪುರುಸೊತ್ತಿದೆಯೆ?"

"ಏನಾಗಬೇಕು?" ಎಂದೆ

"ನಿಮ್ಮನ್ನು ಒಂದು ವಿಷಯ ಕೇಳಬೇಕೆಂದು. . ." ಎಂದಳು ಮುದುಕಿ.

"ದಯವಿಟ್ಟು ಕೇಳಿ."

"ನಿಮ್ಮ ತಲೆಯ ಮೇಲಿರುವುದು ಏನು?"

"ನೀವು ಹ್ಯಾಟು ಹಾಕಿಕೊಳ್ಳುವುದಿಲ್ಲವೆ! ಅದರಂತೆಯೇ ಇದೂ. ಟೋಪಿ ನಮ್ಮ ದೇಶದ ತಲೆಯುಡುಗೆಗಳಲ್ಲಿ ಒಂದು"

"ಅದೆಷ್ಟು ಚೆಲುವಾಗಿದೆ!" ಎಂದು ಕಣ್ಣುಬಾಯಿ ಬಿಟ್ಟು ಟೋಪಿಯನ್ನೇ ದಿಟ್ಟಿಸುತ್ತ ನಿಂತುಕೊಂಡರು. ಎರಡು ನಿಮಿಷ ಮೂವರೂ ಮೌನ. ಅನಂತರ–

"ಅದು ನಿಮ್ಮದೆ?"

"ಹೌದು!"

"ಇದಲ್ಲದೆ ಬೇರೆ ಇದೆಯೆ?"

"ಇಲ್ಲವಲ್ಲಾ!"

ಒಬ್ಬರ ಮುಖವನ್ನೊಬ್ಬರು ನೋಡಿಕೊಂಡು ಅದೇನೋ ಲೊಚಗುಟ್ಟಿಕೊಂಡರು. ಪುನಃ–

"ಇದೇ ತೆರನಾದ್ದು ಬೇರಾವುದೂ ಇಲ್ಲವೇ?"

"ನೀವು ಟೋಪಿಯನ್ನು ಉದ್ದೇಶಿಸಿರುವಿರಾದರೆ ಇಲ್ಲವೆಂದು ಹೇಳಬೇಕಾಗುತ್ತದೆಯಲ್ಲ!"

"ನೀವು ಇದನ್ನು ಯಾವಾಗಲೂ ಹಾಕಿಕೊಳ್ಳುವಿರಾ?"

"ಯಾವಾಗಲೂ ಎಂದರೆ ಗಾಳಿಯಲ್ಲಿ ಸಂಚರಿಸುವಾಗ, ಮತ್ತು ಯಾವುದಾದರೂ ಪಾರ್ಟಿಗಳಿಗೆ ಹೋಗುವಾಗ ಹಾಕಿಕೊಳ್ಳುತ್ತೇನೆ"

"ಸಂಜೆ ಹೊತ್ತು?"

"ಅನಾವಶ್ಯಕವಾಗಿ ಹಾಕಿಕೊಳ್ಳುವುದಿಲ್ಲ."

"ನೋಡಿ. . .(ಹುಡುಗಿಯ ಕಡೆತೋರಿಸುತ್ತಾ), ಇವಳು ಡೋರಿ, ನನ್ನ ಮಗಳು. . ."

'ಬಹಳ ಸಂತೋಷ' ಎಂದು ಡೋರಿಯೊಡನೆ ಕೈಕುಲುಕಿದ್ದಾಯಿತು.

ಮುದುಕಿ: ನಿಮ್ಮ ಟೋಪಿ ಬಹಳ ಅಪರೂಪದ ವಸ್ತು.

ಡೋರಿ: ತೀರ ಚೆಲುವಿನದೂ ಅಹುದು.

ನಾನು: ಒಂದು ದೇಶದಲ್ಲಿ ಮಾತ್ರ ರೂಢಿಯಲ್ಲಿರುವುದು ಇನ್ನೊಂದು ದೇಶದಲ್ಲಿ ಹಾಗೆ ತಾನೆ ಆಗಬೇಕು!

ಮುದುಕಿ ಮತ್ತು ಡೋರಿ: ಅದರ ಸೌಂದರ್ಯಕ್ಕೆ ನಿಜವಾಗಿಯೂ ಮನಸೋತಿದ್ದೇವೆ.

ಬಳಸು ಬಳಸಾದ ಇಷ್ಟು ಪೀಠಿಕಾ ಪ್ರಕರಣವಾದ ಮೇಲೆ ಮುದುಕಿ ಪಾಯಿಂಟಿಗೆ ಬಂದಳು.

"ನೋಡಿ, ನಾಳೆ ಸಂಜೆ ಡೋರಿ ಕಾಲೇಜಿನಲ್ಲಿ ಒಂದು ಪಾರ್ಟಿ ಇದೆ. ಒಳ್ಳೆಯ ಬಟ್ಟೆ ಬರೆ ಹಾಕಿಕೊಂಡು

©KTBS Not to be republished

ಹೋಗಬೇಕಾಗಿದೆ. ಇದಕ್ಕೋಸ್ಕರವಾಗಿಯೇ ನೋಡಿ ಈ ಗೌನನ್ನು ತೆಗೆದುಕೊಂಡಿದ್ದೇವೆ." ಎನ್ನುತ್ತ ಕೈಲಿದ್ದ ಕಟ್ಟನ್ನು ಬಿಚ್ಚಿ ಈವಿನಿಂಗ್ ಗೌನ್ ಅನ್ನು ತೋರಿಸಿದಳು. ಆಗತಾನೆ ಪರಿಚಿತವಾದ ನನಗೆ ಡೋರಿಯ ಗೌನನ್ನು ತೋರಿಸುವುದರ ಅರ್ಥವೇನಿರಬಹುದೆಂದು ದಿಗಿಲಾಯಿತು.

ಮುದುಕಿ: ನೋಡಿ ಈ ಗೌನು ಊದಾ ಬಣ್ಣ.

ನಾನು: ಹೌದು, ಬಹಳ ಅಂದವಾಗಿದೆ

ಡೋರಿ: ನಿಮ್ಮ ಟೋಪಿಯೂ ಊದಾಬಣ್ಣ. ಅದಕ್ಕೂ ಇದಕ್ಕೂ ಸಂಬಂಧವೇನಿರಬಹುದೆಂದು ತಲೆ ಕೆರೆದುಕೊಂಡೆ.

ನಾನು: (ಸಂಶಯದಿಂದ) ಹೌದು.

ಮುದುಕಿ: ಡೋರಿಯ ಹತ್ತಿರ ಈ ಗವನಿಗೊಪ್ಪುವ ತಲೆಯುಡುಗೆಯಿಲ್ಲ. ಆದ್ದರಿಂದ ನಾಳೆ ಸಂಜೆಗೆ ಮಾತ್ರ ನಿಮ್ಮ ಟೋಪಿಯನ್ನು ನಮ್ಮ ಡೋರಿಗೆ ಎರವಲು ಕೊಡುವಿರಾದರೆ ನಾವಿಬ್ಬರೂ ತುಂಬ ಕೃತಜ್ಞರಾಗಿರುತ್ತೇವೆ.

ನನಗೆ ವಿಶದವಾಗಲಿಲ್ಲ. ಕೇಳಿದೆ, "ಎಂದರೆ ನನ್ನ ಟೋಪಿಯನ್ನು ನಿಮ್ಮ ಡೋರಿ ನಾಳೆ ಸಂಜೆಯ ಪಾರ್ಟಿಗೆ ಹಾಕಿಕೊಂಡು ಹೋಗುವುದೆಂದೆ?"

ಇಬ್ಬರೂ: "ಹೌದು, ಹೌದು." ನಿಜವಾಗಿಯೂ ನಾನು ಅವಾಕ್ಕಾದೆ. ಅದೇನೋ ಷಾಕ್ ಬಡಿದಂತಾಯಿತು. ಎರಡು ನಿಮಿಷವಾದರೂ ಬಾಯಿಂದ ಮಾತೇ ಹೊರಡದು. ಡೋರಿ ಕೇಳಿದಳು, "ನಾವು ನಿಮಗೆ ಕಿರಿಕಿರಿ ಕೊಡುತ್ತಿದ್ದೇವೆಯೆ?"

ನಾನು: "ಇಲ್ಲ ಇಲ್ಲ, ಖಂಡಿತ ಇಲ್ಲ" "ನೋಡಿ ನಮ್ಮಲ್ಲಿ ಹೆಂಗಸರಾರೂ ತಲೆ ತೊಡುಗೆ ಇಟ್ಟುಕೊಳ್ಳುವುದಿಲ್ಲ. ತಲೆಗೊಂದು ಸೂರು ಎನ್ನುವುದು ಗಂಡಸರನ್ನು ಮಾತ್ರ ಕುರಿತದ್ದು. ನೀವು ಈ ಟೋಪಿಯನ್ನು ಬಳಸಿದರೆ ಜನ ನಗುವುದಿಲ್ಲವೆ?" ಎಂದೆ.

ಡೋರಿ: ನಕ್ಕರೆ ಅದು ಅವರ ಹುಚ್ಚುತನವನ್ನು ತೋರಿಸುತ್ತದೆ, ಅಷ್ಟೆ!

ಮುದುಕಿ: ಜನ ನಗುತ್ತಾರೆಂದು ನಾವು ಸುಂದರ ವಸ್ತುವನ್ನು ತೊಡದಿರುವುದಕ್ಕಾಗುತ್ತದೆಯೆ? ನಮ್ಮ ಡೋರಿ ರೂಪವಂತೆ. ಅವಳ ಈ ಗೌನು ಸೊಬಗಿನ ಗಟ್ಟಿ. ಅದರೊಡನೆ ಈ ಟೋಪಿ ಸೇರಿದರೆ!

ಎಂದು ಗಾಳಿಯಲ್ಲಿ ತೇಲಾಡಲು ಮೊದಲಿಟ್ಟಳು. ಡೋರಿಯಂತೂ ಆನಂದಪರವಶಳಾದಂತೆ ಅಭಿನಯಿಸಿದಳು. "ಈ ಟೋಪಿಯನ್ನು ಧರಿಸಿ ನಾನು ಪಾರ್ಟಿಗೆ ಹೋದೆನಾದರೆ ಅಲ್ಲಿನ ಕಣ್ಣುಗಳೆಲ್ಲವೂ ನನ್ನ ಮೇಲೆಯೆ. ಜನ ನಗುವುದಿಲ್ಲ. ಈ ಅಪರೂಪ ಸೌಂದರ್ಯಕ್ಕೆ ಮನಸೋತು, ತಮ್ಮ ಹತ್ತಿರ ಇಲ್ಲವಲ್ಲಾ ಎಂದು ಅಸೂಯೆ ಪಟ್ಟುಕೊಳ್ಳುತ್ತಾರೆ?" ಎಂದಳು ಡೋರಿ.

ತಾಯಿ–ಮಗಳ ವಾದಕ್ಕೆ ನಾನು ಸೋತೆ. ಪಾರ್ಟಿಯಾದ ಮೂರು ದಿನಗಳಾದ ಮೇಲೆ ನನಗೆ ಡೋರಿಯ ಮನೆಯಿಂದ ಕರೆಬಂತು, ಅವರ ಮನೆಗೆ ಬಂದು ಟೋಪಿಯನ್ನು ವಾಪಸು ತೆಗೆದುಕೊಳ್ಳಬೇಕೆಂದು. ಹೋದಾಗ ಬಾಗಿಲು ತೆರೆದವರು ನನಗೆ ಲ್ಯಾಬೊರೇಟರಿಯಲ್ಲಿ ಪಾಠ ಹೇಳುತ್ತಿದ್ದ ಪ್ರೊಫೆಸರುಗಳಲ್ಲಿ ಒಬ್ಬರು! ಅವರ ಹಿಂದೆ ನನಗೆ ಪರಿಚಿತಳಾಗಿದ್ದ ಮುದುಕಿ, ಅವಳ ಹಿಂದೆ ಡೋರಿ! ಪ್ರೊಫೆಸರು ಒಳಕ್ಕೆ ಸ್ವಾಗತಿಸಿ ಮುದುಕಿಯನ್ನು "ನನ್ನ ಹೆಂಡತಿ" ಎಂದೂ ಡೋರಿಯನ್ನು "ನನ್ನ ಮಗಳು" ಎಂದೂ ಪರಿಚಯಿಸಿದರು! ನನ್ನ ಮೈ ಬೆವರಿತು.


ಟೀ ಕುಡಿಯುತ್ತ ಸಾಂಪ್ರದಾಯಿಕವಾದ ಕುಶಲ ಸಂಭಾಷಣೆಗಳಾದ ಮೇಲೆ ಡೋರಿ ನನ್ನ ಕೈಗೊಂದು ನ್ಯೂಸ್ ಪೇಪರಿನ ಕಟಿಂಗ್ ಕೊಟ್ಟಳು. ಅದರ ಒಕ್ಕಣೆ ಹೀಗಿತ್ತು. "ಲಿಬರಲ್ ಆರ್ಟ್ಸ್ ಯೂನಿಯನ್ನಿನ ಆಶ್ರಯದಲ್ಲಿ ನಡೆದ ಪಾರ್ಟಿಯಲ್ಲಿ ಡೋರಿ ತೊಟ್ಟುಕೊಂಡಿದ್ದ ಟೋಪಿ ಆಹ್ವಾನಿತರನ್ನೆಲ್ಲ ಬೆರಗುಗೊಳಿಸಿತು. ಅದರ

©KTBS Not to be republished

ನವೀನತೆಯೂ, ಸೊಬಗೂ, ಚಾತುರ್ಯವೂ ಎಲ್ಲರನ್ನೂ ಮೆಚ್ಚಿಸಿತು. ನಮ್ಮಲ್ಲಿರುವ ಉಡುಪು ತಯಾರಿಕೆಯ ಕಲೆಗಾರರು ಈ ಟೋಪಿಯನ್ನು ಪರೀಕ್ಷಿಸುವುದು ಭವಿಷ್ಯದ ಫ್ಯಾಷನ್ ದೃಷ್ಟಿಯಿಂದ ಅವಶ್ಯಕವಾಗಿದೆ.

ಮಗಳು, ತಂದೆ, ತಾಯಿಗಳಿಗೆ ಹಿಗ್ಗೋ ಹಿಗ್ಗು. ಏನೋ ಮಹತ್ಕಾರ್ಯವನ್ನು ಸಾಧಿಸಿದಷ್ಟು ಹೆಮ್ಮೆ, ಸಂತೋಷ. ಕಳೆದ ಮೂರು ದಿನಗಳಿಂದ ಅವರ ಮನೆಗೆ ತಂಡ ತಂಡವಾಗಿ ಜನರು– ಡೋರಿಯ ಗೆಳತಿಯರು ಮತ್ತು ಪಾರ್ಟಿಯ ವಿಷಯವನ್ನು ಪೇಪರುಗಳಲ್ಲಿ ಓದಿದವರು– ಟೋಪಿಯನ್ನು ಪರೀಕ್ಷಿಸಿ ತಮಗೂ ಅಂತದೊಂದು ಬೇಕೆಂದು ಕೇಳುತ್ತಿರುವರೆಂದೂ, ಪ್ರತಿ ದಿನವೂ ಹತ್ತಾರು ಜನ ಫೋನಿನಲ್ಲಿ ಇದೇ ವಿಷಯ ಪ್ರಸ್ತಾಪ ಮಾಡುತ್ತಿದ್ದಾರೆಂದೂ ಒಬ್ಬೊಬ್ಬರೂ ಬಿಡಿಸಿ ಬಿಡಿಸಿ, ತಿರುಗಿಸಿ ತಿರುಗಿಸಿ, ಉಪಮಾನ, ಉಪಮೇಯ, ಉದಾಹರಣೆಗಳೊಂದಿಗೆ ಹೇಳಿದರು. ನನಗೇನು ಪ್ರತ್ಯುತ್ತರವನ್ನು ಹೇಳಲು ತೋರಲಿಲ್ಲ. “ಇದೇನು ಆಭಾಸ! ಹುಚ್ಚರನ್ನು ಕಂಡು ಮೆಚ್ಚುವವರನ್ನು ಹುಚ್ಚರೆಂದು ಕರೆಯಬೇಕೆ, ಅಥವಾ ಬೆಪ್ಪರೆಂದು ಕರೆಯಬೇಕೆ?” ಎಂಬ ಪ್ರಶ್ನೆಯೊಂದು ಮಾತ್ರ ಒಂದೇ ಸಮನೆ ಮಿದುಳನ್ನು ಮೀಟುತ್ತಿತ್ತು. (ಇದನ್ನು ಅವರೆದುರು ಹೇಳಲಿಲ್ಲ)

**ಕೃತಿಕಾರರ ಪರಿಚಯ**



ಬಿ.ಜಿ.ಎಲ್.ಸ್ವಾಮಿಯವರ ಪೂರ್ಣ ಹೆಸರು ಬೆಂಗಳೂರು ಗುಂಡಪ್ಪ ಲಕ್ಷ್ಮೀನಾರಾಯಣಸ್ವಾಮಿ. ಸ್ವಾಮಿಯವರು ಬೆಂಗಳೂರು ಜಿಲ್ಲೆಯ ದೇವನಹಳ್ಳಿಯಲ್ಲಿ ೧೯೧೬ರಲ್ಲಿ ಜನಿಸಿದರು. ಸಸ್ಯ ವಿಜ್ಞಾನದಲ್ಲಿ ತಮ್ಮ ಸಂಶೋಧನೆಗಳಿಂದ ಅಂತಾರಾಷ್ಟ್ರೀಯ ಮಾನ್ಯತೆ ಗಳಿಸಿದ ಬಿ. ಜಿ. ಎಲ್. ಸ್ವಾಮಿಯವರು ಖ್ಯಾತ ವಿದ್ವಾಂಸರಾದ ಡಿ.ವಿ.ಗುಂಡಪ್ಪನವರ ಸುಪುತ್ರರು. ಆಧುನಿಕ ಕನ್ನಡದ ಮಹತ್ವದ ಲೇಖಕರಲ್ಲಿ ಓರ್ವರಾದ ಇವರು ಸಂಗೀತ, ಚಿತ್ರಕಲೆ, ಶಾಸನ, ಸಂಶೋಧನೆ, ಪ್ರಾಚ್ಯವಸ್ತು– ಹೀಗೆ ಹಲವು ಕ್ಷೇತ್ರಗಳಲ್ಲಿ ಸಾಧನೆಗೈದವರು. ‘ಕಾಲೇಜು ರಂಗ’, ‘ಕಾಲೇಜು ತರಂಗ’, ‘ಪ್ರಾಧ್ಯಾಪಕನ ಪೀಠದಲ್ಲಿ’, ‘ತಮಿಳು ತಲೆಗಳ ನಡುವೆ’, ‘ಅಮೆರಿಕಾದಲ್ಲಿ ನಾನು’, ‘ನಮ್ಮ ಹೊಟ್ಟೆಯಲ್ಲಿ ದಕ್ಷಿಣ ಅಮೆರಿಕಾ’ ‘ಹಸಿರುಹೊನ್ನು’, ‘ಸಸ್ಯ ಪುರಾಣ’ ‘ಪಂಚಗಳಸ ಗೋಪುರ’– ಮುಂತಾದ ಕೃತಿಗಳನ್ನು ರಚಿಸಿರುವ ಇವರಿಗೆ ‘ಹಸಿರು ಹೊನ್ನು’ ಎಂಬ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿದೆ. ‘ನನ್ನ ಟೋಪಿ’ ಪಠ್ಯಭಾಗವನ್ನು ಇವರ ‘ಅಮೇರಿಕಾದಲ್ಲಿ ನಾನು’ ಕೃತಿಯಿಂದ ಆರಿಸಲಾಗಿದೆ.

**ಪದಗಳ ಅರ್ಥ**

ಅವಮರ್ಯಾದೆ–ಅಪಮಾನ;

ಅಭ್ಯಂತರ–ಅಡ್ಡಿ;

ಆರಭ್ಯ–ಪ್ರಾರಂಭ;

ಊದಾಬಣ್ಣ–ಬೂದುಬಣ್ಣ;

ಎರವಲು–ಸಾಲ;

ಕಣ್ಣು ಬಾಯಿ ಬಿಟ್ಟು ನೋಡು–ಆಶ್ಚರ್ಯದಿಂದ ನೋಡು;

ಕೂಲಂಕಷವಾಗಿ–ವಿವರವಾಗಿ ಸಮಗ್ರವಾಗಿ;

ಖಜಾಂಚಿ–ಹಣಕಾಸಿನ ಮೇಲ್ವಿಚಾರಕ;

©KTBS Not to be republished

ತಬ್ಬಿಬ್ಬಾಗು–ಕಕ್ಕಾಬಿಕ್ಕಿಯಾಗು, ದಿಗ್ಭ್ರಮೆಯಾಗು;
ತಲೆತಲಾಂತರ–ಬಹಳ ವರ್ಷಗಳಿಂದ; ಹಿರಿಯರಿಂದ.
ತೊಡಕು–ತೊಂದರೆ;
ತೊಡುಗೆ–ತೊಟ್ಟುಕೊಳ್ಳುವ ವಸ್ತು;
ದಿಗಿಲು–ಭಯ;
ಧೋತ್ರ–ಪಂಚೆ;
ಪುರುಸೊತ್ತು–ಬಿಡುವು, ವಿರಾಮ;
ಪೋಕರಿತನ–ಪುಂಡತನ;
ಬೆಪ್ಪ–ದಡ್ಡ;
ಮಕ್ಕರಿ–ಬಿದಿರಿನಿಂದ ಮಾಡಿದ ಬುಟ್ಟಿ;
ಮಾಟ–ಮಾದರಿ, ರೀತಿ;
ವಿಶದ–ಸ್ಪಷ್ಟ;
ಸನ್ನಿಧಾನ–ಸಮೀಪ;
ಸೂಟು–ಒಂದು ಬಗೆಯ ಪುರುಷರ ಉಡುಗೆ;
ಸೂರು–ಛಾವಣಿ;
ಹರವು–ಬಡಾವಣೆ;
ಹ್ಯಾಟು–ಒಂದು ಬಗೆಯ ಟೋಪಿ.

## ಟಿಪ್ಪಣಿ

**ಚೌಲ–** ಮಗುವಿನ ಹುಟ್ಟುಗೂದಲನ್ನು ತೆಗೆಸುವುದಕ್ಕೆ ಮಾಡುವ ಸಮಾರಂಭ.

**ಮುಂಜಿ–** ಉಪನಯನ, ಬ್ರಹ್ಮೋಪದೇಶ, ಜನಿವಾರ ಹಾಕಿ ಮಂತ್ರೋಪದೇಶ ಮಾಡುವ ಸಮಾರಂಭ.

## ಅಭ್ಯಾಸ

**ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. 'ನನ್ನ ಟೋಪಿ' ಲೇಖನದಲ್ಲಿ ತಿಳಿಸಿರುವಂತೆ ಅಮೆರಿಕದ ಚರ್ಚಿನಲ್ಲಿ ಯಾವುದು ಅವಮರ್ಯಾದೆ?
೨. ಹಿರಿಯರನ್ನು ಕಾಣಲು ಹೋದಾಗ ನಮ್ಮಲ್ಲಿ ಅನುಸರಿಸಬೇಕಾದ ಸಂಪ್ರದಾಯ ಯಾವುದೆಂದು ಬಿ.ಜಿ.ಎಲ್. ಸ್ವಾಮಿಯವರು ಹೇಳಿದ್ದಾರೆ?
೩. ಬಾಸ್ಟನ್ ಪಟ್ಟಣ ಎಲ್ಲಿದೆ?
೪. ಬಿ.ಜಿ.ಎಲ್. ಸ್ವಾಮಿಯವರು ಎಲ್ಲಿ ಕೆಲಸ ಮಾಡುತ್ತಿದ್ದರು?
೫. ಮುದುಕಿ, ಹುಡುಗಿ ಮತ್ತು ಲೇಖಕರ ನಡುವೆ ಮುಖ ಪರಿಚಯ ಬೆಳೆದುದು ಹೇಗೆ?
೬. ಡೋಲಿಯ ಮನೆಗೆ ಹೋದಾಗ ಲೇಖಕರ ಮೈ ಬೆವರಿತೇಕೆ?

**ಆ) ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ತಲೆಯುಡುಗೆಗೆ ಸಂಬಂಧಿಸಿದಂತೆ ನಮ್ಮ ಸಂಸ್ಕೃತಿಗೂ ಅಮೆರಿಕದ ಸಂಸ್ಕೃತಿಗೂ ಇರು ವ್ಯತ್ಯಾಸವನ್ನು 'ನನ್ನ ಟೋಪಿ' ಲೇಖನವನ್ನು ಆಧರಿಸಿ ಬರೆಯಿರಿ.
೨. ಬಿ.ಜಿ.ಎಲ್. ಸ್ವಾಮಿಯವರು ಕಾಶ್ಮೀರದ ಟೋಪಿಯನ್ನು ಏಕೆ ಆಯ್ಕೆ ಮಾಡಿಕೊಂಡರು?
೩. ಮುದುಕಿ, ಹುಡುಗಿ ಮತ್ತು ಲೇಖಕರು ಮೂವರೇ ಬಸ್ಸ್ ನಿಲ್ದಾಣದಲ್ಲಿ ಉಳಿದುದೇಕೆ?

©KTBS Not to be republished

೪. ಮುದುಕಿಯು ಲೇಖಕರ ಟೋಪಿಯನ್ನು ಎರವಲು ಪಡೆಯಲು ಬಯಸಿದ್ದೇಕೆ?

೫. ಡೋಲಿ ಆನಂದಪರವಶಳಾಗಿ ಲೇಖಕರನ್ನು ಅಭಿನಂದಿಸಿದ್ದೇಕೆ?

೬. ಡೋಲಿಯು ಲೇಖಕರಿಗೆ ನೀಡಿದ ನ್ಯೂಸ್ ಪೇಪರಿನ ಕಟಿಂಗ್‌ನಲ್ಲಿದ್ದ ಒಕ್ಕಣೆ ಏನು?

ಇ) **ಕೆಳಗಿನ ನುಡಿಗಳ ಸಂದರ್ಭವನ್ನು ಸ್ವಾರಸ್ಯ ಸಹಿತ ವಿವರಿಸಿರಿ.**

೧. "ಸಂಪ್ರದಾಯ ಉಳಿದುಕೊಂಡೇ ಬಂದಿದೆ"

೨. "ಹ್ಯಾಟಿಲ್ಲದೆ ಪರದೇಶ ಪ್ರಯಾಣ ಮಾಡುವುದುಂಟೆ?"

೩. "ನಿಮ್ಮ ತಲೆಯ ಮೇಲಿರುವುದು ಏನು?"

೪. "ಜನರು ನಗುತ್ತಾರೆಂದು ನಾವು ಸುಂದರ ವಸ್ತುವನ್ನು ತೊಡದೆ ಇರುವುದಕ್ಕಾಗುತ್ತದೆಯೆ?"

೫. "ಹುಚ್ಚರೆಂದು ಕರೆಯಬೇಕೆ, ಅಥವಾ ಬೆಪ್ಪರೆಂದು ಕರೆಯಬೇಕೆ?"

## ಭಾಷಾಭ್ಯಾಸ

ಅ) ನನ್ನ ಟೋಪಿ ಪಾಠದಲ್ಲಿ ಬಂದಿರುವ ನಾಲ್ಕು ಇಂಗ್ಲಿಷ್ ಭಾಷೆಯ ಪದಗಳನ್ನು ಗುರುತಿಸಿ ಬರೆಯಿರಿ.

ಆ) ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರನ್ನು ತಿಳಿಸಿರಿ.

ನಮ್ರತೆಯಿಂದ, ಮಳೆಗಾಲ, ಇನ್ನೊಂದು, ಲಾಂಛನವನ್ನು, ತಲೆಗೂದಲು, ತಲೆಗೊಂದು.

ಇ) ಕೆಳಗಿನ ಪದಗಳಿಗೆ ನಿಘಂಟು ನೋಡಿ ಅರ್ಥ ಬರೆಯಿರಿ.

ನಮ್ರತೆ, ಲಾಂಛನ, ವಿಮುಖ.

ಈ) ಕೆಳಗಿನ ಪದಗಳ ವಿರುದ್ಧಾರ್ಥಕ ರೂಪವನ್ನು ಬರೆಯಿರಿ.

ಮರ್ಯಾದೆ, ಭಾರ, ಪರದೇಶ, ಶ್ರೀಮಂತ.

## ಭಾಷಾ ಚಟುವಟಿಕೆ

ಅ) ಲೇಖಕರು ಡೋರಿ ಮತ್ತು ಅವಳ ತಾಯಿಯನ್ನು ಬಸ್ ನಿಲ್ದಾಣದಲ್ಲಿ ಭೇಟಿಯಾದ ಪ್ರಸಂಗವನ್ನು ತರಗತಿಯಲ್ಲಿ ಅಭಿನಯಿಸಿರಿ.

ಆ) ಕೆಳಗಿನ ಪ್ರಕಟಣೆಯನ್ನು ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

©KTBS Not to be republished

**ಕರ್ನಾಟಕ ಕಲಾ ವೇದಿಕೆ, ಚಿತ್ರದುರ್ಗ**

**ನಳ : ದಮಯಂತಿ**

ಗೊಂಬೆಯಾಟ ಪ್ರದರ್ಶನ

**ದಿನಾಂಕ :** ೨೪.೦೬.೨೦೧೭

**ಸ್ಥಳ :** ಪುರಭವನ, ಚಿತ್ರದುರ್ಗ

**ಸಮಯ :** ಸಂಜೆ ೫ ಗಂಟೆ

**ಪ್ರವೇಶ ಉಚಿತ**

**ಎಲ್ಲರಿಗೂ ಆದರದ ಸ್ವಾಗತ**

**ಇ) ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಗೊಂಬೆಯಾಟ ಪ್ರದರ್ಶನವನ್ನು ಏರ್ಪಡಿಸಿರುವವರು ಯಾರು?

೨. ಪ್ರದರ್ಶನದ ಸಮಯವೇನು?

೩. ಪುರಭವನದಲ್ಲಿ ಯಾವ ಗೊಂಬೆಯಾಟ ಪ್ರದರ್ಶನವಿದೆ?

೪. ಗೊಂಬೆಯಾಟಕ್ಕೆ ಪ್ರವೇಶ ಶುಲ್ಕ ಎಷ್ಟು?

**ಈ) ಕೆಳಗಿನ ಪದ್ಯದಲ್ಲಿರುವ ಅನುಕರಣಾವ್ಯಯಗಳನ್ನು ಗುರುತಿಸಿ ಬರೆಯಿರಿ.**

ಫಳ ಫಳ ಮಿಂಚು
ಗುಡು ಗುಡು ಗುಡುಗು
ರಪ ರಪ ಮಳೆಯ ನೋಡಲ್ಲಿ!
ಧಡ ಧಡ ಓಡುವ
ಥಕ ಥಕ ಕುಣಿಯುವ
ಗಿರಿ ಗಿರಿ ತಿರುಗುವ ಮಳೆಯಲ್ಲಿ!

ಪಟ ಪಟ ಹನಿಯು
ಜುಳು ಜುಳು ನೀರು
ಗಡ ಗಡ ನಡುಗುವ ಚಳಿಯಲ್ಲಿ!
ಸರ ಸರ ಕಾಗದ ದೋಣಿಯ ಮಾಡಿ
ಕಾಲುವೆ ನೀರಲಿ ತೇಲಿಸುವ
ಕಾಮನ ಬಿಲ್ಲು ಬರುವುದೆ ಎಂದು
ಕಾಯುವ ಜಿಟಿ ಜಿಟಿ ಮಳೆಯಲ್ಲಿ!

©KTBS Not to be republished

## ವ್ಯಾಕರಣ

### ಭಾಗ 'ಅ'

**ಕೆಳಗಿನ ವಾಕ್ಯಗಳಲ್ಲಿ, ಅಡಿ ಗೆರೆ ಎಳೆದ ಪದಸಮೂಹವನ್ನು ಗಮನಿಸಿರಿ.**

೧. ಸ್ಪರ್ಧೆಯ ಫಲಿತಾಂಶ ತಿಳಿಯಲು ರಾಧಾ ಒಂಟಿ ಕಾಲಿನ ಮೇಲೆ ನಿಂತಿದ್ದಳು.

೨. ಕರೀಮನ ಸ್ನೇಹಿತನೇ ಅವನಿಗೆ ಟೋಪಿ ಹಾಕಿ ಹೋದ.

೩. ತಂದೆ ಹೇಳಿದ್ದಕ್ಕೆಲ್ಲ ಮೇರಿ ತಲೆಯಾಡಿಸಿದಳು.

ಗೆರೆ ಎಳೆದ ಪದಗಳನ್ನು ಮತ್ತೊಮ್ಮೆ ಓದಿ. ಇಲ್ಲಿ ಒಂದಕ್ಕಿಂತ ಹೆಚ್ಚು ಪದಗಳಿವೆ. ಇವುಗಳಿಗೆ ಪ್ರತ್ಯೇಕವಾಗಿ ಸಾಮಾನ್ಯ ಅರ್ಥ ಒಂದಿದ್ದರೂ, ಇಲ್ಲಿ ಈ ಪದಗಳ ಸಮೂಹಕ್ಕೆ ಬೇರೆಯಾದ ಅರ್ಥವಿದೆ. ಉದಾಹರಣೆಗೆ– ಒಂಟಿ ಕಾಲಿನ ಮೇಲೆ ನಿಲ್ಲು–ಎಂದರೆ, ಒಂದು ಕಾಲಿನ ಮೇಲೆ ನಿಲ್ಲು ಎಂದಲ್ಲ, ಬದಲಾಗಿ ಬಹಳ ಕುತೂಹಲದಿಂದಿರು ಎಂದರ್ಥ. 'ಟೋಪಿಹಾಕು' ಎಂದರೆ ಮೋಸಮಾಡು ಎಂದು, ತಲೆಯಾಡಿಸು ಎಂದರೆ ಒಪ್ಪಿಗೆ ಸೂಚಿಸು ಎಂದು ಅರ್ಥವಾಗುತ್ತದೆ. ಹೀಗೆ ವಿಶೇಷಾರ್ಥ ಬರುವಂತೆ ಬಳಸುವ ಪದಗುಚ್ಛಗಳನ್ನು ನುಡಿಗಟ್ಟುಗಳು ಎನ್ನುವರು. ಇವು ನಮ್ಮ ಮಾತಿಗೆ ಒಂದು ಶೋಭೆಯನ್ನು ತರುತ್ತವೆ.

### ಭಾಗ 'ಆ'

**ಅ) ಕೆಳಗಿನ ಪ್ರತಿಯೊಂದು ನುಡಿಗಟ್ಟನ್ನೂ ಬಳಸಿ ವಾಕ್ಯ ರಚಿಸಿರಿ.**

೧. ತಲೆಹಾಕು. ೨. ತಲೆದೂಗು ೩. ತಲೆ ಅಲ್ಲಾಡಿಸು. ೪. ತಲೆ ಓಡಿಸು.

ಆ) ಹತ್ತು ನುಡಿಗಟ್ಟುಗಳನ್ನು ಬರೆಯಿರಿ.

**ಬೇರೆ ಸಂಸ್ಕೃತಿಯನ್ನು ಪ್ರೀತಿಸು, ನಿನ್ನ ಸಂಸ್ಕೃತಿಯಲ್ಲಿ ಜೀವಿಸು**

*****

©KTBS Not to be republished

# ೧೩. ಬಡತನ

**– ಜನಪದ**

**ಪ್ರವೇಶ :** ಬಡತನ ಎನ್ನುವುದು ಭಾರತದ ಬಹಳ ಜನರಿಗೆ ಅನುಭವಕ್ಕೆ ಬಂದಿರುವ ವಿಷಯವಾಗಿದೆ. ಬಡತನ ಶ್ರೀಮಂತಿಕೆಯ ಅಂತರವು ಸಮಾಜದಲ್ಲಿ ನೋವು ಅನ್ಯಾಯಗಳನ್ನು ಹುಟ್ಟಿಸಿದೆ. ಸಮಾನತೆ ಇರುವ ಸಮಾಜದಲ್ಲಿ ಈ ಅಂತರ ಇಲ್ಲವಾಗಬೇಕು. ಇದಕ್ಕಾಗಿ ಅನೇಕ ಸಮಾಜ ಸುಧಾರಕರು ಚರಿತ್ರೆಯುದ್ದಕ್ಕೂ ಸೆಣಸಾಟ ಮಾಡಿಕೊಂಡು ಬಂದಿದ್ದಾರೆ. ಈ ಕೆಳಗಿನ ತ್ರಿಪದಿಗಳಲ್ಲಿ ಗ್ರಾಮೀಣ ಪ್ರದೇಶದ ಜನರು ಬಡತನದ ಬಗ್ಗೆ ನೀಡಿರುವ ವಿವಿಧ ಪ್ರತಿಕ್ರಿಯೆಗಳಿವೆ.

ಮೂಡಲ ಮುತ್ತಯ್ಯ ನೋಡಯ್ಯ ಬಡತಾನ
ಮೂಡ್ಲಲ್ಲಿ ರಾಗಿ ಮಳೆಯುದ್ದ। ಬೆಳೆದರೆ
ಮಾಡುವೆ ನಿನಗೆ ಹರಿಸೇವೆ॥

ಬಂಗಾರ ಬಳಿಯಿಟ್ಟು ಬೈಬ್ಯಾಡ ಬಡವರಿಗೆ
ಬಂಗಾರ ನಿನಗೆ ಸ್ಥಿರವಿಲ್ಲ। ಮಧ್ಯಾಹ್ನದಾ
ಬಿಸಿಲು ಹೊರಳುವುದು ತಡವಲ್ಲ॥

ಬಡತನ ಬಂದಾರ ಬಡಿಬ್ಯಾಡ ಬಾಲರನ
ಆಡ್ಯಾಡಿ ಬಂದು ತೊಡಿಮ್ಯಾಲ। ಆಡಿದರ
ಬಡತನವೆಲ್ಲ ಬಯಲಾಗಿ॥

ಬಡವೆಯ ಮಕ್ಕಳು ನಡೆದರೆ ಸಂತೋಷ
ಹುಡಿಯಾಡಿ ಮನೆಗೆ ಬರುವಾಗ । ತಾಯಿಗೆ
ಬಡತನದ ಜ್ಞಾನ ಮರೆಯಿತು॥

ಬಡತನ ನನಗಿರಲಿ ಭಾಳ ಮಕ್ಕಳಿರಲಿ
ಮ್ಯಾಗ ಗುರುವಿನ ದಯೆವಿರಲಿ। ನನ ಗುರುವೆ
ಬಡತನದ ಚಿಂತಿ ನಿನಗಿರಲಿ॥

ಬಡವರು ಸತ್ತರೆ ಸುಡಲಿಕೆ ಸೌದಿಲ್ಲ
ಒಡಲ ಕಿಚ್ಚಿನಲಿ ಹೆಣಬೆಂದೊ। ದೇವರೆ
ಬಡವರಿಗೆ ಸಾವ ಕೊಡಬ್ಯಾಡ॥



©KTBS Not to be republished

**ಕೃತಿಕಾರರ ಪರಿಚಯ:**

ಅಕ್ಷರ ಜ್ಞಾನವಿಲ್ಲದ, ಹಳ್ಳಿಯ ಅನಾಮಧೇಯ ವ್ಯಕ್ತಿಗಳ ಭಾವನೆಗಳು ಸಹಜ ಸುಂದರವಾಗಿ ಹೊರಹೊಮ್ಮಿದ ಸಾಹಿತ್ಯವೇ ಜನಪದ ಸಾಹಿತ್ಯ. ಇದು ತಲೆಮಾರಿನಿಂದ ತಲೆಮಾರಿಗೆ ಹರಿದುಬರುತ್ತದೆ. ಎಂತಲೇ ಜನಪದ ಸಾಹಿತ್ಯವು ಸಾಮೂಹಿಕ ಸೃಷ್ಟಿಯ ಕಾವ್ಯವೆನಿಸಿದೆ. ತಲೆಮಾರಿನಿಂದ ತಲೆಮಾರಿಗೆ ಬಾಯಿಂದ ಬಾಯಿಗೆ ಬೆಳೆದು ಬಂದು ಜನಪರ ಸಾಹಿತ್ಯವಾಗಿದೆ. ಜನಪದ ಸಾಹಿತ್ಯವು ಸಾಮೂಹಿಕ ಜೀವನಕ್ಕೆ, ಗ್ರಾಮೀಣ ಸಂಸ್ಕೃತಿಗೆ ಹಿಡಿದ ಕನ್ನಡಿಯಂತೆ. 'ಕವಿರಾಜ ಮಾರ್ಗ'ದಲ್ಲಿ ಹೇಳಿರುವಂತೆ ನಮ್ಮ ಜನಪದ ಕವಿಗಳು 'ಕುರಿತೋದದೆಯಂ ಕಾವ್ಯ ಪ್ರಯೋಗ ಪರಿಣತಮತಿಗಳ್.'

**ಪದಗಳ ಅರ್ಥ**

| | |
|---|---|
| ಕಿಚ್ಚು–ಬೆಂಕಿ; | ಭಾಳ–ಬಹಳ; |
| ಜಾನ–ಜ್ಞಾನ; | ಮುತ್ತಯ್ಯ–ಹನುಮಂತ; |
| ಚಿಂತಿ–ಚಿಂತೆ; | ಮೂಡಲ–ಪೂರ್ವ; |
| ತಡ–ನಿಧಾನ; | ಸ್ಥಿರವಿಲ್ಲ–ಶಾಶ್ವತವಿಲ್ಲ; |
| ಬಯಲಾಗು–ಇಲ್ಲವಾಗು; | ಹರಿಸೇವೆ–ದೇವರ ಪೂಜೆ, ಒಂದು ವೈಷ್ಣವ ಸಂಪ್ರದಾಯದ ಹರಕೆ; |
| | ಹುಡಿ–ಮಣ್ಣು. |

**ಅಭ್ಯಾಸ**

**ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

೧. ಬಡತನವನ್ನು ಯಾರು ನೋಡಬೇಕೆಂದು ಜನಪದರು ಬಯಸುತ್ತಾರೆ?

೨. ಮುತ್ತಯ್ಯನಿಗೆ ಹರಿಸೇವೆಯನ್ನು ಯಾವಾಗ ಮಾಡುವುದಾಗಿ ಜನಪದರು ಹೇಳಿದ್ದಾರೆ?

೩. ಬಡತನ ಸಿರಿತನವು ಶಾಶ್ವತವಲ್ಲ ಎನ್ನುವುದಕ್ಕೆ ಜನಪದರು ನೀಡಿರುವ ನಿದರ್ಶನ ಯಾವುದು?

೪. ಬಡತನವನ್ನು ಯಾವುದು ಮರೆಸುತ್ತದೆಂದು ಜನಪದರು ತಿಳಿಸಿದ್ದಾರೆ?

೫. ಬಡತನದ ಚಿಂತೆ ಯಾರಿಗಿರಲೆಂದು ಜನಪದರು ಬಯಸುತ್ತಾರೆ?

೬. ಬಡವರಿಗೆ ಸಾವನ್ನು ಕೊಡಬೇಡವೆಂದು ಜನಪದರು ದೇವರನ್ನು ಏಕೆ ಪ್ರಾರ್ಥಿಸುತ್ತಿದ್ದಾರೆ?

**ಆ) ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಐದು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

೧. 'ಬಡತನ' ಪದ್ಯದಲ್ಲಿ ವರ್ಣಿಸಿರುವಂತೆ ಭಗವಂತನಲ್ಲಿ ಜನಪದರ ಪ್ರಾರ್ಥನೆ ಏನು?

೨. ಬಡತನ ಸಿರಿತನಗಳು ಶಾಶ್ವತವಲ್ಲ ಎಂಬ ಭಾವನೆಯು 'ಬಡತನ' ಪದ್ಯದಲ್ಲಿ ಹೇಗೆ ವ್ಯಕ್ತವಾಗಿದೆ?

©KTBS Not to be republished

**ಭಾಷಾಭ್ಯಾಸ**

**ಅ) ಗ್ರಾಂಥಿಕ ರೂಪದಲ್ಲಿ ಬರೆಯಿರಿ.**

**ಮಾದರಿ:** ಬಳಿಯಿಟ್ಟು– ಬಳೆಯನ್ನು ತೊಟ್ಟುಕೊಂಡು.

ಮೂಡ್ಲಲ್ಲಿ, ಬೈಬ್ಯಾಡ, ಆಡ್ಯಾಡಿ, ತೊಡಿಮ್ಯಾಲ, ಜಾನ, ಕೊಡಬ್ಯಾಡ, ಸೌದಿಲ್ಲ, ಮ್ಯಾಗ.

**ಆ) ಬಿಡಿಸಿ ಬರೆಯಿರಿ.**

**ಮಾದರಿ:** ಸ್ಥಿರವಿಲ್ಲ = ಸ್ಥಿರ+ಇಲ್ಲ

ಮಕ್ಕಳಿರಲಿ, ಬಡತನವೆಲ್ಲ, ಹುಡಿಯಾಡಿ, ದಯವಿರಲಿ, ತಡವಲ್ಲ, ಬಯಲಾಗಿ.

**ಭಾಷಾ ಚಟುವಟಿಕೆ**

ಅ) 'ಬಡತನ' ಪದ್ಯವನ್ನು ಕಂಠಪಾಠ ಮಾಡಿ ರಾಗವಾಗಿ ಹಾಡಿರಿ.

ಆ) ಜನಪದ ಗೀತೆಗಳನ್ನು ಸಂಗ್ರಹಿಸಿರಿ.

**ಛಂದಸ್ಸು**

ಛಂದಸ್ಸು ಎಂದರೆ ಪದ್ಯ ರಚನಾ ಶಾಸ್ತ್ರ. ಛಂದೋಬದ್ಧವಾಗಿ ಪದ್ಯವನ್ನು ಬರೆಯುವಾಗ ಅನುಸರಿಸಬೇಕಾದ ನಿಯಮಗಳನ್ನು ತಿಳಿಸುತ್ತದೆ. ಮುಖ್ಯವಾಗಿ ಸಾಲು/ಪಾದಗಳ ಸಂಖ್ಯೆ, ಪ್ರಾಸ, ಗಣ, ಯತಿ ನಿಯಮಗಳನ್ನು ವಿವರಿಸುತ್ತದೆ.

ಸಾಲು/ಪಾದಗಳಿಗೆ ಅನುಗುಣವಾಗಿ ಪದ್ಯದ ಪ್ರಭೇದ

| | |
|---|---|
| ಎರಡು ಸಾಲಿನ ಪದ್ಯ | ದ್ವಿಪದಿ |
| ಮೂರು ಸಾಲಿನ ಪದ್ಯ | ತ್ರಿಪದಿ |
| ನಾಲ್ಕು ಸಾಲಿನ ಪದ್ಯ | ಚೌಪದಿ (ಕಂದ/ವೃತ್ತ) |
| ಆರುಸಾಲಿನ ಪದ್ಯ | ಷಟ್ಪದಿ ಇತ್ಯಾದಿ |

**ತ್ರಿಪದಿ**

ತ್ರಿಪದಿ ಅಂದರೆ ಮೂರು ಸಾಲಿನ ಪದ್ಯ. ಇದು ಅಚ್ಚಕನ್ನಡ ದೇಸೀ ಛಂದಸ್ಸಾಗಿದೆ. ತ್ರಿಪದಿಗಳು ಮೂರು ಸಾಲಿನ ಪದ್ಯವಾದರೂ ಹೇಳುವಾಗ. ಎರಡನೆಯ ಸಾಲಿನ ಮೊದಲ ಭಾಗ ಪುನರಾವರ್ತನೆಯಾಗುತ್ತದೆ.

ಉದಾ:

ಮೂಡಲ ಮುತ್ತಯ್ಯ ನೋಡಯ್ಯ ಬಡತಾನ
**ಮೂಡ್ಲಲ್ಲಿ ರಾಗಿ ಮಳೆಯುದ್ದ|** ಬೆಳೆದರೆ
ಮಾಡುವೆ ನಿನಗೆ ಹರಿಸೇವೆ||

©KTBS Not to be republished

# ೧೪. ಬುಲ್‌ಡೋಜರ್ ಸಂಸ್ಕೃತಿ

– **ನಾಗೇಶ ಹೆಗಡೆ**

**ಪ್ರವೇಶ :** ನಿಸರ್ಗದ ನಿತ್ಯ ಕ್ರಿಯೆಗಳನ್ನು ಹತ್ತಿಕ್ಕಲೆಂದೂ, ತಿದ್ದಲೆಂದೂ, ೨೦ನೇ ಶತಮಾನದಲ್ಲಿ ಅವತರಿಸಿ ಬಂದ ಯಂತ್ರ ಬುಲ್‌ಡೋಜರ್. ನೂರು ಜನರ ಕೆಲಸವನ್ನು ತಾನೊಂದೇ ಕ್ಷಣಾರ್ಧದಲ್ಲಿ ಮಾಡಿ ಮುಗಿಸುವ ಈ ಯಂತ್ರ, ಬಡವ–ಬಲ್ಲಿದರ ಮಧ್ಯೆಯ ಅಂತರವನ್ನೂ ನೂರುಪಟ್ಟು ಹೆಚ್ಚಿಸುತ್ತದೆ. ನೆಲವನ್ನು ಅಗೆದು ಬಗೆದು ಬದಿಗೆ ತಳ್ಳುವುದೇ ಅಭಿವೃದ್ಧಿಯ ಮಹಾಕಾರ್ಯವೆಂಬ ಭ್ರಮೆ ಹುಟ್ಟಿಸಿ ಪ್ರಕೃತಿಯನ್ನು ವಿಕೃತಿಯಾಗಿ ಪರಿವರ್ತಿಸುತ್ತದೆ.



©KTBS Not to be republished

ಅರವತ್ತರ ದಶಕದಲ್ಲಿ ಶಿರಸಿ ಬಳಿಯ ಯಡಳ್ಳಿ ಹೈಸ್ಕೂಲ್‌ನಲ್ಲಿ ನಾನು ಓದುತ್ತಿದ್ದೆ. ಪಕ್ಕದ ಹೆದ್ದಾರಿಯಲ್ಲಿ ಒಂದು ದಿನ ಬುಲ್‌ಡೋಜರ್ ಗುಡುಗುಡು ಸದ್ದು ಕೇಳಿ, ಅದಿನ್ನೂ ಫರ್ಲಾಂಗ್ ದೂರವಿರುವಾಗಲೇ ನೋಡಲು ನಾವೆಲ್ಲ ಓಡಿದ್ದೇ ಓಡಿದ್ದು. ಅದರ ಸರಪಳಿ ಚಕ್ರ, ಭಾರಿ ಗಾತ್ರ, ಕಬಂಧ ಬಾಹುಗಳು, ಟಾರ್ ರೋಡಿನಲ್ಲಿ ಮೂಡುವ ಅದರ ಚಕ್ರದ ಹಲ್ಲುಗಳ ಗುರುತುಗಳು ಬೆಕ್ಕಸ ಬೆರಗಾಗಿ ನಾವೆಲ್ಲ ನೂರಿನ್ನೂರು ಮಕ್ಕಳು ದಿಬ್ಬಣದಂತೆ ಅದರೊಂದಿಗೇ ನಡೆಯುತ್ತ ಬಂದೆವು. ಚಾಲಕ ಮದುಮಗನಂತೆ ಅಷ್ಟೆತ್ತರದಲ್ಲಿ ಕೂತು ನಮ್ಮ ಕುತೂಹಲ ತಣಿಸಲೆಂದು ಕಪಿಚೇಷ್ಟೆ ಮಾಡುತ್ತಿದ್ದ.

ಹೈಸ್ಕೂಲು ಸಮೀಪಿಸುವಷ್ಟರಲ್ಲಿ ನಮ್ಮ ಶಿಕ್ಷಕರೂ ಬುಲ್‌ಡೋಜರ್ ನೋಡಲು ರಸ್ತೆಪಕ್ಕಕ್ಕೆ ಬಂದು ನಿಂತಿದ್ದರು. ಚಾಲಕ ತನ್ನ ವಾಹನವನ್ನು ನಿಧಾನಗೊಳಿಸಿದ. ನಮ್ಮನ್ನೆಲ್ಲ ದೂರ ಸರಿಯುವಂತೆ ಸನ್ನೆ ಮಾಡಿ – ಗಕ್ಕನೆ ಇಡೀ ಗಾಡಿಯನ್ನು ೯೦ ಅಂಶ ಕೋನ ಮಾಡಿ ತಿರುಗಿಸಿದ. ರಸ್ತೆ ಪಕ್ಕದ ಕಾಲುವೆಯನ್ನೂ ದಿಬ್ಬವನ್ನೂ ಕಡೆಗಣಿಸಿ ಆ ಬೃಹತ್ ಎಂಜಿನ್ನು ಅನಾಮತ್ತಾಗಿ ಹೊಟ್ಟೆ ಹೊಸೆಯುತ್ತ ಬೆಟ್ಟ ಏರಿತು. ನಾವೆಲ್ಲ ಅವಾಕ್ಕಾಗಿ ನೋಡುತ್ತಿರುವಂತೇ ಅಲ್ಲಿ ಬೆಳದಿದ್ದ ಹತ್ತಾರು ಮರಗಳ ಪೈಕಿ ಅತ್ಯಂತ ದೊಡ್ಡ ಮರದ ಬುಡಕ್ಕೆ ಅದು ತನ್ನ ಮೂತಿಯನ್ನು ಒತ್ತಿತು. ಒಮ್ಮೆ ಜೋರಾಗಿ ಹೊಂಕರಿಸಿದಂತೆ ಸದ್ದು ಮಾಡಿ ದಢಾರೆಂದು ಆ ಮರವನ್ನು ಬೇರು ಸಹಿತ ಕಿತ್ತು ಬೀಳಿಸಿತು. ಈ ಮಹಾಕಾರ್ಯದಲ್ಲಿ ತನಗೆ ಏನೇನೂ ಶ್ರಮವಾಗಿಲ್ಲವೆಂಬುದನ್ನು ತೋರಿಸಲೆಂಬಂತೆ ಒಮ್ಮೆ ಮೂತಿಯನ್ನು ಕೆಳಕ್ಕೆ ಮೇಲಕ್ಕೆ ಮಾಡಿ, ಮತ್ತೆ ೯೦ ಅಂಶ ಕೋನ ಮಾಡಿ ಕುರುಚಲು

ಗಿಡಗಂಟೆಗಳನ್ನು ಹೊಸೆದು ಹಾಕುತ್ತ ಶಿಸ್ತಿನ ಯೋಧನಂತೆ ಠಕ್ಕೆಂದು ಪಕ್ಕಕ್ಕೆ ತಿರುಗುತ್ತ ರಸ್ತೆ ಸೇರಿ ತನ್ನ ಹಾದಿ ಹಿಡಿಯಿತು. ಚಾಲಕ ಹಿಂದಿರುಗಿ ನೋಡಿ ನಮಗೆಲ್ಲ ಕೈ ಬೀಸಿ ವಿದಾಯ ಹೇಳಿದ.

ಮುಂದೆ ಸುಮಾರು ಎರಡು ಮೂರು ವಾರಗಳ ಕಾಲ ನಮಗೆ ಅದೇ ಘಟನೆಯೇ ಚರ್ಚೆಯ ವಸ್ತುವಾಗಿ–ತ್ತು. ಒಣಗುತ್ತ ಬಿದ್ದ ಆ ಹೆಮ್ಮರ ಪ್ರದರ್ಶನ ತಾಣವಾಗಿತ್ತು. ತಿಂಗಳಾರು ಕಳೆದರೂ ಮಾಸದಷ್ಟು ಆಳವಾಗಿ ಆ ದೈತ್ಯಯಂತ್ರ ಟಾರ್ ರಸ್ತೆಯನ್ನೂ, ಬೆಟ್ಟದ ಗಟ್ಟಿ ನೆಲವನ್ನೂ ನಮ್ಮೆಲ್ಲರ ಕೋಮಲ ಭಾವನೆಗಳನ್ನೂ ಘಾಸಿ ಮಾಡಿ ಹೋಗಿತ್ತು.

ಮುಂದೆ ನಾನು ಭೂವಿಜ್ಞಾನ ವಿದ್ಯಾರ್ಥಿಯಾಗಿ, ದೇಶದ ಭಾರೀ ಭಾರೀ ಗಣಿಗಳನ್ನೂ, ಬೃಹತ್ ನೀರಾವರಿ ಯೋಜನೆಗಳನ್ನು ಹತ್ತಿರದಿಂದ ನೋಡುವಂತಾದಾಗ ಬುಲ್‌ಡೋಜರ್‌ಗಳು ನನಗೆ ತೀರಾ ಸಮೀಪವಾದದುಂಟು.

ಮನುಷ್ಯನ ಲೌಕಿಕ ಅವಶ್ಯಕತೆಗಳನ್ನೂ, ಆಡಂಬರಗಳನ್ನೂ ಪೂರೈಸಿಕೊಳ್ಳಬೇಕೆಂದರೆ ಕುಡುಗೋಲಿನಷ್ಟೇ ಬುಲ್‌ಡೋಜರ್ ಕೂಡಾ ಅಗತ್ಯ ಎಂಬುದನ್ನು ನಾನು ನನಗೆ ಹೇಳಿಕೊಳ್ಳಲು ಯತ್ನಿಸುತ್ತೇನೆ. ನನ್ನ ಮನೆಯ ಒಲೆಯ ಮೇಲೆ ಅನ್ನ ಬೇಯಬೇಕೆಂದರೆ ಅಲ್ಯೂಮಿನಿಯಂ ಪಾತ್ರೆ ಬೇಕು; ಅದಕ್ಕೆ ಬೇಕಾದ ಬಾಕ್ಸಾಯಿಟ್ ಅದುರನ್ನು ಅಗೆಯಲು ಈ ದೈತ್ಯಯಂತ್ರ ಬೇಕು. ಅನ್ನ ಬೆಂದಿತೋ ಇಲ್ಲವೋ ನೋಡಲು ಬೆಳಕು ಬೇಕು; ವಿದ್ಯುತ್ ಸ್ಥಾವರ ನಿರ್ಮಾಣ ಮಾಡಲು ಬುಲ್‌ಡೋಜರ್ ಬೇಕು. ಮೂಲಕ್ಕೇ ಬರಬೇಕೆಂದರೆ, ಅಕ್ಕಿ ಬೆಳೆಯಲು ನೀರಾವರಿ ಬೇಕು; ಅಣೆಕಟ್ಟು ನಿರ್ಮಿಸಲು ಬುಲ್‌ಡೋಜರ್ ಬೇಕೇ ಬೇಕು.

ಆದರೂ ಕಾಂಪ್ರಮೈಸ್ ಸಾಧ್ಯವಾಗುತ್ತಿಲ್ಲ. ಕುದುರೆಮುಖದಿಂದ ಕಕ್ಕಲಾಗುತ್ತಿರುವ ಅದುರಿನ ಪುಡಿ ರಾಶಿ ರಾಶಿಯಾಗಿ ಬಂದು ಭದ್ರಾನದಿಗೆ ಬೆಟ್ಟದಷ್ಟು ಮೆಕ್ಕಲು ಸೇರಿಸಲು ಇದೇ ಬುಲ್‌ಡೋಜರ್ ಕಾರಣ. ಭದ್ರೆಯಲ್ಲಿ ನೀರಿನ ಒರತೆ ಕಡಿಮೆಯಾಗಿ, ಜಲಾಶಯದಲ್ಲಿ ತುಂಗಭದ್ರಾ ಅಚ್ಚುಕಟ್ಟು ಪ್ರದೇಶದಲ್ಲಿ ಅತಿಯಾದ ನೀರಾವರಿಯಿಂದಾಗಿ ಕೃಷಿ ಭೂಮಿಯಲ್ಲಿ ಜವುಳು–ಸವಳು ಶೇಖರವಾಗಿ ೨೫ ಸಾವಿರ ಹೆಕ್ಟೇರ್ ಗದ್ದೆ ನಿರರ್ಥಕವಾಗಲೂ ಇದೇ ಕಾರಣ. ನದಿಯಲ್ಲಿ ನೀರಿನ ಪ್ರಮಾಣ ಕಮ್ಮಿಯಾಗಿ, ಕಾರ್ಖಾನೆಗಳ ಮಾಲಿನ್ಯ ಮಡುಗಟ್ಟಿ ನಿಲ್ಲಲಿಕ್ಕೂ ಬುಲ್‌ಡೋಜರ್ ಕಾರಣ. ನಿಸರ್ಗದ ಶಕ್ತಿಗಳು ಲಕ್ಷಾಂತರ ವರ್ಷಗಳಿಂದ ನಿಧಾನವಾಗಿ ಕೆಲಸ ಮಾಡಿ ನಮ್ಮೆಲ್ಲರ ಬದುಕಿಗೆ ಅನುಕೂಲವಾಗುವಂತೆ ನಿರ್ಮಿಸಿಟ್ಟ ಸಮತೋಲನವನ್ನು ಒಂದೇ ಪಂಚವಾರ್ಷಿಕ ಯೋಜನೆಯಲ್ಲಿ ಅಧ್ವಾನ ಮಾಡಿ, ಮುಂದಿನ ಇಡೀ ಪೀಳಿಗೆಯ ಬದುಕು ದುಸ್ತರವಾಗುವಂತೆ ಮಾಡುವ ಅಪರಾಧಿಯೂ ಬುಲ್‌ಡೋಜರ್.

ಅಪರಾಧಿಯೋ ಆಪದ್ಬಾಂಧವ ಯಂತ್ರವೋ ತೂಗಿ ನೋಡಿ ಹೇಳಲು ನನಗಂತೂ ಸಾಧ್ಯವಿಲ್ಲ. ಈ ಯಂತ್ರದ ನೆರವಿನಿಂದ ಕೈಗೊಳ್ಳಲಾಗುತ್ತಿರುವ ಭಾರೀ ಯೋಜನೆಗಳಿಂದ ಭೂ ಜೀವಿಗಳಿಗೆ ಭಾರೀ ನಷ್ಟವಾಗುತ್ತಿದೆಯೆಂದು ಕೆಲವು ಅಧ್ಯಯನಗಳಿಂದ ಈಗೀಗ ಗೊತ್ತಾಗುತ್ತಿದೆ. ಆದರೂ ಯೋಜನಾ ತಜ್ಞರು ಇನ್ನಷ್ಟು ಭಾರೀ ಯೋಜನೆಗಳನ್ನು ಸಿದ್ಧಪಡಿಸುತ್ತಲೇ ಇದ್ದಾರೆ. ಈಗ ಕೈಗೊಳ್ಳಲಾಗುತ್ತಿರುವ ನರ್ಮದಾ ಕೊಳ್ಳ ಅಭಿವೃದ್ಧಿ ಯೋಜನೆಯಲ್ಲಿ ೨೫ ಸಾವಿರ ಕೋಟಿ ರೂಪಾಯಿ ವೆಚ್ಚದಲ್ಲಿ ೩೦ ದೊಡ್ಡ ಅಣೆಕಟ್ಟುಗಳು ನಿರ್ಮಾಣವಾಗಲಿವೆ. ಹತ್ತಿರ ಹತ್ತಿರ ಹತ್ತು ಲಕ್ಷ ಬಡಜನರು, ಆದಿವಾಸಿಗಳು ತಮ್ಮ ಭೂಮಿ – ಮನೆ ತ್ಯಜಿಸಿ ನಿರಾಶ್ರಿತರಾಗಲಿದ್ದಾರೆ. ಯಾರ ಅಭಿವೃದ್ಧಿ ಆಗಲಿದೆಯೆಂಬುದು ಮಾತ್ರ ಇನ್ನೂ ಸ್ಪಷ್ಟವಿಲ್ಲ.


ಪಂಚ ಮಹಾಭೂತಗಳ ಬಗ್ಗೆ ಹಾಗೂ ಪ್ರಕೃತಿ–ಪುರುಷರ ಏಕತೆಯ ಬಗ್ಗೆ ಉದಾತ್ತ ವಿಚಾರಗಳನ್ನಿಟ್ಟುಕೊಂಡು ಬಂದ ನಾವು ಕಳೆದ ಕೆಲವೇ ದಶಕಗಳಲ್ಲಿ ನೀರು, ಗಾಳಿ, ಭೂಮಿ, ಸಸ್ಯ, ಪ್ರಾಣಿಗಳ ಮಧ್ಯೆ ಹೀಗೇಕೆ ಸಮತೋಲನ

©KTBS Not to be republished

ಬಿಗಡಾಯಿಸುವಲ್ಲಿ ತಲ್ಲೀನರಾಗಿದ್ದೇವೆ? ಅಭಿವೃದ್ಧಿ ಎಂದರೆ ಅರಣ್ಯ ಬಲಿದಾನ, ಬಂಜರು ಭೂಮಿಯ ವಿಸ್ತರಣೆ, ನೆಲಜಲ ಮಾಲಿನ್ಯ ಅನಿವಾರ್ಯವೆಂಬುದನ್ನು ಒಪ್ಪಿಕೊಳ್ಳತೊಡಗಿದ್ದೇವೆ ?

ಬುಲ್‌ಡೋಜರ್ ಸಂಸ್ಕೃತಿ ನಮಗೇಕೆ ಅಪ್ಯಾಯಮಾನವಾಗುತ್ತಿದೆ!?

**ಕೃತಿಕಾರರ ಪರಿಚಯ:**



ಉತ್ತರಕನ್ನಡ ಜಿಲ್ಲೆಯ ಸಿದ್ಧಾಪುರ ತಾಲೂಕಿನ ಬಕ್ಕೆಮನೆಯಲ್ಲಿ ೧೯೪೮ ಫೆಬ್ರವರಿ ೧೪ರಂದು ಜನಿಸಿದ ನಾಗೇಶ ಹೆಗಡೆಯವರು, ಪರಿಸರದ ಬಗೆಗೆ ಗಾಢವಾಗಿ ಚಿಂತಿಸುವ ಪ್ರಮುಖ ಲೇಖಕರು. ಇವರು ವೈಜ್ಞಾನಿಕ ವಿಚಾರಗಳನ್ನು ಕನ್ನಡದಲ್ಲಿ ಸೊಗಸಾಗಿ ನಿರೂಪಿಸುತ್ತಾರೆ. ಇವರ ಕೃತಿಗಳು: 'ನಮ್ಮೊಳಗಿನ ಬ್ರಹ್ಮಾಂಡ', 'ಅಭಿವೃದ್ಧಿಯ ಅಂಧಯುಗ', 'ಗಗನ ಸಖಿಯರ ಸೆರಗಸಿಡಿದು', 'ಗುಳಿಗೆಗುಮ್ಮ', 'ಅಂತರಿಕ್ಷದಲ್ಲಿ ಮಹಾಸಾಗರ', 'ಮಂಗಳಲೋಕದಲ್ಲಿ ಮಾನವ', 'ಪ್ರತಿದಿನ ಪರಿಸರದಿನ'. ಇವರ ವಿಶಿಷ್ಟ ಕೃತಿ 'ಇರುವುದೊಂದೇ ಭೂಮಿ'ಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪುರಸ್ಕಾರ ದೊರೆತಿದೆ. ರಾಜ್ಯೋತ್ಸವ ಪ್ರಶಸ್ತಿ, ವಿಜ್ಞಾನ ಅಕಾಡೆಮಿ ಪ್ರಶಸ್ತಿ ಮುಂತಾದುವು ಇವರಿಗೆ ದೊರೆತಿವೆ.

'ಬುಲ್‌ಡೋಜರ್ ಸಂಸ್ಕೃತಿ' ಪಠ್ಯಭಾಗವನ್ನು **'ಇರುವುದೊಂದೇ ಭೂಮಿ'** ಕೃತಿಯಿಂದ ಆರಿಸಲಾಗಿದೆ.

**ಪದಗಳ ಅರ್ಥ**

ಅಧ್ವಾನ–ತೊಂದರೆ, ಹದಗೆಟ್ಟ;
ಅದೃಷ್ಟ–ಭಾಗ್ಯ;
ಅನಾಮತ್ತು–ಇಡಿಯಾಗಿ, ಪೂರ್ತಿಯಾಗಿ;
ಆಪದ್ಬಾಂಧವ– ಕಷ್ಟಕಾಲದಲ್ಲಿ ಸಹಾಯಕ್ಕೆ ಬರುವವ.
ಕಬಂಧ–ಮುಂಡ, ತಲೆಯಿಲ್ಲದ ದೇಹ;
ಕುಡುಗೋಲು–ಕೊಯ್ಯುವ ಸಾಧನ;
ತೊತ್ತು–ಸೇವಕ/ಸೇವಕಿ;
ದಿಬ್ಬಣ–ಮದುವೆಯ ಮೆರವಣಿಗೆ;
ನಿರ್ಗತಿಕ– ಗತಿಯಿಲ್ಲದವ;
ಪಾವಟಿಗೆ–ಮೆಟ್ಟಿಲು;
ಬುಲ್ಡೋಜರ್– ಬೃಹತ್ ಕೆಲಸವನ್ನು ಮಾಡಲು ಬಳಸುವ ಒಂದು ಸಾಧನ;
ಬೆಕ್ಕಸಬೆರಗಾಗು–ವಿಸ್ಮಯಗೊಳ್ಳು;
ಭೂವಿಜ್ಞಾನ–ಭೂಮಿಯ ರಚನೆಯ ಅಧ್ಯಯನ ಶಾಸ್ತ್ರ;
ಮಡುಗಟ್ಟು–ನಿಂತಲ್ಲೆ ನಿಲ್ಲು;
ವಿಕೃತಿ–ಕುರೂಪ;
ವಿದಾಯ–ಬೀಳ್ಕೊಡುಗೆ.

**ಅಭ್ಯಾಸ**

**ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ನಾಗೇಶ್ ಹೆಗಡೆಯವರು ಹೈಸ್ಕೂಲು ಶಿಕ್ಷಣವನ್ನು ಪಡೆದದ್ದು ಯಾವ ಊರಿನಲ್ಲಿ?

೨. ನಾಗೇಶ್ ಹೆಗಡೆಯವರಿಗೆ ಬುಲ್ಡೋಜರ್ ತೀರಾ ಸಮೀಪವಾದುದು ಯಾವಾಗ?

©KTBS Not to be republished

೩. ಲೇಖಕರು ಹೇಳಿರುವಂತೆ ಮುಂದಿನ ಇಡೀ ಪೀಳಿಗೆಯ ಬದುಕು ದುಸ್ತರವಾಗುವಂತೆ ಮಾಡಿದ ಅಪರಾಧಿ ಯಾರು?

೪. "ಹತ್ತು ಲಕ್ಷ ಬಡಜನರನ್ನು ಹಾಗೂ ಆದಿನಿವಾಸಿಗಳನ್ನು ನಿರಾಶ್ರಿತರನ್ನಾಗಿ ಮಾಡಲಿದೆ" ಎಂದು ನಾಗೇಶ ಹೆಗಡೆ ಹೇಳಿರುವುದು ಯಾವ ಯೋಜನೆಯನ್ನು ಕುರಿತು.

೫. ಭದ್ರಾನದಿಗೆ ಬೆಟ್ಟದಷ್ಟು ಮೆಕ್ಕಲು ಸೇರಲು ಕಾರಣವೇನು?

೬. ಅಭಿವೃದ್ಧಿಗೆ ಯಾವುದು ಅನಿವಾರ್ಯವೆಂದು ಒಪ್ಪಿಕೊಳ್ಳತೊಡಗಿದ್ದೇವೆ ಎಂದು ನಾಗೇಶ್ ಹೆಗಡೆಯವರು ಹೇಳಿದ್ದಾರೆ?

೭. ಬುಲ್ಡೋಜರ್ ಸಂಸ್ಕೃತಿ ಲೇಖನದಲ್ಲಿ ಹೇಳಿರುವಂತೆ ನಾವು ಯಾವುದರಲ್ಲಿ ತಲ್ಲೀನವಾಗಿದ್ದೇವೆ?

೮. ನಾವು ಯಾವ ವಿಚಾರದಲ್ಲಿ ಉದಾತ್ತ ವಿಚಾರಗಳನ್ನು ಇಟ್ಟುಕೊಂಡು ಬಂದಿದ್ದೇವೆಂದು ಹೆಗಡೆಯವರು ಹೇಳಿದ್ದಾರೆ?

**ಆ) ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ :**

೧. ಮೊದಲಬಾರಿ ಬುಲ್ಡೋಜರ್ ಯಂತ್ರವನ್ನು ನೋಡಿದ ಸನ್ನಿವೇಶವನ್ನು ನಾಗೇಶ್ ಹೆಗಡೆಯವರು ಹೇಗೆ ವರ್ಣಿಸಿದ್ದಾರೆ?

೨. ಯಡಳ್ಳಿ ಜನರ ಕೋಮಲ ಭಾವನೆಗಳನ್ನು ಬುಲ್ಡೋಜರ್ ಘಾಸಿಗೊಳಿಸಿದ್ದು ಹೇಗೆ?

೩. ಬುಲ್ಡೋಜರ್ ಕುಡುಗೋಲಿನಷ್ಟೇ ಅಗತ್ಯ ಏಕೆ?

೪. ಬುಲ್ಡೋಜರ್ ಬಳಕೆಯಿಂದಾಗಿರುವ ಅನಾಹುತಗಳಾವುವು?

**ಇ) ಕೆಳಗಿನ ನುಡಿಗಳ ಸಂದರ್ಭವನ್ನು ಸ್ವಾರಸ್ಯ ಸಹಿತ ವಿವರಿಸಿರಿ.**

೧. "ಮಕ್ಕಳು ದಿಬ್ಬಣದಂತೆ ಅದರೊಂದಿಗೇ ನಡೆಯುತ್ತ ಬಂದೆವು"

೨. "ಶಿಸ್ತಿನ ಯೋಧನಂತೆ ಠಕ್ಕೆಂದು ಪಕ್ಕಕ್ಕೆ ತಿರುಗುತ್ತ ರಸ್ತೆ ಸೇರಿ ತನ್ನ ಹಾದಿ ಹಿಡಿಯಿತು"

೩. "ಆದರೂ ಕಾಂಪ್ರಮೈಸ್ ಸಾಧ್ಯವಾಗುತ್ತಿಲ್ಲ"

**ಈ) ಕೊಟ್ಟಿರುವ ಪದಗಳಲ್ಲಿ ಸರಿಯಾದದನ್ನು ಆರಿಸಿಕೊಂಡು ಬಿಟ್ಟ ಸ್ಥಳ ತುಂಬಿರಿ.**

೧. ಅಲ್ಯುಮಿನಿಯಮ್ ಅದಿರಿನ ಹೆಸರು __________

ಅ) ಬಾಕ್ಸಾಯಿಟ್ ಬ) ಹೆಮಟೈಟ್ ಕ) ಮ್ಯಾಗ್ನಟೈಟ್ ಡ) ಕ್ರೋಮೈಟ್

೨. ಅನ್ನ ಬೇಯಿಸಲು ಬೇಕಾಗಿರುವುದು ಈ ಲೋಹದ ಪಾತ್ರೆ---------

ಅ) ಬಂಗಾರ ಆ) ಕಬ್ಬಿಣ ಇ) ಅಲ್ಯುಮಿನಿಯಮ್ ಈ) ಪ್ಲಾಸ್ಟಿಕ್.

೩. ಯಡಳ್ಳಿ ಈ ತಾಲೂಕಿನ ಹಳ್ಳಿಯಾಗಿದೆ.

ಅ) ಶಿರಸಿ ಬ) ಸಿದ್ದಾಪುರ ಕ) ಕುಮಟಾ ಡ) ಕಾರವಾರ

Not to be republished ©KTBS

೪. ನಾಗೇಶ ಹೆಗಡೆಯವರು ಬುಲ್ಡೋಜರನ್ನು ಇದಕ್ಕೆ ಹೋಲಿಸಿದ್ದಾರೆ----------

ಅ) ಕುಡುಗೋಲು ಆ) ಕೊಡಲಿ ಇ) ಗುದ್ದಲಿ ಈ) ಹಾರೆ.

೫. ಬುಲ್ಡೋಜರ್ ಮೇಲೆ ಎತ್ತರದಲ್ಲಿ ಕುಳಿತಿದ್ದ ಚಾಲಕನು ಮಕ್ಕಳ ಕಣ್ಣಿಗೆ------ನಂತೆ ಕಂಡನು

ಅ) ಮಂಗ ಆ) ಮದುಮಗೆ ಇ) ಹನುಮ ಈ) ನಾಯಕ

## ಭಾಷಾಭ್ಯಾಸ

**ಅ) ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿ ಹೆಸರನ್ನು ತಿಳಿಸಿರಿ.**

ಈಗೀಗ, ಜಲಾಶಯ, ಲಕ್ಷಾಂತರ, ಫಲಾಫಲ, ಸಂಗ್ರಹಾಲಯ, ಆಪದ್ಬಾಂಧವ, ಅತ್ಯಂತ.

**ಆ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.**

ನಿರಾಶ್ರಿತ, ಅಭಿವೃದ್ಧಿ, ಕೆಳಗೆ, ಸಮೀಪ, ಶಕ್ತಿ, ನಷ್ಟ.

**ಇ) ಕೆಳಗಿನವುಗಳಲ್ಲಿ ದ್ವಿರುಕ್ತಿ, ಅನುಕರಣಾವ್ಯಯ, ಜೋಡುನುಡಿಗಳನ್ನು ವಿಂಗಡಿಸಿ ಬರೆಯಿರಿ.**

ಗುಡು ಗುಡು, ಠಕ್ಕೆಂದು, ಗಿಡಗಂಟೆ, ದಢಾರೆಂದು, ಭಾರೀ ಭಾರೀ, ಬೇಕೇ ಬೇಕು, ರಾಶಿ ರಾಶಿ, ಹತ್ತಿರ ಹತ್ತರ, ಓಡಿದ್ದೇ ಓಡಿದ್ದು.

ಈ) 'ಬುಲ್ಡೋಜರ್ ಸಂಸ್ಕೃತಿ' ಲೇಖನದಲ್ಲಿ ಬಂದಿರುವ ಅನ್ಯದೇಶ್ಯ ಪದಗಳನ್ನು ಸಂಗ್ರಹಿಸಿ ಬರೆಯಿರಿ.

## ಭಾಷಾ ಚಟುವಟಿಕೆ

ಅ) ನಾಗೇಶ ಹೆಗಡೆಯವರ 'ಇರುವುದೊಂದೇ ಭೂಮಿ' ಕೃತಿಯನ್ನು ಓದಿರಿ.

ಆ) ಬುಲ್ಡೋಜರ್ ಯಂತ್ರದಿಂದ ಆಗುವ ಅನುಕೂಲ ಅನನುಕೂಲಗಳನ್ನು ಕುರಿತು ಚರ್ಚಿಸಿ. ಕಿರು ಪ್ರಬಂಧವನ್ನು ಬರೆಯಿರಿ.

## ವ್ಯಾಕರಣ

ನಾಮಪದಗಳ ಪ್ರಭೇದಗಳ ಬಗೆಗೆ ಹಿಂದಿನ ತರಗತಿಗಳಲ್ಲಿ ಓದಿರುವಿರಿ; ಮುಂದಿನ ತರಗತಿಯಲ್ಲಿ ಇನ್ನೂ ಹೆಚ್ಚು ಮಾಹಿತಿಯನ್ನು ತಿಳಿಯುವಿರಿ. ಸರ್ವನಾಮದ ಬಗೆಗೆ ಈಗ ತಿಳಿಯೋಣ.

©KTBS Not to be republished

## ಸರ್ವನಾಮ

**ಸರ್ವನಾಮ:** ವಸ್ತುವಾಚಕಗಳಾದ ನಾಮಪದಗಳ ಸ್ಥಾನದಲ್ಲಿ ನಿಂತು ಅವನ್ನು ಸೂಚಿಸುವ (ಬೋಧಿಸುವ)ಶಬ್ದಗಳೇ ಸರ್ವನಾಮಗಳು. ಸರ್ವನಾಮಗಳಲ್ಲಿ ಮುಖ್ಯವಾಗಿ ಮೂರು ವಿಧ:

(೧) ಪುರುಷಾರ್ಥಕ ಸರ್ವನಾಮಗಳು.

(೨) ಪ್ರಶ್ನಾರ್ಥಕ ಸರ್ವನಾಮಗಳು.

(೩) ಆತ್ಮಾರ್ಥಕ ಸರ್ವನಾಮಗಳು.

೧. **ಪುರುಷಾರ್ಥಕ ಸರ್ವನಾಮಗಳು:** ಇವುಗಳಲ್ಲಿ ಮತ್ತೆ ಮೂರು ಉಪವಿಭಾಗಗಳಿವೆ.

ಅವೆಂದರೆ: ಉತ್ತಮ ಪುರುಷ, ಮಧ್ಯಮ ಪುರುಷ ಮತ್ತು ಪ್ರಥಮ ಪುರುಷ (ಅನ್ಯಪುರುಷ)

**ಉತ್ತಮ ಪುರುಷ ಸರ್ವನಾಮಗಳು:** ನಾನು–ನಾವು

**ಮಧ್ಯಮ ಪುರುಷ ಸರ್ವನಾಮಗಳು:** ನೀನು–ನೀವು

**ಪ್ರಥಮ (ಅನ್ಯ)ಪುರುಷ ಸರ್ವನಾಮಗಳು:** ಅವನು–ಅವರು, ಅವಳು–ಅವರು, ಅದು–ಅವು.

೨. **ಪ್ರಶ್ನಾರ್ಥಕ ಸರ್ವನಾಮಗಳು:** ಪ್ರಶ್ನೆಗೆ ಸಂಬಂಧಿಸಿದ ಶಬ್ದ ಹಾಗೂ ಹೆಸರುಗಳು.

ಉದಾಹರಣೆ:– ಯಾವುದು, ಏನು, ಏತರದು, ಆವುದು, ಏನು, ಏನ್ ಇತ್ಯಾದಿ.

೩. **ಆತ್ಮಾರ್ಥಕ ಸರ್ವನಾಮಗಳು:** ಆತ್ಮ ಸಂಬೋಧನೆಗೆ ಸಂಬಂಧಿಸಿದ ಶಬ್ದ

ಉದಾಹರಣೆ: ತಾನು–ತಾವು.

**ಶ್ರಮದ ಮೂಲದಲ್ಲೇ ಆನಂದದ ಅನುಭವ ಅಡಗಿದೆ**

*****

©KTBS Not to be republished

# ೧೫. ಸೂಲಗಿತ್ತಿ ನರಸಮ್ಮ

– ಬಾ.ಹ. ರಮಾಕುಮಾರಿ

**ಪ್ರವೇಶ :** ಸಾಧನೆ ಯಾರೊಬ್ಬರ ಸೊತ್ತೂ ಅಲ್ಲ. ಬಡತನ–ಸಿರಿತನ, ಮೇಲು–ಕೀಳು, ಅಕ್ಷರಸ್ಥ–ಅನಕ್ಷರಸ್ಥ ಎಂಬ ಯಾವ ಭೇದವೂ ಅದಕ್ಕಿಲ್ಲ. ಅಗಾಧ ಪರಿಶ್ರಮ, ಪ್ರಾಮಾಣಿಕ ಪ್ರಯತ್ನ, ನಿಸ್ವಾರ್ಥ ಸೇವಾಭಾವನೆ ಇರುವ ಕಡೆ ಕೀರ್ತಿ ತಾನಾಗಿಯೇ ಹುಡುಕಿಕೊಂಡು ಬರುತ್ತದೆ. ಯಶಸ್ವೀ ವ್ಯಕ್ತಿಗಳ ಜೀವನ ಎಲ್ಲಾ ವಯೋಮಾನದವರಿಗೂ ಸ್ಫೂರ್ತಿ ನೀಡುತ್ತದೆ. ಈ ಪಾಠದಲ್ಲಿ ಬರುವ ನರಸಮ್ಮಜ್ಜಿ, ಶಾಲೆಯ ಮೆಟ್ಟಿಲನ್ನು ಏರದಿದ್ದರೂ ವಿಶ್ವವಿದ್ಯಾಲಯದ ಡಾಕ್ಟರೇಟ್ ಪದವಿಗೆ ಭಾಜನರಾದವರು. ಪಾರಂಪರಿಕ ವೈದ್ಯೋಪಚಾರ ಮಾಡುತ್ತಾ ೯೪ರ ಹರೆಯದಲ್ಲೂ ತಮ್ಮ ಕಾಯಕ ಮುಂದುವರಿಸಿರುವವರು. ಸರಳತೆಯ ಸಾಕಾರವಾಗಿರುವ ವ್ಯಕ್ತಿಯೊಬ್ಬರ ಮುಗ್ಧತೆ ಹಾಗೂ ಸಾಧನೆಯ ಪರಿಚಯ ಮಾಡಿಕೊಡುವುದು ಈ ಗದ್ಯಭಾಗದ ಆಶಯವಾಗಿದೆ.

©KTBS Not to be republished

ಸಾವಿರ ಹೆರಿಗೆಯ ಸೂಲಗಿತ್ತಿ ನರಸಮ್ಮಜ್ಜಿ ಈಗ ಯಾರಿಗೆ ತಾನೆ ಗೊತ್ತಿಲ್ಲ! ಸಾಲುಮರದ ತಿಮ್ಮಕ್ಕ ಮತ್ತು ಈ ನರಸಮ್ಮಜ್ಜಿ ತುಮಕೂರು ಜಿಲ್ಲೆಗೆ ಎರಡು ಕಣ್ಣುಗಳಿದ್ದಂತೆ. ಇಬ್ಬರಿಗೂ ದೊಡ್ಡ ದೊಡ್ಡ ಪ್ರಶಸ್ತಿಗಳು ಬಂದಿವೆ. ಸಾಲುಮರದ ತಿಮ್ಮಕ್ಕ ಅವರ ಜನ್ಮಸ್ಥಳ ಗುಬ್ಬಿ ತಾಲ್ಲೂಕಿನ ಕಕ್ಕೇನಹಳ್ಳಿ. ಈ ಹಳ್ಳಿಯನ್ನು ಬಿಳಿಕಲ್ ಬಾರೆ ಎಂದೂ ಕರೆಯುತ್ತಾರೆ. ನರಸಮ್ಮನವರು ತಿಮ್ಮಕ್ಕನಿಗಿಂತಲೂ ಹಿರಿಯರು ಹಾಗೂ ಹಿಂದುಳಿದ ಪ್ರದೇಶವಾದ ಪಾವಗಡದವರು. ಈ ಇಬ್ಬರೂ ಬಸ್ ಪ್ರಯಾಣವನ್ನೇ ಸರಿಯಾಗಿ ಮಾಡಿದವರಲ್ಲ. ನರಸಮ್ಮಜ್ಜಿಗೆ ಈ ಬಾರಿ 'ರಾಷ್ಟ್ರೀಯ ವಯೋಶ್ರೇಷ್ಠ ಸಮ್ಮಾನ್ ಪ್ರಶಸ್ತಿ' ಬಂದಾಗ ಅದನ್ನು ಸ್ವೀಕರಿಸಲು ದೆಹಲಿಗೆ ಹೋಗಬೇಕಾಯಿತು. ಆಗ ಅವರು ವಿಮಾನದಲ್ಲಿ ಪಯಣಿಸಿದ ಅನುಭವವು ಸ್ವಾರಸ್ಯಕರವಾಗಿದೆ.

ತನ್ನ ಮೂರನೇ ಮಗನ ಮದುವೆಯಾಗುವ ತನಕ ಬಸ್ಸನ್ನೇ ಹತ್ತದ ಅಜ್ಜಿಗೆ ೧೨ನೆಯ ಮಗನೊಂದಿಗೆ ದೆಹಲಿಗೆ ವಿಮಾನಯಾನ ಮಾಡುವ ಅವಕಾಶ ದೊರಕಿತು. ಈ ಕುರಿತು ಮಾಧ್ಯಮದವರ ಪ್ರಶ್ನೆಗೂ ಅವರ ಮುಗ್ಧ ಉತ್ತರ ಖುಷಿ ತರಿಸುವಂತಿತ್ತು. 'ಇಮಾನ ನಮ್ಮೂರ್ನಾಗೆ ಮ್ಯಾಲೆ ಹಾರಿ ಹೋಗ್ವಾಗ ಅದ್ನೇ ನೋಡ್ತಿದ್ದೆ. ಅದು ಆಕಾಶದಾಗೆ ಮುಳುಗಿ ಹೋಗುತ್ತಿತ್ತು. ಆದ್ರೆ ಅಷ್ಟು ಸಣ್ಣ ಪೆಟ್ಟಿಗೆಯಾಗೆ ಹ್ಯಾಂಗಪ್ಪ ಕೂತ್ಕಂಡ್ ಹೋಗಾದು' ಎಂದು ಅವರಿಗೇ ಪ್ರಶ್ನೆ ಹಾಕಿದಾಗ ಎಲ್ಲರೂ ನಕ್ಕು ಸುಮ್ಮನಾದರು.

ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದೊಳಗೆ ಹೋದಾಗ ಅಜ್ಜಿಯ ವಯೋಮಾನಕ್ಕೆ ತಕ್ಕ ಸೌಲಭ್ಯ ಒದಗಿಸಿ ವೀಲ್‌ಚೇರಿನಲ್ಲಿ ಏರ್‌ಇಂಡಿಯಾದ ಸಿಬ್ಬಂದಿ ಕರೆದುಕೊಂಡು ಹೋಗಿ ವಿಮಾನದ ಮುಂಭಾಗದ ಕೊನೇ ಸೀಟಿನಲ್ಲಿ ಕೂರಿಸಿದರು. ಕಿಟಕಿ ಪಕ್ಕದಲ್ಲಿ ಒಬ್ಬ ಸೂಟ್ಧಾರಿ ದಢೂತಿ ವ್ಯಕ್ತಿ ಆಸೀನರಾಗಿದ್ದರು. ಆ ವ್ಯಕ್ತಿಯನ್ನು ಕಿಟಕಿ ತೆರೆಯಿರಿ ಎಂದ ಮಗ, ಆತ ತೆಗೆಯಲು ಒಪ್ಪಲಿಲ್ಲ. ಹೀಗಾಗಿ ವಿಮಾನದಿಂದ ಭೂಮ್ಯಾಕಾಶಗಳನ್ನು ನೋಡಲಾಗಲಿಲ್ಲ. ಅಷ್ಟರಲ್ಲಿ ವಿಮಾನದಲ್ಲಿ ಊಟ ನೀಡಿದರು. ತನಗೆ ಬೇಕಾದ್ದನ್ನು ಆಯ್ಕೆ ಮಾಡಿ ಸ್ವಲ್ಪ ತೆಗೆದುಕೊಂಡು ತನ್ನ ಹಲ್ಲಿಲ್ಲದ ಬಾಯಿಯಲ್ಲಿ ನುರಿಸಿಕೊಂಡು ಸ್ವಲ್ಪ ತಿಂದು ಅಜ್ಜಿ ನಿದ್ದೆಗೆ ಜಾರಿದರು.

ನಿದ್ದೆಯಿಂದೆದ್ದ ಅಜ್ಜಿ "ಏನೋ ಮಗಾ ಅದೇನೋ ಡೆಲ್ಲಿಗೆ ಇಮಾನ್ದಲ್ಲಿ ಕರ್ಕೊಂಡೋಯ್ತೀನಿ ಅಂತ ಹೇಳಿದ್ದೆ. ಇದ್ಯಾವುದೋ ಆಫೀಸ್ನಾಗೆ ಕೂರ್ಸಿ ತಿಂಡಿ ಕೊಡಿಸಿ ಬಿಟ್ಟೆ. ಯಾವಾಗ ಇಮಾನ್ದಾಗೆ ಹೋಗೋದು" ಅಂತು ಅಜ್ಜಿ. ಅಲ್ಲಿಯವರೆಗು ಅಜ್ಜಿ ವಿಮಾನಯಾನವನ್ನು ಅನುಭವಿಸುತ್ತಿದೆ ಎಂದುಕೊಂಡಿದ್ದ ಮಗನಿಗೆ ಓಹೋ ಅಜ್ಜಿಗೆ ವಿಮಾನ್ದಲ್ಲಿ ಹೋಗ್ತಾ ಇರೋದು ಗೊತ್ತಾಗ್ತಾ ಇಲ್ಲ ಎಂದೆನಿಸಿ "ವಿಮಾನ್ದಲ್ಲೇ ಹೋಗ್ತಾ ಇದ್ದಿವಿ, ಇದೇ ವಿಮಾನ. ಆಫೀಸಲ್ಲ" ಎಂದು ಮಗ ಮನವರಿಕೆ ಮಾಡಲು ಪ್ರಯತ್ನಿಸಿದ. ಅದನ್ನೊಪ್ಪದ ಅಜ್ಜಿ "ಏನೋ ನಿಮ್ಮಮ್ಮನಿಗೆ ಓದು ಬರಹ ಬರಾಕಿಲ್ಲ ಅಂತೇಳಿ ಆಫೀಸ್ನಾಗ್ ಕೂರ್ಸಿ ಇಮಾನ ಅಂದ್ರೆ ನಾನು ನಂಬಿ ಬಿಡ್ತಿನಾ? ಇಮಾನ ಎಷ್ಟು ಚಿಕ್ಕದಾಗಿರುತ್ತೆ? ಇದು ಇಷ್ಟು ದೊಡ್ಡ ಬಿಲ್ಡಿಂಗ್ ತರಾ ಇದೆ."

"ನೀನು ಇಮಾನ್ದಲ್ಲಿ ಕರ್ಕೊಂಡು ಡೆಲ್ಲಿಗೆ ಹೋಗಾದು ಯಾವಾಗ ಹೇಳು?" ಎಂದು ವರಾತ ಹಚ್ಚಿತು. ಅಷ್ಟರಲ್ಲಿ ವಿಮಾನ ದೆಹಲಿ ವಿಮಾನ ನಿಲ್ದಾಣದಲ್ಲಿ ಲ್ಯಾಂಡಿಂಗ್ ಆಗ್ತಾ ಇತ್ತು. ಆಗ ದಢೂತಿ ವ್ಯಕ್ತಿ ಕಿಟಕಿ ತೆಗೆದ. "ಅಮ್ಮ ಇದೇ ಡೆಲ್ಲಿ ನೋಡು"ಎಂದ ಮಗ, ಹೊರಗಡೆ ನೋಡಿದ ಅಜ್ಜಿ ನೆಲದ ಮೇಲೆ ಹೋಗುತ್ತಿದ್ದ ವಿಮಾನವನ್ನು ನೋಡಿ, "ಏಯ್ ಕಾರ್ನಲ್ಲಿ ಕರ್ಕೊಂಡೋಗ್ತಾ ಇದ್ದೀಯ, ವಿಮಾನ ಅಂತ ಸುಳ್ ಹೇಳ್ತೀಯಾ" ಎಂದು ವಾದಿಸಿತು. ಮಾತು ಮುಂದುವರೆಸದೆ ಮಗ ಮೌನಕ್ಕೆ ಶರಣಾದ. ಎರಡು ದಿನ ದೆಹಲಿಯಲ್ಲಿದ್ದರೂ ಅಜ್ಜಿಗೆ ತಾನು ವಿಮಾನದಲ್ಲಿ ಬಂದೇ ಇಲ್ಲ ಎಂಬ ಭಾವನೆ ಬಲವಾಗಿ ಬೇರೂರಿತ್ತು. ಪ್ರಶಸ್ತಿ ಸ್ವೀಕರಿಸಿದ ನಂತರ ದೆಹಲಿಯಿಂದ ಬೆಂಗಳೂರಿಗೆ ವಾಪಸ್ಸು ಹೋಗಲು ದೆಹಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಾಗ, ಆಗ ತಾನೇ ಇಳಿಯುತ್ತಿದ್ದ ವಿಮಾನವನ್ನು ಮತ್ತು ನಿಂತಿದ್ದ ವಿಮಾನ ಎರಡನ್ನೂ ಅಜ್ಜಿಗೆ ಹತ್ತಿರದಿಂದ ತೋ-ರಿಸಿದ ಮಗಾ. "ಇದೇನಪ್ಪಾ ವಿಮಾನ ಬಸ್ಸಿಗಿಂತ ದೊಡ್ಡದಾಗಿದೆ. ನಮ್ಮೂರಲ್ಲಿ ಅಷ್ಟು ಚಿಕ್ಕದಾಗಿ ಕಾಣ್ತವೆ. ಸಣ್ಣ ಊರಲ್ಲಿ ಸಣ್ಣವು ದೊಡ್ಡ ಊರಲ್ಲಿ ದೊಡ್ಡ ಇಮಾನ ಇರ್ತಾದೇನಪ್ಪಾ" ಅಂತು ಅಜ್ಜಿ.

ವಿಮಾನಯಾನದ ಪೂರ್ಣ ಅನುಭವವಾಗಲಿ ಎಂಬ ದೃಷ್ಟಿಯಿಂದ ಅಜ್ಜಿಯನ್ನು ಕಿಟಕಿಯ ಪಕ್ಕ ಕೂರಿಸಿದ ಮಗ. ವಿಮಾನ ನೆಲದ ಮೇಲಿನಿಂದ ಟೇಕಾಫ್ ಆಗುವುದನ್ನು ಹಾಗೂ ಗಗನದಲ್ಲಿ ಹಾರುವುದನ್ನು ತೋರಿಸಿದ. ನೋಡುತ್ತಲೇ ಇದ್ದ ಅಜ್ಜಿ ಬಿಳಿ ಮೋಡಗಳನ್ನು ಕಂಡು ಒಮ್ಮೆಗೆ "ಏಯ್ ನೋಡೋ ದೇವಾನುದೇವತೆಗಳೆಲ್ಲಾ ಇಲ್ಲೇ ಇರೋದು" (ಬಿಳಿ ಮೋಡಗಳು ಅಜ್ಜಿಗೆ ಕೈಲಾಸದಂತೆ, ಸ್ವರ್ಗಲೋಕದಂತೆ ಕಂಡಿರಬೇಕು) ಎಂದು ಅಕ್ಕ ಪಕ್ಕ ಗಮನಿಸುತ್ತಾ ಎಡಗಡೆ ಗಗನಸಖಿಯರನ್ನು ನೋಡಿ ದೇವಕನ್ನೆಯರು ಇಲ್ಲೇ ಬಂದ್ರು ನೋಡೋ ಎನ್ನುತ್ತಾ ಅವರಿಗೆ ಕೈ ಮುಗಿಯಿತು. ಅದನ್ನು ಕಂಡು ಅವರು ಅಜ್ಜಿಯ ಕೈಗಳನ್ನು ಹಿಡಿದು 'ನೀವು ದೊಡ್ಡವರು ನಮಗೆ ಕೈಮುಗಿಯಬಾರದು' ಎಂದು ಹಿಂದಿಯಲ್ಲಿ ಹೇಳಿದ ಮಾತು ಅಜ್ಜಿಗೆ ಅರ್ಥವಾಗಲಿಲ್ಲ. ಆದರೆ ಅಜ್ಜಿ ತನ್ನ ಕೈಗಳನ್ನು ಮುಟ್ಟಿ ಮುಟ್ಟಿ ನೋಡಿಕೊಳ್ಳುತ್ತಾ ದೇವಕನ್ನೆಯರು ನನ್ನ ಕೈ ಮುಟ್ಟಿಕೊಂಡ್ರಪ್ಪಾ ಎನ್ನುತ್ತಾ ಗಗನ ಸಖಿಯರನ್ನೇ ನೋಡುತ್ತಿತ್ತು.

ಮಗ ನಿಧಾನವಾಗಿ ಅವರು ವಿಮಾನದಲ್ಲಿ ಕೆಲಸ ಮಾಡುವ ಗಗನ ಸಖಿಯರು ದೇವಕನ್ನೆಯರಲ್ಲ ಎಂದು ಹೇಳಿದರೂ, ಅಜ್ಜಿ "ಗಗನ ಸಖಿಯರೋ ದೇವಕನ್ನೆಯರೋ ಯಾರೋ. ಕೈತೊಳೆದು ಮುಟ್ಟುವ ಹಾಗೆ ಎಷ್ಟೊಂದು ಚೆನ್ನಾಗಿದ್ದಾರೆ" ಎಂದು ಸಂತೋಷಪಟ್ಟಿತು. ದೇವಲೋಕಕ್ಕೆ ಹೋಗಿ ಬಂದಷ್ಟು ವಿಮಾನ ಪ್ರಯಾಣದಲ್ಲಿ ಅಜ್ಜಿ ಸಂಭ್ರಮಿಸಿತು.

©KTBS Not to be republished



ಆಧುನಿಕತೆಯ ಬಗ್ಗೆ ಏನೂ ಅರಿಯದ ಈ ಮುಗ್ಧಜೀವ ಯಾವುದೇ ವೈದ್ಯಕೀಯ ಉಪಕರಣಗಳಿಲ್ಲದೇ ಕೇವಲ ತನ್ನ ಹತ್ತು ಬೆರಳುಗಳನ್ನು ಉಪಯೋಗಿಸಿ ಸಾವಿರಾರು ಹೆರಿಗೆಗಳನ್ನು ಸಲೀಸಾಗಿ ಮಾಡಿರುವುದು ಸಾಧನೆಯೇ ಸರಿ. ಈಗ ಅಜ್ಜಿಯನ್ನು ಯಾರಾದರೂ ವಿಮಾನ ಪ್ರಯಾಣ ಹೇಗಿತ್ತು ಅಜ್ಜಿ ಎಂದು ಕೇಳಿದರೆ, ಬೊಚ್ಚು ಬಾಯಿ ಅಗಲಿಸಿ ಮನಸಾರೆ ನಕ್ಕು ಬಿಡುತ್ತದೆ. ಕಣ್ಣಲ್ಲಿ ವಿಮಾನಯಾನ ಮಾಡಿದ ಸಂತೃಪ್ತ ಸಮಾಧಾನದ ಮಿಂಚು ಮೂಡುತ್ತದೆ. ಪಾವಗಡದ ಸುತ್ತಮುತ್ತ ಹೆರಿಗೆ ಮಾಡಿಸಿಕೊಂಡು ಇದ್ದ ಅಜ್ಜಿ ಎಂದಾದರೂ ವಿಮಾನದಲ್ಲಿ ಓಡಾಡುವ ಕನಸು ಕಂಡಿತ್ತೇ! ಇಂತಹ ಅನೇಕ ಅನುಭವಾಮೃತಗಳು ಅಜ್ಜಿಯ ಬೆಚ್ಚನೆಯ ಎದೆಗೂಡಲ್ಲಿ ಬಚ್ಚಿಟ್ಟುಕೊಂಡಿವೆ. ಭಾವ ಮೀಟಿದರೆ ಒಂದೊಂದಾಗಿ ಅಲೆಯಂತೆ ಹೊರ ಮೂಡುತ್ತಿರುತ್ತವೆ.

ಇವರ ಸೇವೆ ಮತ್ತು ಸಾಧನೆಯನ್ನು ಅರಸಿ ಬಂದಿರುವ ಪ್ರಶಸ್ತಿಗಳು ಇವರನ್ನು ಅಲಂಕರಿಸಿವೆ. ೨೦೧೪ರಲ್ಲಿ ತುಮಕೂರು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪುರಸ್ಕಾರ, ಸ್ವಾಮಿ ವಿವೇಕಾನಂದ ಶಾಂತಿ ಪ್ರಶಸ್ತಿ, ವನಸಿರಿ ಪ್ರಶಸ್ತಿ, ಯಶಸ್ವಿ ಮಹಿಳಾ ಚೇತನ ಪ್ರಶಸ್ತಿ, ೨೦೧೩ರಲ್ಲಿ ಭಾರತ ಸರ್ಕಾರದಿಂದ ವಯೋಶ್ರೇಷ್ಠ ಸನ್ಮಾನ್ ರಾಷ್ಟ್ರ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ವೈದ್ಯರತ್ನ ಪ್ರಶಸ್ತಿ, ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ, ಪ್ರಸೂತಿ ವಿಶಾರದೆ, ಪ್ರಸೂತಿ ಪ್ರವೀಣೆ ಪ್ರಶಸ್ತಿ, ಜಾಂಬವ ರತ್ನ ಪ್ರಶಸ್ತಿ, ೨೦೧೨ರಲ್ಲಿ ಡಿ. ದೇವರಾಜು ಅರಸು ಪ್ರಶಸ್ತಿ, ಇಂದಿರಾ ಗಾಂಧಿ ಪ್ರಶಸ್ತಿ, ಕರ್ನಾಟಕ ಮದರ್ ತೆರೇಸಾ, ಸಂಪ್ರದಾಯ ಸೇವಾ ಪ್ರಶಸ್ತಿ, ೨೦೧೧ರಲ್ಲಿ ಗಡಿನಾಡು ರತ್ನ ಪ್ರಶಸ್ತಿ ಹಾಗೂ ೨೦೦೯ರಲ್ಲಿ ಮಹಿಳಾ ಸಾಧಕಿ ಪ್ರಶಸ್ತಿ ಮುಂತಾದ ಪ್ರಶಸ್ತಿಗಳು ದೊರಕಿವೆ.

ನರಸಮ್ಮ ಅವರಿಂದ ತರಬೇತಿ ಪಡೆದ ೧೮೫ ಜನ ಪ್ರಸೂತಿ ತಜ್ಞೆಯರು, ಅವರ ಹಾದಿಯಲ್ಲೇ ಸಾಗುತ್ತಿದ್ದಾರೆ. ಇವರೆಲ್ಲರ ಸೇವಾ ಕೈಂಕರ್ಯದ ಸದುಪಯೋಗಕ್ಕಾಗಿ ಉಚಿತ ಪ್ರಸೂತಿ ಆಸ್ಪತ್ರೆಯನ್ನು ಕಟ್ಟುವ ಯೋಜನೆಯನ್ನು ಡಾ। ಸೂಲಗಿತ್ತಿ ನರಸಮ್ಮನವರ ನೇತೃತ್ವದಲ್ಲಿ ರೂಪುಗೊಳಿಸಲಾಗುತ್ತಿದೆ. ಅದು ಬೇಗ ಸಾಕಾರವಾಗಲೆಂದು ಆಶಿಸೋಣ.

©KTBS Not to be republished

**ಕೃತಿಕಾರರ ಪರಿಚಯ:**



ಬಾ. ಹ. ರಮಾಕುಮಾರಿಯವರು ತುಮಕೂರು ಜಿಲ್ಲೆ ಬಾಣಸಂದ್ರ ಗ್ರಾಮದಲ್ಲಿ ೨. ೫. ೧೯೫೪ರಲ್ಲಿ ಜನಿಸಿದರು. ಕಂದಾಯ ಇಲಾಖೆಯಲ್ಲಿ ಉದ್ಯೋಗಿಯಾಗಿದ್ದ ಇವರು ಸಾಹಿತ್ಯ ಸಂಘಟನೆಗಳಲ್ಲಿ ನಿರಂತರವಾಗಿ ತೊಡಗಿಸಿಕೊಂಡಿರುವ ಕ್ರಿಯಾಶೀಲ ವ್ಯಕ್ತಿ. 'ಧಗಧಗಿಸುವ ಆತ್ಮಗಳು', 'ಕನಸಿನಾಳದ ಕಣ್ಣು' (ಲೇಖನ ಸಂಕಲನ), 'ಅಕ್ಕಮಹಾದೇವಿ' (ವ್ಯಕ್ತಿಚಿತ್ರ), 'ನಕ್ಕಾವು ಚುಕ್ಕಿ' (ಹನಿಗವನ) 'ಅನಾವರಣ', 'ಕಳೆದುಹೋಗಿದ್ದಾನೆ', 'ಅನಾಮಿಕ ಹಕ್ಕಿಯ ಸ್ವಾಗತ' ಮುಂತಾದ ಕೃತಿಗಳನ್ನು ಬರೆದಿದ್ದಾರೆ.

ಗಡಿನಾಡ ರತ್ನ ಡಾ॥ ಸೂಲಗಿತ್ತಿ ನರಸಮ್ಮ ಗದ್ಯಭಾಗವನ್ನು 'ಬಸ್ಸನ್ನೇ ಹತ್ತದ ನರಸಮ್ಮಜ್ಜಿ ವಿಮಾನ ಹತ್ತಿದಾಗ?..!' ಲೇಖನದಿಂದ ಸಂಗ್ರಹಿಸಲಾಗಿದೆ.

**ಪದಗಳ ಅರ್ಥ**

ಗಗನಸಖಿ–ವಿಮಾನದ ಪರಿಚಾರಕಿ;
ಟೇಕಾಫ್–ವಿಮಾನವು ನೆಲದಿಂದ ಮೇಲಕ್ಕೇರುವುದು;
ದೇವಕನ್ಯೆ–ದೇವಲೋಕದ ಅಪ್ಸರೆ;
ನಿದ್ದೆಗೆ ಜಾರು–ನಿದ್ದೆಮಾಡು;
ನಿಷ್ಕಾಮಸೇವೆ–ಯಾವ ಬಯಕೆಯೂ ಇಲ್ಲದೆ ಮಾಡುವ ಉಪಕಾರ;
ಬೇರೂರು–ಸ್ಥಿರವಾಗಿ ನೆಲಸು, ತಳವೂರು, ನೆಲೆನಿಲು;
ಬೊಚ್ಚು ಬಾಯಿ–ಹಲ್ಲಿಲ್ಲದ ಬಾಯಿ;
ಭೂಮ್ಯಾಕಾಶ–ಭೂಮಿ+ಆಕಾಶ;
ಮೌನಕ್ಕೆ ಶರಣು–ಮಾತಾಡದೆ ಇರುವುದು;
ರೋಚಕ ಮುಗ್ಧ–ಕಪಟವಿಲ್ಲದ, ಸರಳ ಮನಸ್ಸಿನ;
ರೋಚಕತೆ–ಹಿತಕರವಾದ, ಸುಖಕರವಾದ;
ಲ್ಯಾಂಡಿಂಗ್–ವಿಮಾನ ನೆಲದ ಮೇಲೆ ಇಳಿಯುವುದು;
ವರಾತ–ಒತ್ತಾಯ, ಬಲಾತ್ಕಾರ;
ವಯೋಮಾನ–ವಯಸ್ಸಿಗೆ ಅನುಗುಣವಾದ;
ವಿಚಲಿತ–ಕಂಗೆಡು;
ವಿಮಾನಯಾನ–ವಿಮಾನದಲ್ಲಿ ಸಂಚಾರ, ವಿಮಾನದಲ್ಲಿ ಪ್ರಯಾಣ;
ಸಲೀಸು–ಸುಲಭ, ಸರಾಗ, ನೇರವಾದ;
ಸಿಬ್ಬಂದಿ–ಕಚೇರಿಯ ನೌಕರವರ್ಗ;
ಸೂಲಗಿತ್ತಿ–ಹೆರಿಗೆ ಮಾಡಿಸಲು ಸಹಾಯ ಮಾಡುವವಳು.

**ಅಭ್ಯಾಸ**

**ಅ) ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ತುಮಕೂರು ಜಿಲ್ಲೆಯ ಎರಡು ಕಣ್ಣುಗಳಂತಿರುವ ಹಿರಿಯ ಜೀವಗಳೆಂದು ಎಂದು ಲೇಖಕಿ ಯಾರನ್ನು ಕರೆದಿದ್ದಾರೆ.?

೨. ನರಸಮ್ಮಜ್ಜಿಗೆ ವಿಮಾನದಿಂದ ಭೂಮ್ಯಾಕಾಶಗಳನ್ನು ಏಕೆ ನೋಡಲಾಗಲಿಲ್ಲ?

೩. ನರಸಮ್ಮಜ್ಜಿಯು ಗಗನ ಸಖಿಯರನ್ನು ಯಾರೆಂದು ತಿಳಿದುಕೊಂಡರು?

೪. ನರಸಮ್ಮಜ್ಜಿಯು ಬಿಳಿಮೋಡಗಳನ್ನು ಕಂಡೊಡನೆ ಏನೆಂದು ಉದ್ಗರಿಸಿದರು?

©KTBS Not to be republished

ಆ) **ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಬಸ್ಸನ್ನೇ ಏರದ ನರಸಮ್ಮಜ್ಜಿ ವಿಮಾನವೇರಲು ಕಾರಣವಾದ ಸಂದರ್ಭ ಯಾವುದು?
೨. ನರಸಮ್ಮಜ್ಜಿಯು ಮಾಧ್ಯಮದವರ ಪ್ರಶ್ನೆಗೆ ನೀಡಿದ ಮುಗ್ಧ ಉತ್ತರ ಯಾವುದು?

ಇ) **ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ನರಸಮ್ಮಜ್ಜಿಯು ವಿಮಾನದಲ್ಲಿ ಪಯಣಿಸಿದ ರೋಚಕ ಅನುಭವವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

೨. ನರಸಮ್ಮಜ್ಜಿಯ ಸೇವೆ ಮತ್ತು ಸಾಧನೆಗಳನ್ನು ಅರಸಿ ಬಂದಿರುವ ಪ್ರಶಸ್ತಿಗಳಾವುವು?

ಈ) **ಕೆಳಗಿನ ನುಡಿಗಳ ಸಂದರ್ಭವನ್ನು ಸ್ವಾರಸ್ಯ ಸಹಿತ ವಿವರಿಸಿರಿ.**

೧. "ಆಫೀಸ್ನಾಗ್ ಕೂರ್ಸಿ ಇಮಾನ ಅಂದ್ರೆ ನಾನು ನಂಬಿ ಬಿಡ್ತಿನಾ"

೨. "ಸಣ್ಣ ಊರಲ್ಲಿ ಸಣ್ಣವು ದೊಡ್ಡ ಊರಲ್ಲಿ ದೊಡ್ಡ ಇಮಾನ ಇರ್ತಾದೇನಪ್ಪಾ"

೩. "ಏಯ್ ನೋಡೋ ದೇವಾನುದೇವತೆಗಳೆಲ್ಲಾ ಇಲ್ಲೇ ಇರೋದು"

೪. "ನೀವು ದೊಡ್ಡವರು. ನಮಗೆ ಕೈ ಮುಗಿಯಬಾರದು"

ಉ) **'ಅ' ಪಟ್ಟಿಯನ್ನು 'ಆ' ಪಟ್ಟಿಗೆ ಹೊಂದಿಸಿ ಬರೆಯಿರಿ.**

| **'ಅ'** | **'ಆ'** |
|---|---|
| ೧. ನರಸಮ್ಮ | ದೇವನಹಳ್ಳಿ |
| ೨. ತಿಮ್ಮಕ್ಕ | ಕಕ್ಕೇನಹಳ್ಳಿ |
| ೩. ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ | ಬಾಣಸಂದ್ರ |
| ೪. ಬಾ.ಹ. ರಮಾಕುಮಾರಿ | ಗುಬ್ಬಿ |
| | ಪಾವಗಡ |

©KTBS Not to be republished

## ಭಾಷಾಭ್ಯಾಸ

**ಅ) ಮಾದರಿಯನ್ನು ಗಮನಿಸಿ. ಅದರಂತೆಯೇ ಕೆಳಗೆ ಕೊಟ್ಟಿರುವ ನುಡಿಗಟ್ಟುಗಳನ್ನು ಬಳಸಿ ಸ್ವಂತ ವಾಕ್ಯಗಳನ್ನು ರಚಿಸಿರಿ.**

**ಮಾದರಿ**

ಬಲವಾಗಿ ಬೇರೂರು : ಬಲವಾಗಿ ಬೇರೂರಿರುವ ಮೂಢನಂಬಿಕೆಗಳು ಸಮಾಜದ ಆರೋಗ್ಯಕ್ಕೆ ಹಾಗೂ ದೇಶದ ಅಭಿವೃದ್ಧಿಗೆ ಮಾರಕವಾಗಿವೆ.

ಮಿಂಚು ಮೂಡು, ಕನಸುಕಾಣು, ಮೌನಕ್ಕೆ ಶರಣಾಗು, ಮನಸಾರೆ ನಗು, ಕೈತೊಳೆದು ಮುಟ್ಟು, ಎರಡು ಕಣ್ಣುಗಳಿದ್ದಂತೆ.

**ಆ) ಇವುಗಳನ್ನು ಬಿಡಿಸಿ ಬರೆಯಿರಿ.**

ಭೂಮ್ಯಾಕಾಶ, ನಿಮ್ಮಮ್ಮ, ನಮ್ಮೂರು, ದೇವಾನುದೇವತೆ, ಹಲ್ಲಿಲ್ಲ, ಅನುಭವಾಮೃತ, ಅದನ್ನೊಪ್ಪದ.

**ಇ) ಕೆಳಗೆ ನೀಡಲಾಗಿರುವ ಆಡುಮಾತಿನ ಪದಗಳ ಗ್ರಾಂಥಿಕ ರೂಪವನ್ನು ಬರೆಯಿರಿ.**

ನಮ್ಮೂರ್ನಾಗೆ, ಕೂತ್ಕಂಡ್, ಕರ್ಕೊಂಡೋಯ್ತೀನಿ, ಇಮಾನ್ದಾಗೆ, ಇರ್ತಾದೇನಪ್ಪಾ.

## ಭಾಷಾ ಚಟುವಟಿಕೆಗಳು

ಅ) ನಿಸ್ವಾರ್ಥ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ನಿಮಗೆ ಗೊತ್ತಿರುವ ಯಾರಾದರೂ ಒಬ್ಬರನ್ನು ಕುರಿತು ಹತ್ತು ವಾಕ್ಯಗಳನ್ನು ಬರೆಯಿರಿ.

ಆ) 'ಜನ ಸೇವೆಯೇ ಜನಾರ್ಧನನ ಸೇವೆ'– ಈ ಮಾತನ್ನು ವಿಸ್ತರಿಸಿ ಬರೆಯಿರಿ.

ಇ) ಸಾವಿರ ಮಕ್ಕಳ ತಾಯಿ, ಗಡಿನಾಡರತ್ನ ಎಂದೇ ಪ್ರಸಿದ್ಧರಾಗಿರುವ ಸೂಲಗಿತ್ತಿ ನರಸಮ್ಮ ಅವರನ್ನು ಕುರಿತು ರಚನೆಯಾಗಿರುವ ಕವನಗಳನ್ನು ಸಂಗ್ರಹಿಸಿ ಓದಿರಿ.

## ವ್ಯಾಕರಣ

### ಲೇಖನ ಚಿಹ್ನೆಗಳು

ಬರವಣಿಗೆಯು ಸ್ಪಷ್ಟವಾಗಿ ಅರ್ಥವಾಗುವಲ್ಲಿ ಲೇಖನ ಚಿಹ್ನೆಗಳು ಪ್ರಮುಖ ಪಾತ್ರವಹಿಸುತ್ತವೆ ಎನ್ನುವುದನ್ನೂ ಕೆಲವು ಲೇಖನ ಚಿಹ್ನೆಗಳ ಬಳಕೆಯನ್ನೂ ಹಿಂದಿನ ತರಗತಿಯಲ್ಲಿ ತಿಳಿದಿದ್ದೀರಿ. ಇನ್ನೂ ಕೆಲವು ಲೇಖನ ಚಿಹ್ನೆಗಳ ಬಗೆಗೆ ಈಗ ತಿಳಿಯೋಣ.

©KTBS Not to be republished

**೧.ಆವರಣ ಚಿಹ್ನೆ–()** ಒಂದು ಶಬ್ದವನ್ನೋ ಅಥವಾ ವಾಕ್ಯವನ್ನೋ ಹೇಳಿ, ಅದಕ್ಕೆ ಸಮಾನಾರ್ಥಕ ಶಬ್ದವನ್ನೋ ವಿವರಣೆಯನ್ನೋ ಹೇಳುವಾಗ ಈ ಆವರಣ ಚಿಹ್ನೆಯನ್ನು ಉಪಯೋಗಿಸ ಬೇಕು.

**೨. ವಿವರಣಾತ್ಮಕ ಚಿಹ್ನೆ–(:)** ಒಂದು ಅಭಿಪ್ರಾಯದ ವಿವರಣೆ ಮುಂದಿನಂತೆ ಇದೆ, ಎಂದು ತೋರಿಸುವಾಗ ಸಾಮಾನ್ಯವಾಗಿ ':' ಈ ಚಿಹ್ನೆ ಹಾಕುವುದುಂಟು.

**೩. ಅಧಿಕ ಚಿಹ್ನೆ–(+)** ಎರಡು ಪದಗಳನ್ನೋ, ಅಥವಾ ಪ್ರಕೃತಿ ಪ್ರತ್ಯಯಗಳನ್ನೋ, ಕೂಡಿಸಿ ಸಂಧಿಮಾಡಿ ಹೇಳುವಾಗ, ಎರಡು ಪದಗಳನ್ನು ಕೂಡಿಸಿ ಸಮಾಸ ಮಾಡುವಾಗ, ಅಥವಾ ಎರಡು ಸಂಖ್ಯೆಗಳನ್ನು ಕೂಡಿಸಿದೆ ಎಂಬರ್ಥ ಸೂಚನೆ ಮಾಡುವಾಗ ಸಾಮಾನ್ಯವಾಗಿ '+' ಈ ಚಿಹ್ನೆ ಬಳಸುವುದುಂಟು. ಇದಕ್ಕೆ ಅಧಿಕ (ಹೆಚ್ಚು) ಚಿಹ್ನೆ ಎಂದು ಕರೆಯುತ್ತಾರೆ.

**೪. ಸಮಾನಾರ್ಥಕ ಚಿಹ್ನೆ–(=)** ಎರಡು ಪದಗಳ ಅರ್ಥ ಸಮಾನವೆನ್ನುವಾಗ, ಇವೆರಡು ಸೇರಿ ಇದಕ್ಕೆ ಸಮಾನವೆನ್ನುವಾಗ ಸಾಮಾನ್ಯವಾಗಿ '=' ಈ ಚಿಹ್ನೆ ಉಪಯೋಗಿಸುವುದುಂಟು. ಇದಕ್ಕೆ ಸಮಾನಾರ್ಥಕ ಚಿಹ್ನೆ' ಎನ್ನುವರು.

*****

©KTBS Not to be republished

**ಪೂರಕ ಅಧ್ಯಯನ**

# ಭಾಗ – ೨

## ೧. ಚತುರ ಮೊಲ

–ಸಂಗ್ರಹ

**ಪ್ರವೇಶ :** 'ಶಕ್ತಿಗಿಂತ ಯುಕ್ತಿ ಮೇಲು'. ಯುಕ್ತಿಯ ಮುಂದೆ ಎಂತಹ ದೊಡ್ಡ ಶಕ್ತಿಯೂ ಸೋಲನ್ನು ಒಪ್ಪಿಕೊಳ್ಳುತ್ತದೆ. 'ಉಪಾಯ ಬಲ್ಲವನಿಗೆ ಅಪಾಯವಿಲ್ಲ' ಎಂಬ ಗಾದೆಯಂತೆ ಚತುರರಾದವರು ತಮಗೆ ಎದುರಾಗುವ ವಿಪತ್ತಿನಿಂದ ಪಾರಾಗುತ್ತಾರೆ. ಬುದ್ಧಿವಂತಿಕೆಯಿಂದ ತಮ್ಮನ್ನು ರಕ್ಷಿಸಿಕೊಳ್ಳುವುದರ ಜೊತೆಗೆ ತಮ್ಮವರನ್ನೂ ಕಾಪಾಡುತ್ತಾರೆ. ಇದಕ್ಕೆ ಉತ್ತಮ ನಿದರ್ಶನದಂತಿದೆ ಮೃಗರಾಜನನ್ನು ಕೊಂದ ಮೊಲದ ಈ ಕತೆ.

ದಟ್ಟವಾದ ಕಾಡೊಂದರಲ್ಲಿ ಸಿಂಹವೊಂದು ವಾಸವಾಗಿತ್ತು. ಅದು 'ಮೃಗರಾಜ' ಎಂಬ ಗೌರವಕ್ಕೆ ಪಾತ್ರವಾಗಿತ್ತು. ಪ್ರತಿನಿತ್ಯ ಅದು ತನ್ನ ಆಹಾರಕ್ಕಾಗಿ ಎಷ್ಟೋ ಪ್ರಾಣಿಗಳನ್ನು ಕೊಂದು ಹಾಕುತ್ತಿತ್ತು. ಇದರಿಂದ ಬೇಸತ್ತ ಕಾಡಿನ ಪ್ರಾಣಿಗಳು ಸಭೆ ಸೇರಿ ತಾವೇ ಪ್ರತಿನಿತ್ಯ ಸರದಿಯಂತೆ ಒಂದೊಂದು ಪ್ರಾಣಿಯನ್ನು ಸಿಂಹದ ಬಳಿಗೆ ಕಳುಹಿಸಬೇಕು ಎಂದು ತೀರ್ಮಾನಿಸಿದವು. ಸಿಂಹವೂ ಪ್ರಾಣಿಗಳ ತೀರ್ಮಾನಕ್ಕೆ ಒಪ್ಪಿತು. ಪ್ರತಿನಿತ್ಯ ಪ್ರಾಣಿಗಳು ತಾವು ನಿಗದಿಪಡಿಸಿದಂತೆ ಸಿಂಹದ ಬಳಿಗೆ ಒಂದೊಂದು ಪ್ರಾಣಿಯನ್ನು ಕಳುಹಿಸತೊಡಗಿದವು. ಸಿಂಹವೂ ತಾನು ಪ್ರಾಣಿಯನ್ನು ಹುಡುಕಿಕೊಂಡು ತಿರುಗದೆ ತನ್ನ ಗುಹೆಗೆ ಬಂದ ಪ್ರಾಣಿಯನ್ನು ತಿಂದು ನೆಮ್ಮದಿಯಾಗಿತ್ತು.

ಒಂದು ದಿನ ಸಿಂಹಕ್ಕೆ ಆಹಾರವಾಗುವ ಸರದಿ ಮೊಲಕ್ಕೆ ಬಂದಿತು. ಮೊಲ ಬಹಳ ತಡವಾಗಿ ಬಂತು. ಹಸಿದಿದ್ದ ಸಿಂಹ ವೇಳೆ ಮೀರಿ ಬಂದ ಮೊಲವನ್ನು 'ಏಕಿಷ್ಟು ತಡಮಾಡಿದೆ?' – ಎಂದು ಗರ್ಜಿಸಿ ಕೇಳಿತು. ಅದಕ್ಕೆ ಮೊಲ ಸ್ವಲ್ಪವೂ ಹೆದರದೆ, 'ಮೃಗರಾಜ, ನಾನೇನೋ ಬೇಗನೆ ಬರಬೇಕೆಂದು ಓಡೋಡಿ ಬರುತ್ತಿದ್ದೆ. ಆದರೆ ದಾರಿಯಲ್ಲಿ ಮತ್ತೊಂದು ಸಿಂಹ ಎದುರಾಗಿ ನನ್ನನ್ನು ಹಿಡಿದು ತಿನ್ನಲು ನೋಡಿತು. ನಾನು ಅದರಿಂದ ತಪ್ಪಿಸಿಕೊಂಡುಬರಲು ಇಷ್ಟು ವೇಳೆಯಾಯಿತು. ದಯವಿಟ್ಟು ನನ್ನನ್ನು ಕ್ಷಮಿಸು' ಎಂದಿತು.

ಇದನ್ನು ಕೇಳಿದ ಸಿಂಹಕ್ಕೆ ಮಿತಿಮೀರಿದ ಕೋಪ ಬಂತು. "ಏನು? ಈ ಕಾಡಿನಲ್ಲಿ ನನ್ನನ್ನು ಬಿಟ್ಟು ಇನ್ನೊಂದು ಸಿಂಹವಿದೆಯೆ? ಹಾಗಿದ್ದರೆ ಅದು ಎಲ್ಲಿದೆ ಎಂದು ತೋರಿಸು. ಮೊದಲು ಅದನ್ನು ಕೊಂದು, ಬಳಿಕ ನಿನ್ನನ್ನು ವಿಚಾರಿಸಿಕೊಳ್ಳುತ್ತೇನೆ' ಎಂದು ಗುಡುಗಿತು. ಮೊಲ ನಿಧಾನಿಸದೆ, 'ಅದಕ್ಕೇನಂತೆ ಮೃಗರಾಜ, ನನ್ನ ಹಿಂದೆ ಬಾ, ಆ ಸಿಂಹವನ್ನು ತೋರಿಸುತ್ತೇನೆ. ಅದು ನೋಡಿದರೆ ನಿನ್ನಂತೆಯೇ ಬಲಶಾಲಿ ಇದ್ದಂತೆ ಕಾಣುತ್ತದೆ' ಎಂದಿತು. ಮೊಲದ ಮಾತಿನಂತೆ ಸಿಂಹ ಅದನ್ನನುಸರಿಸಿ ಹೊರಟಿತು.

ಕಾಡಿನಲ್ಲಿ ಸಿಂಹವನ್ನು ಬಲುದೂರ ಕರೆದುಕೊಂಡು ಬಂದ ಮೊಲ ಅಲ್ಲಿದ್ದ ಒಂದು ಹಾಳು ಬಾವಿಯನ್ನು ತೋರಿಸಿತು. "ಮೃಗರಾಜ, ನಾನು ಹೇಳಿದೆನಲ್ಲಾ ಆ ಸಿಂಹ ಈ ಬಾವಿಯೊಳಗೆ ವಾಸಿಸುತ್ತಿದೆ. ಬಗ್ಗಿ ನೋಡು" ಎಂದಿತು. ಸಿಂಹ "ಹೌದೇನು" ಎಂದು ಬಾವಿಕಟ್ಟೆ ಏರಿ ಗರ್ಜಿಸುತ್ತಾ ಬಗ್ಗಿ ನೋಡಿತು. ಬಾವಿಯ ನೀರಿನಲ್ಲಿ

©KTBS Not to be republished

ತನ್ನ ಪ್ರತಿಬಿಂಬವನ್ನು ಕಂಡ ಸಿಂಹವು ಅದು ತನ್ನ ಹಾಗೇ ಇರುವ ಇನ್ನೊಂದು ಸಿಂಹ ಎಂದು ಭಾವಿಸಿ ಕೊಲ್ಲಲು ಬಾವಿಯೊಳಗೆ ಹಾರಿ ತನ್ನ ಪ್ರಾಣ ಕಳೆದುಕೊಂಡಿತು.

ಮೊಲ ಅಲ್ಲಿಂದ ವೇಗವಾಗಿ ಓಡಿಬಂದು ಪ್ರಾಣಿಗಳ ಸಮೂಹಕ್ಕೆ ನಡೆದ ಘಟನೆಯನ್ನು ವಿವರಿಸಿತು. ಪ್ರಾಣಿಗಳೆಲ್ಲಾ ತಮಗೆ ಬಂದಿದ್ದ ಆಪತ್ತು ನಿವಾರಣೆಯಾದುದಕ್ಕೆ ಕಾರಣವಾದ ಮೊಲದ ಬುದ್ಧಿವಂತಿಕೆಯನ್ನು ಮೆಚ್ಚಿ ಹೊಗಳಿ ಸಂತಸದಿಂದ ಕುಣಿದಾಡಿದವು.

**ಪದಗಳ ಅರ್ಥ**

ಆಪತ್ತು–ಅಪಾಯ, ತೊಂದರೆ;

ನಿವಾರಣೆ–ಕಳೆಯುವಿಕೆ, ಹೋಗಲಾಡಿಸುವಿಕೆ, ನಿಲ್ಲಿಸುವಿಕೆ;

ಮೃಗ–ಪ್ರಾಣಿ;

ಸಂತಸ–ಸಂತೋಷ, ಹರ್ಷ;

ಸಮೂಹ– ಗುಂಪು, ಸಮುದಾಯ.

**ಅಭ್ಯಾಸ**

**ಅ) ಕೆಳಗಿನ ಪ್ರಶ್ನೆಗಳಿಗೆ ಸೂಕ್ತ ಉತ್ತರ ಬರೆಯಿರಿ.**

೧. ಕಾಡಿನ ಪ್ರಾಣಿಗಳು ಏಕೆ ಬೇಸರಗೊಂಡವು?

೨. ಮೃಗರಾಜನು ಪ್ರಾಣಿಗಳ ಯಾವ ತೀರ್ಮಾನಕ್ಕೆ ಒಪ್ಪಿದನು?

೩. ಸಿಂಹದ ಕೋಪ ಮಿತಿಮೀರಿತು ಏಕೆ?

೪. ಮೊಲವು ಸಿಂಹವನ್ನು ಹಾಳು ಬಾವಿಯ ಬಳಿಗೆ ಏಕೆ ಕರೆದುಕೊಂಡು ಹೋಯಿತು?

೫. ಸಿಂಹವು ಬಾವಿಯೊಳಗೆ ಏಕೆ ಹಾರಿತು?

೬. ಪ್ರಾಣಿಗಳಿಗೆ ಬಂದಿದ್ದ ವಿಪತ್ತು ಹೇಗೆ ನಿವಾರಣೆಯಾಯಿತು?

**ಭಾಷಾಚಟುವಟಿಕೆ**

ಅ) 'ಚತುರ ಮೊಲ' ಕತೆಯಲ್ಲಿ ಬಂದಿರುವ ಸಜಾತೀಯ ಸಂಯುಕ್ತಾಕ್ಷರ ಇರುವ ಐದು ಪದಗಳನ್ನು, ವಿಜಾತೀಯ ಸಂಯುಕ್ತಾಕ್ಷರ ಇರುವ ಐದು ಪದಗಳನ್ನು ಆರಿಸಿ ಬರೆಯಿರಿ.

ಆ) ಪಂಚತಂತ್ರ ಕತೆಗಳನ್ನು ಸಂಗ್ರಹಿಸಿರಿ.

**ಅಪಾಯ ಬಂದಾಗ ಉಪಾಯದಿಂದ ಕಾರ್ಯ ಸಾಧಿಸಬೇಕು**

*****

©KTBS Not to be republished

# ೨. ಅಲ್ಲಮನ ವಚನ

**– ಅಲ್ಲಮ ಪ್ರಭು**

**ಪ್ರವೇಶ:** ಲೋಕದ ಸೃಷ್ಟಿಯಲ್ಲಿ ಮೇಲುನೋಟಕ್ಕೆ ಸಂಬಂಧವಿಲ್ಲದಂತೆ ಕಾಣುವ ವಿಷಯಗಳು ಆಳದಲ್ಲಿ ಬಿಡಿಸಲಾಗದ ಸಂಬಂಧವನ್ನು ಬೆಸೆದುಕೊಂಡಿರುತ್ತವೆ. ಎಲ್ಲಿಯೋ ಹುಟ್ಟಿ ಬೆಳೆದ ವಸ್ತುವೊಂದು, ಮತ್ತೆಲ್ಲಿಯೋ ಹುಟ್ಟಿ ಬೆಳೆದುದರೊಂದಿಗೆ ಬಾಂಧವ್ಯವನ್ನು ಬೆಳೆಸಿಕೊಳ್ಳುತ್ತದೆ. ಇದೊಂದು ವಿಸ್ಮಯದ ಸಂಗತಿ. ಇದನ್ನು ಈ ವಚನ ವ್ಯಕ್ತಪಡಿಸುತ್ತಿದೆ.

ಎತ್ತಣ ಮಾಮರ ಎತ್ತಣ ಕೋಗಿಲೆ –
ಎತ್ತಣಿಂದೆತ್ತ ಸಂಬಂಧವಯ್ಯಾ?
ಬೆಟ್ಟದ ನೆಲ್ಲಿಯಕಾಯಿ, ಸಮುದ್ರದೊಳಗಣ ಉಪ್ಪು–
ಎತ್ತಣಿಂದೆತ್ತ ಸಂಬಂಧವಯ್ಯಾ?
ಗುಹೇಶ್ವರ ಲಿಂಗಕ್ಕೆಯೂ ಎನಗೆಯೂ
ಎತ್ತಣಿಂದೆತ್ತ ಸಂಬಂಧವಯ್ಯಾ?

©KTBS Not to be republished

**ಕೃತಿಕಾರರ ಪರಿಚಯ**



ಅಲ್ಲಮಪ್ರಭು ಪ್ರಮುಖ ವಚನಕಾರರಲ್ಲಿ ಒಬ್ಬರು. ಸತ್ಯಶೋಧನೆಯನ್ನೇ ಜೀವನದ ಪರಮ ಗುರಿಯಾಗಿಸಿಕೊಂಡಿದ್ದ ತತ್ವಜ್ಞಾನಿ. ೧೨ನೇ ಶತಮಾನದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ಹುಟ್ಟಿದ ಶರಣ ಚಳುವಳಿಯಲ್ಲಿ ಮಹತ್ವದ ಪಾತ್ರ ವಹಿಸಿದವರು. 'ಗುಹೇಶ್ವರ' ಎಂಬ ಅಂಕಿತದಿಂದ ವಚನಗಳನ್ನು ರಚಿಸಿದರು. ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಬಳ್ಳಿಗಾವೆ ಇವರ ಹುಟ್ಟೂರು. ಇವರು ತಮ್ಮ ಬಾಳಿನ ಕೊನೆಯ ದಿನಗಳನ್ನು ಶ್ರೀಶೈಲದ ಕದಳಿವನದಲ್ಲಿ ಕಳೆದರೆಂದು ಹೇಳಲಾಗುತ್ತದೆ.

**ಪದಗಳ ಅರ್ಥ**

ಎತ್ತಣ –ಎಲ್ಲಿಯ; ಎನಗೆ–ನನಗೆ; ಮಾಮರ–ಮಾವಿನಮರ.

## ಅಭ್ಯಾಸ

**ಅ) ಕೆಳಗಿನ ಪ್ರಶ್ನೆಗಳಿಗೆ ಸೂಕ್ತ ಉತ್ತರ ಬರೆಯಿರಿ.**

೧. ಮಾವಿನ ಮರದೊಂದಿಗೆ ಸಂಬಂಧವನ್ನು ಹೊಂದಿರುವ ಪಕ್ಷಿ ಯಾವುದು?

೨. ವಚನದಲ್ಲಿ ಹೇಳಿರುವಂತೆ ನೆಲ್ಲಿಕಾಯಿ ಮರವು ಎಲ್ಲಿ ಬೆಳೆಯುತ್ತದೆ?

೩. ಉಪ್ಪು ಉತ್ಪತ್ತಿಯಾಗುವುದು ಎಲ್ಲಿ?

೪. ಅಲ್ಲಮನ ವಚನದಲ್ಲಿ ಹೇಳಿರುವಂತೆ ಬೆಟ್ಟದ ಮೇಲಿನ ನೆಲ್ಲಿಕಾಯಿಯೊಂದಿಗೆ ಸಂಬಂಧವನ್ನು ಹೊಂದಿರುವುದು ಯಾವುದು?

೫. ಅಲ್ಲಮಪ್ರಭುವಿನ ವಚನಗಳ ಅಂಕಿತ ಯಾವುದು?

*****

©KTBS Not to be republished

# ೩. ಕನ್ನಡ ನುಡಿ

– ಬೆಟಗೇರಿ ಕೃಷ್ಣಶರ್ಮ

**ಪ್ರವೇಶ :** ಕನ್ನಡ ನಾಡು ನುಡಿಯ ಸೊಬಗನ್ನು ಎಷ್ಟು ವರ್ಣಿಸಿದರೂ ಕವಿಗಳಿಗೆ ಸಾಲದು. ಕನ್ನಡ ನಾಡಿನಂತೆ ಕನ್ನಡ ನುಡಿಯೂ ಮಧುರವಾದುದು. ನಮ್ಮ ಸುತ್ತಲೂ ಕೇಳಿಬರುವ ಅನೇಕ ಮಧುರ ಸ್ವರಗಳನ್ನು ಕನ್ನಡ ನುಡಿಯೊಂದಿಗೆ ಸಮೀಕರಿಸಿ ಕವಿ ಕನ್ನಡ ನುಡಿಯ ಮಾಧುರ್ಯವನ್ನು ಮನೋಜ್ಞವಾಗಿ ವರ್ಣಿಸಿದ್ದಾರೆ.

ಎನಿತು ಇನಿದು ಈ ಕನ್ನಡ ನುಡಿಯು
ಮನವನು ತಣಿಸುವ ಮೋಹನ ಸುಧೆಯು॥

ಗಾನವ ಬೆರೆಯಿಸಿ ವೀಣೆಯ ದನಿಯೊಳು
ವಾಣಿಯ ನೇವುರ ನುಡಿಸುತೆ ಕುಣಿಯಲು
ಮಾಣದೆ ಮೆರೆಯುವ ಮಂಜುಲ ರವವೊ॥




ರಂಗನ ಮುರಲಿಯ ಹಿಂಗದ ಸರದಲಿ
ಹೆಂಗೆಳೆಯರು ಬೆಳದಿಂಗಳಿನಿರುಳಲಿ
ಸಂಗೀತವನೊರೆದಂಗವಿದೇನೋ॥

ಗಿಳಿಗಳು ಉಲಿಯುವ ಮೆಲು ಮಾತುಗಳೋ
ಕಳಕಂಠಗಳ ಚೆಲುವಿನ ಕುಕಿಲೋ
ಅಳಿಗಳ ಬಳಗದ ಬೆಳಗಿನ ಉಲಿಯೋ॥

©KTBS Not to be republished

**ಕೃತಿಗಾರರ ಪರಿಚಯ:**



'ಆನಂದಕಂದ' ಎಂಬ ಕಾವ್ಯನಾಮದಿಂದ ಪ್ರಖ್ಯಾತರಾಗಿರುವ ಬೆಟಗೇರಿ ಕೃಷ್ಣಶರ್ಮ ಅವರು ೧೯೦೦ರ ಏಪ್ರಿಲ್ ೧೯ರಂದು ಜನಿಸಿದರು. ಇವರ ಸ್ಥಳ ಗೋಕಾಕ್ ತಾಲೂಕಿನ ಬೆಟಗೇರಿ. 'ಮುದ್ದಿನ ಮಾತು', 'ವೀರಗೃಹಿಣಿ', 'ಒಡನಾಡಿ', 'ಕಾರಹುಣ್ಣಿಮೆ' 'ನಲ್ವಾಡುಗಳು' (ಕವನ ಸಂಕಲನಗಳು), 'ರಾಜಯೋಗಿ', 'ಅಶಾಂತಿ ಪರ್ವ' (ಐತಿಹಾಸಿಕ ಕಾದಂಬರಿಗಳು), 'ಕಳ್ಳರ ಗುರು ಮತ್ತು ಇತರ ಕಥೆಗಳು', 'ದಶಮಂಜರಿ' (ಕಥಾ ಸಂಕಲನಗಳು), 'ಬೆಳುವಲದ ಸುಗ್ಗಿ' (ಸಮಗ್ರ ಕಾವ್ಯ ಸಂಕಲನ) 'ನನ್ನ ನೆನಪುಗಳು' (ಆತ್ಮಚರಿತ್ರೆ) ಮುಂತಾದವು ಇವರ ಕೃತಿಗಳು. ಶ್ರೀಯುತರು ೧೯೮೨ನೆಯ ಅಕ್ಟೋಬರ್ ತಿಂಗಳ ೩೦ರಂದು ನಿಧನರಾದರು.

**ಪದಗಳ ಅರ್ಥ :**

ಅಳಿ–ದುಂಬಿ;

ಉಲಿ–ಮಾತು, ಧ್ವನಿ;

ಒರೆದ–ಹೇಳಿದ;

ಕಳಕಂಠ–ಮಧುರವಾಗಿ ಹಾಡುವ ಹಕ್ಕಿ, ಕೋಗಿಲೆ;

ಕುಕಿಲು–ಕೋಗಿಲೆಯ ಧ್ವನಿ;

ನೇವುರ–ನೂಪುರ, ಕಾಲಂದಿಗೆ, ಕಾಲುಗೆಜ್ಜೆ;

ಮಂಜುಳ–ಸುಮಧುರ;

ಮುರಲಿ–ಕೊಳಲು, ವೇಣು;

ಮೋಹನ–ಆಕರ್ಷಣೆ, ಮನೋಹರತೆ, ಸಂಗೀತದ ಒಂದು ರಾಗ;

ರವ–ಧ್ವನಿ, ಶಬ್ದ;

ಸರ–ಉಲಿ, ಧ್ವನಿ;

ಸ್ವರ; ಸುಧೆ–ಅಮೃತ.

**ಅಭ್ಯಾಸ**

**ಅ) ಕೆಳಗಿನ ಪ್ರಶ್ನೆಗಳಿಗೆ ಸೂಕ್ತ ಉತ್ತರ ಬರೆಯಿರಿ.**

೧. ಮನಸ್ಸನ್ನು ತಣಿಸುವ ಮೋಹನ ಸುಧೆ ಯಾವುದು?

೨. ಬೆಟಗೇರಿ ಕೃಷ್ಣಶರ್ಮ ಅವರು ಕನ್ನಡ ನುಡಿಯನ್ನು ಯಾವ ಯಾವ ಧ್ವನಿಗಳಿಗೆ ಹೋಲಿಸಿದ್ದಾರೆ?

೩. ಮೆಲುಮಾತಿನ ಪಕ್ಷಿ ಯಾವುದು?

೪. ಮಧುರ ಧ್ವನಿಯ ಪಕ್ಷಿ ಯಾವುದು?

೫. ಕಳಕಂಠ ಎಂದರೇನು?

೬. ಕನ್ನಡ ನುಡಿ ಪದ್ಯದಲ್ಲಿ ಬಂದಿರುವ ಪ್ರಾಸಪದಗಳನ್ನು ಗುರುತಿಸಿ ಬರೆಯಿರಿ.

**ಕನ್ನಡಕ್ಕಾಗಿ ಕೈ ಎತ್ತು ನಿನ್ನ ಕೈ ಕಲ್ಪವೃಕ್ಷವಾಗುತ್ತದೆ.**

Not to be republished ©KTBS

# ೪. ಶಬ್ದಗಳು

– **ಡಾ. ಸರಜೂ ಕಾಟ್ಕರ್**

**ಪ್ರವೇಶ :** ನಮ್ಮ ಕಿವಿಯ ಮೂಲಕ ಹೊಕ್ಕು ಮೆದುಳಿಗೆ ತಲುಪುವ ಸಪ್ಪಳಗಳನ್ನು ಸಾಮಾನ್ಯ ಅರ್ಥದಲ್ಲಿ ಶಬ್ದ ಎಂದು ಹೇಳುತ್ತೇವೆ. ಆದರೆ ಶಬ್ದವು ಲೋಕವನ್ನು ಅರಿಯಲು ಮತ್ತು ಅದಕ್ಕೆ ಪ್ರತಿಕ್ರಿಯಿಸಲು ನೆರವಾಗುವ ಶಕ್ತಿಯ ರೂಪ ಕೂಡ. ಶಬ್ದದ ಮೂಲಕ ನಮ್ಮ ಸುತ್ತ ಮುತ್ತಲಿನ ಆಗು ಹೋಗುಗಳನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಆದರೆ ಶಬ್ದಗಳು ಕವಿತೆಯಾಗಿ, ಬೆಳದಿಂಗಳಾಗಿ, ರೋಮಾಂಚನ ಹುಟ್ಟಿಸಿ, ಸಂತಸ ನೀಡುವಂತಾಗಬೇಕೆಂಬುದು ಕವಿಯ ಕಲ್ಪನೆ ಮತ್ತು ಬಯಕೆಯಾಗಿದೆ.

ಶಬ್ದಗಳು ಪಕ್ಷಿಗಳಾಗಬೇಕು
ಪಕ್ಷಿಗಳು ಆಗಸಕ್ಕೆ ಹಾರಿ
ಆಗಸವೆಲ್ಲ ಕವಿತೆಯಾಗಬೇಕು
ಶಬ್ದಗಳು ಚಂದ್ರ ಆಗಬೇಕು




ಚಂದ್ರ ಭೂಮಿಗೆ ಬಂದು
ಭೂಮಿಗೆಲ್ಲ ಬೆಳದಿಂಗಳು ನೀಡಬೇಕು
ಶಬ್ದಗಳು ರಾತ್ರಿಯಾಗಬೇಕು
ರಾತ್ರಿ ಅನಂತತೆಯನ್ನು ವ್ಯಾಪಿಸಿ

Not to be republished ©KTBS

ಜಗತ್ತಿಗೆಲ್ಲ ರೋಮಾಂಚನ ಹುಟ್ಟಿಸಬೇಕು
ಶಬ್ದಗಳು ಮುತ್ತಾಗಬೇಕು
ಮುತ್ತು ಸಮುದ್ರದಿಂದ ಹೊರಬಂದು
ನೊಂದವರ ಮನಕ್ಕೆ ಸಂತಸ ನೀಡಬೇಕು

**ಕೃತಿಕಾರರ ಪರಿಚಯ:**



ಬೆಳಗಾವಿಯಲ್ಲಿ ವಾಸವಾಗಿರುವ ಡಾ. ಸರಜೂ ಕಾಟ್ಕರ್ ಪ್ರಸಿದ್ಧ ಪತ್ರಕರ್ತರು. ಇವರು ೧೯೫೩ ಅಗಸ್ಟ್ ೧೪ರಂದು ಹುಬ್ಬಳ್ಳಿಯಲ್ಲಿ ಜನಿಸಿದರು. 'ಹಸಿದ ನೆಲ', 'ನವಿಲೇ ನವಿಲು', 'ಮ್ಯಾನಿಫೆಸ್ಟೊ', 'ಸೂರ್ಯಯಾನ' ಇವು ಇವರ ಕವನ ಸಂಕಲನಗಳು, 'ದೇವರಾಯ'– ಕಾದಂಬರಿ; 'ಮುಕ್ಕಾಂ ಪೋಸ್ಟ್ ಲಂಡನ್'–ಪ್ರವಾಸ ಕಥನ; 'ಕೊರೆಗಾಂವ' 'ಶರಣ ಸಂಸ್ಕೃತಿ' 'ಸಿನೇಮಾ ಸಿನೇಮಾ'–ಇವು ವೈಚಾರಿಕ ಕೃತಿಗಳು. ಮರಾಠಿಯಿಂದ ಅನೇಕ ಕೃತಿಗಳನ್ನು ಅನುವಾದಿಸಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತರು.

'ಶಬ್ದಗಳು' ಕವಿತೆಯನ್ನು ಸರಜೂ ಕಾಟ್ಕರ್ ಇವರ 'ಏಕಾಂತದ ಮನುಷ್ಯ' ಸಂಕಲನದಿಂದ ಆರಿಸಿಕೊಳ್ಳಲಾಗಿದೆ.

**ಪದಗಳ ಅರ್ಥ**

ಅನಂತತೆ– ಕೊನೆಯಿಲ್ಲದ, ಅಸಂಖ್ಯವಾದ;

ಆಗಸ–ಆಕಾಶ;

ರೋಮಾಂಚನ–ಸಂತೋಷದಿಂದ ಮೈಗೂದಲು ನಿಮಿರುವಿಕೆ, ಪುಳಕ, ಭಾವಪರವಶತೆ.

**ಅಭ್ಯಾಸ**

**ಅ) ಕೆಳಗಿನ ಪ್ರಶ್ನೆಗಳಿಗೆ ಸೂಕ್ತ ಉತ್ತರ ಬರೆಯಿರಿ.**

೧. ಆಗಸವೆಲ್ಲ ಹೇಗೆ ಕವಿತೆಯಾಗ ಬೇಕೆಂದು ಕವಿ ಬಯಸಿದ್ದಾರೆ?

೨. ಶಬ್ದಗಳು ಚಂದ್ರನಾಗಿ ಏನು ಮಾಡಬೇಕೆಂದು ಸರಜೂ ಕಾಟ್ಕರ್ ಹೇಳಿದ್ದಾರೆ?

೩. ಶಬ್ದಗಳು ನೊಂದವರ ಮನಕ್ಕೆ ಹೇಗೆ ಸಂತಸ ನೀಡಬೇಕೆಂದು ಸರಜೂ ಕಾಟ್ಕರ್ ಅವರು ಬಯಸುತ್ತಾರೆ?

೪. 'ಶಬ್ದ' ಕವನದಲ್ಲಿ ತಿಳಿಸಿರುವಂತೆ ಶಬ್ದಗಳು ಜಗತ್ತಿಗೆಲ್ಲ ಹೇಗೆ ರೋಮಾಂಚ ಹುಟ್ಟಿಸಬೇಕು?

*****

©KTBS Not to be republished

# ೫. ಅಮ್ಮನಾಗುವುದೆಂದರೆ

– **ರೂಪ ಹಾಸನ**

**ಪ್ರವೇಶ :** ತನ್ನ ಮಗಳು ಪ್ರತಿ ಕೆಲಸದಲ್ಲೂ ತನ್ನಂತೆಯೆ ಪರಿಣತಿ ಪಡೆಯಬೇಕೆಂದು ತಾಯಿಯಾದವಳು ಅಪೇಕ್ಷಿಸುತ್ತಾಳೆ. ಅದಕ್ಕೆ ತಕ್ಕ ತರಬೇತಿ ಕೊಡುತ್ತಿರುತ್ತಾಳೆ. ಮಗಳು ಅಮ್ಮನ ನುಡಿಗಳನ್ನು ಮನಸ್ಸಿನಲ್ಲಿ ಇರಿಸಿಕೊಂಡು ಕೆಲಸದಲ್ಲಿ ತೊಡಗಿಸಿಕೊಳ್ಳಬೇಕು. ಏಕಾಗ್ರತೆಯಿಂದ ತಾಯಿಯಲ್ಲಿದ್ದ ತಾಯ್ತನದ ಸಿದ್ಧಿಯನ್ನು ಪಡೆಯಬೇಕು. ಆಗ ಮಾತ್ರ ಮಗಳು ಅಮ್ಮನಂತಾಗಲು ಸಾಧ್ಯವೆಂದು ಸರಳ ಉದಾಹಣೆಯೊಂದಿಗೆ ಕವನ ನಿರೂಪಿಸುತ್ತದೆ.

ಒಲೆಯ ಮೇಲೆ
ಬೆಣ್ಣೆ ಕಾಯಿಸಿಸಲು ಪಾತ್ರೆ ಇಟ್ಟಾಗೆಲ್ಲಾ
ಅಮ್ಮನ ಮಾತಿನ ನೆನಪು
ಎಚ್ಚರಿಕೆಯ ಉಪದೇಶದ ಮೆಲುಕು ॥

"ಮಗಳೇ ಬೆಣ್ಣೆ ಮುದ್ದೆಯ ಮೂರರಷ್ಟು
ದೊಡ್ಡ ಪಾತ್ರೆಯಲಿ ಕಾಯಲಿಡಬೇಕು
ಬೆಂಕಿ ಕೊಟ್ಟರೆ ಬೆಣ್ಣೆ ಉಕ್ಕುತ್ತದೆ
ತನ್ಮಯತೆಯಲಿ ಕಾಯಬೇಕು॥



ಬೆಣ್ಣೆ ಹದ ಬೆಂದರಷ್ಟೇ
ಪಕ್ವಗೊಂಡ ತುಪ್ಪ
ಹೆಚ್ಚು ಕಾದರೆ ಸೀಕಲು
ಕಡಿಮೆ ಬೆಂದರೆ ಹಸುಕು॥

ಬೆಣ್ಣೆ ಕಾದು ತುಪ್ಪ ಪಕ್ವಗೊಳುವಾಗ
ಕ್ಷೀಣಿಸುವ 'ಮಟರ್ ಮಟರ್' ಸದ್ದು
ಜಡಿ ಮಳೆ ನಿಲ್ಲುತ್ತಾ ಬಂದಂತೆ
ಹದ ತುಪ್ಪದ ಘಮಲು ಎಲ್ಲೆಡೆಗೂ॥

ಅದೆಷ್ಟು ಬಾರಿ ಒಬ್ಬಳೇ
ಬೆಣ್ಣೆ ಕಾಯಿಸಿದ್ದೋ ಲೆಕ್ಕವಿಲ್ಲ
ಆ ಪಿತ್ತ ಈ ಚಿತ್ತದ ಗಡಿಬಿಡಿಯಲ್ಲಿ
ಗಮನವೀಯದೇ ಉಕ್ಕಿಸಿದ್ದೇ ಹೆಚ್ಚು॥

ಉಳಿದು ಕಾದದ್ದು ಒಮ್ಮೆ ತುಪ್ಪ ಸೀದು
ಮೂಗಿಗಮರುವ ಕಮಟು ವಾಸನೆ
ಇನ್ನೊಮ್ಮೆ ಹಸಿಹಸಿಯಲೇ ಇಳಿಸಿ
ನಾಲ್ಕೇ ದಿನಕ್ಕೆ ಕೆಟ್ಟ ನಾತ॥

Not to be republished ©KTBS

ಯಾವುದು ನಿಜದ ಹದ?
ಪಕ್ವತೆಯ ಗರಿಷ್ಠ ಬಿಂದು?
ನಿರ್ಧಾರದ ಹೊಸ್ತಿಲಲ್ಲಿ ತಪಿಸುವ ತಾಪ
ಕಳಿಯುವಿಕೆಯ ಹುಡುಕಾಟದ ತಪ॥

ಸಿದ್ಧಿಸಿದಂತೆಲ್ಲಾ, ಬೆಣ್ಣೆ ಉಕ್ಕುವುದಿಲ್ಲ
ಮಾಗುವ ಸದ್ದಿಗೆ ಧ್ಯಾನಿಸಿ
ಸ್ಥಿರಗೊಳ್ಳುತ್ತದೆ ಮನ, ಕರಟುವುದಿಲ್ಲ,
ಹಸುಕಲಾಗುವುದಿಲ್ಲ, ಸದಾ ಹದ ತುಪ್ಪ॥

ಅಮ್ಮನಾಗುವುದೆಂದರೆ ...... ಹೀಗೆ.

**ಕೃತಿಕಾರರ ಪರಿಚಯ:**



ಮಕ್ಕಳು ಮತ್ತು ಯುವಜನರ ಸಲುವಾಗಿ ಅನೇಕ ಸಂಘ ಸಂಸ್ಥೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ರೂಪ ಹಾಸನರವರು ೨೨.೦೨.೧೯೬೭ರಲ್ಲಿ ಮೈಸೂರಿನಲ್ಲಿ ಜನಿಸಿದರು. ಸಮಾಜ ಸೇವಕಿಯಾದ ಇವರು ಹಿರಿಯರು ಮತ್ತು ಕಿರಿಯರಲ್ಲಿ ಸಾಮಾಜಿಕ ಪ್ರಜ್ಞೆ, ಸಾಹಿತ್ಯಿಕ, ಅಭಿರುಚಿ ಹಾಗೂ ಕನ್ನಡ ಕುರಿತು ಆಸಕ್ತಿ ಮೂಡಿಸಲು ಪ್ರಯತ್ನಗಳನ್ನು ಮಾಡುತ್ತಿದ್ದಾರೆ. 'ಒಂದಿಷ್ಟು ಹಸಿಮಣ್ಣು', 'ಬಾಗಿಲಾಚೆಯ ಮೌನ', 'ಗಳಿಗೆಬಟ್ಟಲ ತಿರುವುಗಳಲ್ಲಿ', 'ಕಡಲಿಗೆಷ್ಟೊಂದು ಬಾಗಿಲು' 'ತನ್ನಷ್ಟಕ್ಕೆ' 'ಮಹಿಳೆಗೆ ಹಕ್ಕುಗಳೇನೋ ಇವೆ. ಆದರೆ.......?', 'ಮಹಿಳೆ ಮತ್ತು ಆಧುನಿಕತೆಯ ಸವಾಲುಗಳು' 'ಮಂಟಪ ಮಾಲೆ' 'ಲಹರಿ' 'ಹೇಮೆಯೊಡಲಲ್ಲಿ' ಮುಂತಾದವು ಇವರ ಪ್ರಮುಖ ಕೃತಿಗಳು.

**ಪದಗಳ ಅರ್ಥ**

ಕಮಟು–ತುಪ್ಪ ಎಣ್ಣೆ ಮುಂತಾದ ಜಿಡ್ಡಿನವು ಸೀದಾಗ ಉಂಟಾಗುವ ಕೆಟ್ಟ ವಾಸನೆ;

ಕರಟು–ಸೀಕಲಾಗು, ಕರಿಕಾಗು;

ಕ್ಷೀಣಿಸು–ಕುಗ್ಗು, ಕಡಿಮೆಯಾಗು;

ಘಮಲು–ಕಂಪಾದ, ಸುವಾಸನೆಯಿಂದ ಕೂಡಿದ;

ಚಿತ್ತ–ಮನಸ್ಸು;

ಜಡಿ–ಸುರಿ;

ತನ್ಮಯತೆ–ಸಂಪೂರ್ಣವಾಗಿ ಮಗ್ನವಾಗುವುದು;

ತಪ–ತಪಸ್ಸು;

ತಾಪ–ಬಿಸಿ, ಉಷ್ಣತೆ;

ಪಕ್ವ–ಹದವಾದ, ಚೆನ್ನಾಗಿ ಬೆಂದಿರುವ;

ಪಿತ್ತ–ಸಿಟ್ಟು, ಕೋಪ, ಮರುಳುತನ;

ಹದ–ಸರಿಯಾದ ಸ್ಥಿತಿ;

ಹಸುಕು–ಹಸಿಯಾಗಿರುವುದು, ಅರೆಬೆರೆ ಬೆಂದಿರುವುದು, ಕೆಟ್ಟವಾಸನೆ.

©KTBS Not to be republished

## ಅಭ್ಯಾಸ

**ಅ) ಕೆಳಗಿನ ಪ್ರಶ್ನೆಗಳಿಗೆ ಸೂಕ್ತ ಉತ್ತರ ಬರೆಯಿರಿ.**

೧. ಕವಯಿತ್ರಿಗೆ ಅಮ್ಮನ ಉಪದೇಶ ಯಾವಾಗ ನೆನಪಿಗೆ ಬರುತ್ತಿತ್ತು?

೨. ಬೆಣ್ಣೆ ಕಾಯಿಸಲು ಬೆಣ್ಣೆ ಮುದ್ದೆಯ ಮೂರರಷ್ಟು ದೊಡ್ಡ ಪಾತ್ರೆಯನ್ನು ಇಡಬೇಕು ಏಕೆ?

೩. ಬೆಣ್ಣೆ ಕಾಯುವ ಹದ ಹೆಚ್ಚು ಕಡಿಮೆಯಾದರೆ ಏನಾಗುತ್ತದೆ?

೪. ಹದವಾದ ತುಪ್ಪದ ಘಮಲು ಎಲ್ಲೆಡೆ ಯಾವಾಗ ಹರಡುತ್ತದೆ?

೫. ಕವಯಿತ್ರಿಯು ತುಪ್ಪ ಕಾಯಿಸುವಾಗ ಉಕ್ಕಿಸಿದ್ದೇ ಹೆಚ್ಚು ಏಕೆ?

೬. ಕಾಸಿದ ತುಪ್ಪ ಯಾವಾಗ ನಾಲ್ಕೇ ದಿನಕ್ಕೆ ಕೆಟ್ಟ ನಾಶವಾಗುತ್ತದೆ?

೭. ತುಪ್ಪ ಕಾಯುವಾಗ ಆಗುವ ಶಬ್ದವನ್ನು ಕವಯಿತ್ರಿ ಯಾವುದಕ್ಕೆ ಹೋಲಿಸಿದ್ದಾರೆ?

೮. 'ಅಮ್ಮನಾಗುವುದೆಂದರೆ' ಕವನದಲ್ಲಿ ಹೇಳಿರುವಂತೆ ಅಮ್ಮನಾಗುವುದು ಹೇಗೆ?

೯. ನಿಮ್ಮ ಅಮ್ಮನಿಂದ ನೀವು ಕಲಿತ ಕೆಲಸವನ್ನು ಕುರಿತು ಬರೆಯಿರಿ.

**ನಡೆವುದೊಂದೇ ಭೂಮಿ, ಕುಡಿವುದೊಂದೇ ನೀರು**
**ಸುಡುವಗ್ನಿಯೊಂದೇ ಇರಲು ಕುಲಗೋತ್ರ ನಡುವೆ ಎತ್ತಣದು ಸರ್ವಜ್ಞ**

*****

©KTBS Not to be republished

# ೬. ಯಾತಕ್ಕೆ ಮಳೆ ಹೋದವೊ

**– ಜನಪದ**

**ಪ್ರವೇಶ :** ಜೀವಿಗಳ ಅಳಿವು ಉಳಿವಿಗೆ ಅತಿ ಮುಖ್ಯವಾದುದು ಜೀವಧಾತುವಾದ ನೀರು. ಮನುಷ್ಯರು ಮಾತ್ರವಲ್ಲದೆ, ಪ್ರಾಣಿ ಹಾಗೂ ಸಸ್ಯಗಳು ಸಹ ನೀರನ್ನೇ ಅವಲಂಬಿಸಿವೆ. ನೀರಿಗೆ ಮೂಲಾಧಾರ ಮಳೆ. ಮಳೆ ಬಾರದೆ ಹೋದ ಸ್ಥಿತಿಯಲ್ಲಿ ಜನರು ಅನುಭವಿಸುವ ಕಷ್ಟವನ್ನು ಜನಪದರು ದೈನ್ಯದಿಂದ ಶಿವನಲ್ಲಿ ನಿವೇದಿಸಿಕೊಂಡಿದ್ದಾರೆ.

ಯಾತಕ್ಕೆ ಮಳೆ ಹೋದವೊ ಶಿವಶಿವ
ಲೋಕ ತಲ್ಲಣಿಸುತಾವೊ
ಬೇಕಿಲ್ಲದಿದ್ದರೆ ಬೆಂಕಿಯ ಮಳೆಸುರಿದು
ಉರಿಸಿ ಕೊಲ್ಲಲು ಬಾರದೆ ॥ ಯಾತಕ್ಕೆ ॥ ॥೧॥

ಹೊಟ್ಟೇಗೆ ಅನ್ನ ಇಲ್ಲದಲೆ
ನಡೆದರೆ ಜೋಲಿ ಹೊಡೆಯುತಲೆ
ಪಟ್ಟದಾನೆಯಂಥ ಸ್ತ್ರೀಯರು ಸೊರಗಿ
ಸೀರೆ ನಿಲ್ಲೋದಿಲ್ಲ ಸೊಂಟಾದಲೆ॥ ॥೨॥

ಹಸುಗೂಸು ಹಸಿವೀಗೆ ತಾಳದಲೆ
ಅಳುತಾವೆ ರೊಟ್ಟಿ ಕೇಳುತಲೆ
ಹಡೆದ ಬಾಣಂತಿಗೆ ಅನ್ನಾವು ಇಲ್ಲದಲೆ
ಏರುತಾವೆ ಮೊಳಕೈಗೆ ಬಳೆ॥ ॥೩॥

ಒಕ್ಕಲು ಮಕ್ಕಳಂತೆ ಅವರಿನ್ನು
ಮಕ್ಕಳನು ಮಾರುಂಡರು
ಮಕ್ಕಳನು ಮಾರುಂಡು ದುಃಖವನು ಮಾಡುತಾರೆ
ಮುಕ್ಕಣ್ಣ ಮಳೆ ಕರುಣಿಸೊ॥ ॥೪॥

©KTBS Not to be republished

## ಅಭ್ಯಾಸ

**ಅ) ಕೆಳಗಿನ ಪ್ರಶ್ನೆಗಳಿಗೆ ಸೂಕ್ತ ಉತ್ತರ ಬರೆಯಿರಿ.**

೧. ಲೋಕವು ತಲ್ಲಣಿಸುತ್ತಿದೆ ಏಕೆ?

೨. ಬೆಂಕಿಯ ಮಳೆ ಸುರಿಸಬಾರದೆ ಎಂದು ಜನಪದರು ಏಕೆ ಪರಮಾತ್ಮನಿಗೆ ಕೇಳುತ್ತಿದ್ದಾರೆ?

೩. ಮಳೆಯಿಲ್ಲದೆ ಸ್ತ್ರೀಯರು ಹೇಗೆ ಸೊರಗಿದ್ದಾರೆ?

೪. ಹಸುಗೂಸು ಮತ್ತು ಬಾಣಂತಿಯರ ಸ್ಥಿತಿಯನ್ನು ಜನಪದರು ಹೇಗೆ ವರ್ಣಿಸಿದ್ದಾರೆ?

೫. ಒಕ್ಕಲು ಮಕ್ಕಳ ದುಃಖಕ್ಕೆ ಕಾರಣವೇನು?

೬. ಮಳೆಯ ಪ್ರಾಮುಖ್ಯತೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

*****

©KTBS Not to be republished